24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 108 | ನವದೆಹಲಿ | ಬೆಲೆ ₹10 | ಅಕ್ಟೋಬರ್, 14, 2026, ಬುಧವಾರ

## ಜನ್ಮದಿನದ ಶುಭಾಶಯಗಳು

ಮಾನ್ಯತಾ ಟೆಕ್ ಪಾರ್ಕ್‌ನ ಸಮೂಹ ಸಂಸ್ಥೆಗಳ ಸಂಸ್ಥಾಪಕರು ಹಾಗೂ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಸನ್ಮಾನ್ಯ (14.10.2026)



# ಶ್ರೀ ರೆಡ್ಡಿ ವೀರಣ್ಣ



ಅವರಿಗೆ ಜನ್ಮದಿನದ ಶುಭಾಶಯಗಳು



**ಶುಭಕೋರುವವರು:**

ಮಾನ್ಯತಾ ಟೆಕ್ ಪಾರ್ಕ್‌ನ ಸಮೂಹ ಸಂಸ್ಥೆಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ, ಬೆಂಗಳೂರು

## ನಿತ್ಯ ಪಂಚಾಂಗ 14.10.2026 ಬುಧವಾರ



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ**

**ಆಶ್ವಯುಜ ಶುದ್ಧ, ಚೌತಿ, ಧನಿಷ್ಠ ನಕ್ಷತ್ರ, ವಿನಾಯಕೀ ಚತುರ್ಥಿ, ಮಳವಳ್ಳಿ ಉತ್ಸವ, ಹರಿಹರ ನೀಲಕಂಠಪ್ರಭು ಪುಣ್ಯದಿನ, ಭರತನೂರು ಗುರು ನಂಜೇಶ್ವರ ರಥ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಕೆಪಿಎಸ್‌ಸಿ ನೇಮಕಾತಿ ಹಗರಣ: ತನಿಖಾಧಿಕಾರಿಗಳು, ಎಸ್‌ಐಟಿಯಿಂದ ಅಲೋಕ್ ಕುಮಾರ್, ದಿವ್ಯಾ ಗೋಪಿನಾಥ್ ಬದಲಾವಣೆಗೆ ಸುಪ್ರೀಂ ಅಸ್ತು

### ಎರಡು ವಾರಗಳಲ್ಲಿ ಪರ್ಯಾಯ ಅಧಿಕಾರಿಗಳ ಹೆಸರು ಸಲ್ಲಿಸಲು ಕರ್ನಾಟಕ ಸರ್ಕಾರಕ್ಕೆ ಸೂಚನೆ



**ನವದೆಹಲಿ, ಅ.13:** ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಹಗರಣದ ತನಿಖೆಗಾಗಿ ರಚಿಸಲಾಗಿದ್ದ ವಿಶೇಷ ತನಿಖಾ ತಂಡದ ಮುಖ್ಯಸ್ಥ ಅಲೋಕ್ ಕುಮಾರ್ ಮತ್ತು ಸದಸ್ಯೆ ದಿವ್ಯಾ ಗೋಪಿನಾಥ್ ಅವರನ್ನು ಬದಲಿಸಲು ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ. ಇಬ್ಬರ ಬದಲಿಗೆ ಪರ್ಯಾಯ ಹಿರಿಯ ಪೊಲೀಸ್ ಅಧಿಕಾರಿಗಳ ಹೆಸರುಗಳನ್ನು ಎರಡು ವಾರಗಳೊಳಗೆ ಕರ್ನಾಟಕ ಹೈಕೋರ್ಟ್‌ಗೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಹೈಕೋರ್ಟ್ ರಚಿಸಿದ್ದ ಎಸ್‌ಐಟಿ ಕುರಿತು ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಹೊಸ ಅಧಿಕಾರಿಗಳ ನೇಮಕಾತಿಯನ್ನು ಅಂತಿಮಗೊಳಿಸುವ ಜವಾಬ್ದಾರಿಯನ್ನು ಹೈಕೋರ್ಟ್‌ಗೆ ವಹಿಸಿದೆ. ಉಭಯ ಪಕ್ಷಗಳ ವಾದಗಳನ್ನು ಆಲಿಸಿದ ಬಳಿಕ ಹೈಕೋರ್ಟ್ ಎಸ್‌ಐಟಿ ಸದಸ್ಯರನ್ನು ಅಂತಿಮ ಗೊಳಿಸಬೇಕು ಹಾಗೂ ತನಿಖೆಯ ಮೇಲ್ವಿಚಾರಣೆಯನ್ನೂ ಮುಂದುವರಿಸಬೇಕು ಎಂದು ಸೂಚಿಸಿದೆ.

**ಫೋನ್ ಕದ್ದಾಲಿಕೆ ಆರೋಪ ಪ್ರಸ್ತಾಪ**

ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿ, ಎಸ್‌ಐಟಿ ಮುಖ್ಯಸ್ಥರಾಗಿ ನೇಮಕಗೊಂಡಿದ್ದ ಅಲೋಕ್ ಕುಮಾರ್ ವಿರುದ್ಧ ಈ ಹಿಂದೆ ಕೇಳಿಬಂದಿದ್ದ ಫೋನ್ ಕದ್ದಾಲಿಕೆ ಆರೋಪಗಳನ್ನು ಪ್ರಸ್ತಾಪಿಸಿದರು. ಈ ಹಿನ್ನೆಲೆಯಲ್ಲಿ ಲಾಭೂರಾಮ್, ಚೇತನ್ ಸಿಂಗ್ ರಾಥೋಡ್ ಸೇರಿದಂತೆ ಐವರು ಪರ್ಯಾಯ ಅಧಿಕಾರಿಗಳ ಹೆಸರುಗಳನ್ನು ಸರ್ಕಾರ ಪರಿಗಣನೆಗೆ ನೀಡಿದೆ ಎಂದು ತಿಳಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅಭ್ಯರ್ಥಿಗಳ ಪರ ವಕೀಲರು, ಅಲೋಕ್ ಕುಮಾರ್ ಫೋನ್ ಕದ್ದಾಲಿಕೆ ಪ್ರಕರಣದಿಂದ ಈಗಾಗಲೇ ಮುಕ್ತರಾಗಿದ್ದಾರೆ ಎಂದು ವಾದಿಸಿದರು. ಇದೇ ಸರ್ಕಾರ ಅವರಿಗೆ ಡಿಜಿಪಿ ಹುದ್ದೆಗೆ ಬಡ್ತಿ ನೀಡಿ, ರಾಷ್ಟ್ರಪತಿ ಪದಕಕ್ಕೂ ಶಿಫಾರಸು ಮಾಡಿತ್ತು ಎಂದು ಉಲ್ಲೇಖಿಸಿದರು. ಸರ್ಕಾರ ತನ್ನ ಅನುಕೂಲಕ್ಕೆ ತಕ್ಕ ಅಧಿಕಾರಿಗಳನ್ನು ನೇಮಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ ಅವರು, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿದರು.

**ಹಿರಿಯ ಅಧಿಕಾರಿಗಳೇ ತನಿಖೆ ನಡೆಸಲಿ**

ವಾದಗಳನ್ನು ಆಲಿಸಿದ ನ್ಯಾಯಪೀಠ, ಕೆಪಿಎಸ್‌ಸಿಯ ಉನ್ನತ ಅಧಿಕಾರಿಗಳ ವಿರುದ್ಧವೇ ತನಿಖೆ ನಡೆಯಬೇಕಿರುವುದರಿಂದ ಎಸ್‌ಐಟಿಗೆ ಹಿರಿಯ ಶ್ರೇಣಿಯ ಪೊಲೀಸ್ ಅಧಿಕಾರಿಯ ನೇತೃತ್ವ ಅಗತ್ಯ ಎಂದು ಅಭಿಪ್ರಾಯಪಟ್ಟಿತು. ಡಿಜಿಪಿ ಬದಲಿಗೆ ಎಡಿಜಿಪಿ ಅಥವಾ ಅದಕ್ಕಿಂತ ಕೆಳಗಿನ ಶ್ರೇಣಿಯ ಅಧಿಕಾರಿಯನ್ನು ನೇಮಿಸುವುದು ಸೂಕ್ತವಲ್ಲ ಎಂದು ತಿಳಿಸಿತು.

ರಾಜ್ಯದ ಪೊಲೀಸ್ ಅಧಿಕಾರಿಗಳ ಸಾಮರ್ಥ್ಯ ಮತ್ತು ಅನುಭವದ ಬಗ್ಗೆ ರಾಜ್ಯ ಸರ್ಕಾರ ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ಹೆಚ್ಚಿನ ಮಾಹಿತಿ ಇರುವುದರಿಂದ ಸೂಕ್ತ ಅಧಿಕಾರಿಗಳ ಹೆಸರುಗಳನ್ನು ಅವರೇ ಸೂಚಿಸಲಿ ಎಂದು ನ್ಯಾಯಪೀಠ ಹೇಳಿತು. ಸಿಬಿಐ ತನಿಖೆ ಬಯಸುವವರು ಅದಕ್ಕಾಗಿ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು ಅಥವಾ ಹೈಕೋರ್ಟ್‌ಗೆ ಮರಳಬೇಕು ಎಂದೂ ಸ್ಪಷ್ಟಪಡಿಸಿತು.

**ತನಿಖೆಗೆ ಸಂಬಂಧಿಸಿದ ಪ್ರಮುಖ ನಿರ್ದೇಶನಗಳು**

ಅಲೋಕ್‌ಕುಮಾರ್ ಮತ್ತು ದಿವ್ಯಾ ಗೋಪಿನಾಥ್ ಬದಲಿಗೆ ಪರ್ಯಾಯ ಅಧಿಕಾರಿಗಳ ಹೆಸರುಗಳನ್ನು ಎರಡು ವಾರಗಳಲ್ಲಿ ಹೈಕೋರ್ಟ್‌ಗೆ ಸಲ್ಲಿಸಬೇಕು. ಹೈಕೋರ್ಟ್ ಎರಡೂ ಕಡೆಯ ವಾದಗಳನ್ನು ಆಲಿಸಿ ಎಸ್‌ಐಟಿ ತಂಡವನ್ನು ಅಂತಿಮ ಗೊಳಿಸಬೇಕು. ತನಿಖೆಯ ಮೇಲ್ವಿಚಾರಣೆಯನ್ನು ನ್ಯಾಯಾಲಯವೇ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

ಇದಲ್ಲದೆ, ಪ್ರಕರಣದ ತನಿಖೆಯನ್ನು ಮರುಆರಂಭಿಸುವ ಅಥವಾ ಮೊದಲಿನಿಂದ ಹೊಸ ತನಿಖೆ ನಡೆಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ಎಸ್‌ಐಟಿ ತಂಡ ಅಂತಿಮ ಗೊಳ್ಳುವವರೆಗೆ ಅಪರಾಧ ತನಿಖಾ ಇಲಾಖೆ (ಸಿಐಡಿ) ದೋಷಾರೋಪ ಪಟ್ಟಿ ಸಲ್ಲಿಸಬಾರದು ಎಂದೂ ನಿರ್ದೇಶನ ನೀಡಿದೆ.

ಈ ಪ್ರಕರಣವು ಕೆಪಿಎಸ್‌ಸಿಯ ಪಶುವೈದ್ಯಾಧಿಕಾರಿಗಳ ನೇಮಕಾತಿ ಸೇರಿದಂತೆ ಇತರ ನೇಮಕಾತಿಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದೆ. ನೇಮಕಾತಿ ಪ್ರಕ್ರಿಯೆಯಲ್ಲಿನ ಆರೋಪಗಳ ಕುರಿತು ತನಿಖೆ ಮುಂದುವರಿಯಬೇಕಿದ್ದು, ಮುಂದಿನ ಹಂತದಲ್ಲಿ ಎಸ್‌ಐಟಿಯ ರಚನೆ ಮತ್ತು ತನಿಖೆಯ ಮೇಲ್ವಿಚಾರಣೆಯಲ್ಲಿ ಹೈಕೋರ್ಟ್ ಪ್ರಮುಖ ಪಾತ್ರ ವಹಿಸಲಿದೆ.

# ಸ್ಟಿಂಗ್ ಅಪರೇಷನ್: ಶೀಘ್ರ ಬಯಲಾಗಲಿದೆ ಪ್ರತಿಪಕ್ಷಗಳ ಷಡ್ಯಂತ್ರ

### ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೆ ಹತಾಶೆ: ಸಚಿವ ಶಿವರಾಜ್ ತಂಗಡಗಿ



ಬೆಂಗಳೂರು: ಅ.13: ತಮ್ಮ ವಿರುದ್ಧ ನಡೆದಿದೆ ಎನ್ನಲಾದ ಕುಟುಕು ಕಾರ್ಯಾಚರಣೆ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಪ್ರತಿಕ್ರಿಯಿಸಿದ್ದು, ಇಂದಲ್ಲ, ನಾಳೆ ಪ್ರತಿಪಕ್ಷಗಳ ಷಡ್ಯಂತ್ರ ಬಯಲಾಗಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್. ಎಸ್. ತಂಗಡಗಿ ಖಾರವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಸಹಿಸಲಾಗದೆ ಪ್ರತಿಪಕ್ಷದ ನಾಯಕರು ಹತಾಶೆ ಮತ್ತು ಅಸೂಯೆಯಿಂದ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ ಎಂದಿದ್ದಾರೆ.

ಸಿದ್ದರಾಮಯ್ಯ ಹೆಸರಿಗೆ ಧಕ್ಕೆ ತರಲು ಸ್ಟಿಂಗ್ ಆಪರೇಷನ್ ನಡೆಸಲಾಗಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಅವರಷ್ಟೇ ಅಲ್ಲ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕಂಡರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನಿದ್ರೆ ಇಲ್ಲದಂತಾಗಿದೆ. ನಮ್ಮಲ್ಲಿಯೇ ಭಿನ್ನಾಭಿಪ್ರಾಯ ಮೂಡಿಸಿ ಬೆಂಕಿ ಹಚ್ಚುವ ಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರದ ವಿರುದ್ಧ ಆರೋಪ ಮಾಡುವ ಅವಕಾಶಕ್ಕಾಗಿ ಪ್ರತಿಪಕ್ಷಗಳು ಕಾಯುತ್ತಿವೆ. ಹೀಗಾಗಿ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ರಾಜಕೀಯದಲ್ಲಿ ವಿರೋಧಿಗಳು ಇರುವುದು ಸಹಜ. ಆದರೆ ಎದುರಾಳಿಗಳು ಉತ್ತಮ ಕೆಲಸ ಮಾಡಿದಾಗ ಅದನ್ನು ಪ್ರಶಂಸಿಸುವ ಮನೋಭಾವ ಇರಬೇಕು. ತಾವು ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗದವರು, ಈಗ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಸಚಿವ ತಂಗಡಗಿ ಟೀಕಿಸಿದರು.

**ವೈಯಕ್ತಿಕ ಅನುಭವವಾಗಿಲ್ಲ**

ತಮಗೆ ಯಾವುದೇ ಸ್ಟಿಂಗ್ ಆಪರೇಷನ್ ಬಗ್ಗೆ ವೈಯಕ್ತಿಕ ಅನುಭವವಾಗಿಲ್ಲ. ಮಾಧ್ಯಮದ ಸ್ನೇಹಿತರು ಈ ಕುರಿತು ಹೇಳುತ್ತಿರುವ ವಿಚಾರಗಳು ತಮಗೆ ಹೊಸ ಅನುಭವ ವಾಗಿವೆ. ತಾವು ಯಾರನ್ನೂ ಅನುಮಾನದಿಂದ ನೋಡುವುದಿಲ್ಲ. ಮಾಧ್ಯಮದ ಸ್ನೇಹಿತರು ಯಾವಾಗ ಬಂದರೂ ನಿರಾಳವಾಗಿ ಮಾತನಾಡಲು ಸಿದ್ಧರಿದ್ದೇನೆ ಎಂದು ಮಾರ್ಮಿಕವಾಗಿ ಹೇಳಿದರು.



ಸಮಾಜ ಕಲ್ಯಾಣ ಸಚಿವ ಕೆ.ಎಚ್.ಮುನಿಯಪ್ಪ ಮಂಗಳವಾರ ನವದೆಹಲಿಯಲ್ಲಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರನ್ನು ಭೇಟಿಮಾಡಿ, ಮೈಸೂರಿನಲ್ಲಿ ನಡೆಯಲಿರುವ ದಸರಾ ಉತ್ಸವಕ್ಕೆ ಆಹ್ವಾನಿಸಿದರು. ಈ ಸಂದರ್ಭದಲ್ಲಿ ನವದೆಹಲಿಯ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಮತ್ತು ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಹಾಜರಿದ್ದರು.

# ಸ್ಟಿಂಗ್ ಆಪರೇಷನ್ ಪ್ರಸಾರದ ತಡೆಯಾಜ್ಞೆಗೆ ಸಿದ್ದರಾಮಯ್ಯ ದೂರು

**ಬೆಂಗಳೂರು, ಅ.13:** ಕಳೆದ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣಗಳ ವಿವಿಧ ವೇದಿಕೆಗಳಲ್ಲಿ ಹರಿದಾಡುತ್ತಿರುವ ಸ್ಟಿಂಗ್ ಆಪರೇಷನ್ ವಿಡಿಯೋಗೆ ನನ್ನ ಹೆಸರನ್ನು ಜೋಡಿಸಿ ಅಪಪ್ರಚಾರ ನಡೆಯುತ್ತಿರುವುದನ್ನು ಗಮನಿಸಿದ್ದೇನೆ. ಇದು ಸ್ಪಷ್ಟವಾಗಿ ರಾಜಕೀಯ ದುರುದ್ದೇಶದಿಂದ ನನ್ನ ಚಾರಿತ್ರ್ಯಹನನ ಮಾಡುವ ಪ್ರಯತ್ನದಂತೆ ಕಾಣುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಈ ಸ್ಟಿಂಗ್ ಆಪರೇಷನ್ ವಿಡಿಯೋಗೂ ನನಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಇದನ್ನು ಬಳಸಿಕೊಂಡು ಕೆಲವು ಕಿಡಿಗೇಡಿಗಳು ನನ್ನ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆ.

ಈ ಹಿನ್ನೆಲೆಯಲ್ಲಿ ನನ್ನ ಹೆಸರಿನ ಉಲ್ಲೇಖ ಇರುವ ಈ ಸ್ಟಿಂಗ್ ಆಪರೇಷನ್ ವಿಡಿಯೋ ಅನ್ನು ಯಾವುದೇ ಪತ್ರಿಕೆ, ಚಾನಲ್ ಇಲ್ಲವೇ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಣೆ ಇಲ್ಲವೇ ಪ್ರಸಾರ ಮಾಡದಂತೆ ತಡೆನೀಡಬೇಕು ಎಂದು ಕೋರಿ ಬೆಂಗಳೂರು ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಾಗಿ ಹೇಳಿದ್ದಾರೆ.

ಈ ವಿಷಯದಲ್ಲಿ ನಾನು ಸಂಪೂರ್ಣ ನಿರಪರಾಧಿ ಎನ್ನುವುದು ನನ್ನ ಆತ್ಮಸಾಕ್ಷಿಗೆ ತಿಳಿದಿದೆ.

ನಾನು ಸಂಪೂರ್ಣವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಇರುವವನು. ಇಲ್ಲಿಯ ವರೆಗಿನ ನನ್ನ ರಾಜಕೀಯ ಜೀವನದಲ್ಲಿ ನಾನೆಂದೂ ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಪಡಿಸಿದವನಲ್ಲ. ಆದರೆ ಕೆಲವು ಮಾಧ್ಯಮಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ ನಡೆಸುತ್ತಿರುವ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ನ್ಯಾಯಾಲಯದ ಮೂಲಕ ಪ್ರಕಟಣೆ–ಪ್ರಸಾರಕ್ಕೆ ತಡೆಯಾಜ್ಞೆ ತರಬೇಕಾದ ಪ್ರಸಂಗ ಬಂದಿದೆ. ಈ ಬಗ್ಗೆ ನನಗೆ ವಿಷಾದವಿದೆ. ಈ ಸ್ಟಿಂಗ್ ಆಪರೇಷನ್ ವಿಡಿಯೋ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸುವಂತೆ ನಾನು ಈಗಾಗಲೇ ನಗರ ಪೊಲೀಸ್ ಆಯುಕ್ತರಿಗೂ ದೂರು ನೀಡಿದ್ದೇನೆ. ಎಂದಿದ್ದಾರೆ.

# ಸ್ಟಿಂಗ್ ಆಪರೇಷನ್: ಸಿಬಿಐ ತನಿಖೆಗೆ ಎಚ್.ಡಿ.ಕುಮಾರಸ್ವಾಮಿ ಆಗ್ರಹ



ಬೆಂಗಳೂರು, ಅ.13: ಕರ್ನಾಟಕದಲ್ಲಿ ಸ್ಟಿಂಗ್ ಆಪರೇಷನ್ ಆರೋಪದ ಸುತ್ತ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ರಾಜ್ಯದ ರಾಜಕೀಯ ಸಂಸ್ಕೃತಿಯನ್ನು ಕಲುಷಿತಗೊಳಿಸುತ್ತಿವೆ ಎಂದು ಆರೋಪಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಪ್ರಕರಣದ ಕುರಿತು ಪಾರದರ್ಶಕ ತನಿಖೆ ನಡೆಸಿ ಸತ್ಯಾಂಶವನ್ನು ಬಹಿರಂಗಪಡಿಸಬೇಕು. ಇದಕ್ಕಾಗಿ ಪ್ರಕರಣವನ್ನು ಕೇಂದ್ರ ತನಿಖಾ ದಳಕ್ಕೆ (ಸಿಬಿಐ) ವಹಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಸಂಬಂಧ ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡಲಿದ್ದೇನೆ ಎಂದೂ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲ, ಕಬ್ಬಿನ ಬೆಲೆ, ರೈತರ ಸಮಸ್ಯೆಗಳು, ಬಿಡದಿ ಟೌನ್‌ಶಿಪ್ ಮತ್ತು ನೈಸ್ ಯೋಜನೆ ಸೇರಿದಂತೆ ಹಲವು ಪ್ರಮುಖ ವಿಚಾರಗಳಿದ್ದರೂ, ಅವುಗಳನ್ನೆಲ್ಲ ಹಿಂದಿಕ್ಕಿ ಸ್ಟಿಂಗ್ ಆಪರೇಷನ್ ವಿವಾದವೇ ರಾಜಕೀಯ ಚರ್ಚೆಯ ಕೇಂದ್ರಬಿಂದುವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಂಬಂಧಿಸಿದ ಸ್ಟಿಂಗ್ ಆಪರೇಷನ್ ವಿಚಾರವನ್ನು ಪ್ರಸ್ತಾಪಿಸಿದ ಕುಮಾರಸ್ವಾಮಿ, ಈ ಕಾರ್ಯಾಚರಣೆಯ ಹಿಂದೆ ಯಾರಿದ್ದಾರೆ, ಅದನ್ನು ಯಾರು ನಡೆಸಿದ್ದಾರೆ ಮತ್ತು ಅದರ ಉದ್ದೇಶವೇನು ಎಂಬುದನ್ನು ತನಿಖೆಯಿಂದ ಪತ್ತೆಹಚ್ಚಬೇಕು. ಈ ವಿಚಾರದಲ್ಲಿ ತಮಗೆ ನೇರ ಮಾಹಿತಿ ಇಲ್ಲದ ಕಾರಣ ತನಿಖೆಗೆ ಆಗ್ರಹಿಸುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ನನ್ನ ಬಳಿ ಪೊಲೀಸ್ ವ್ಯವಸ್ಥೆ ಇಲ್ಲ. ಸ್ಟಿಂಗ್ ಆಪರೇಷನ್ ಯಾರು ಮಾಡಿಸಿದ್ದಾರೆ ಎಂಬುದನ್ನು ಪತ್ತೆಹಚ್ಚಲು ತನಿಖೆ ನಡೆಸಿ ಎಂದು ಹೇಳುತ್ತಿದ್ದೇನೆ. ಮುಖ್ಯಮಂತ್ರಿಯವರು ತಾವು ಸರಿಯಾದ ಕೆಲಸ ಮಾಡುತ್ತಿದ್ದೇವೆ ಎಂದು ಭಾವಿಸಿದ್ದರೆ ತನಿಖೆಗೆ ಅವಕಾಶ ನೀಡಲಿ ಎಂದರು.

ನಾನು ನೋವಿನಿಂದ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಮುಖ್ಯಮಂತ್ರಿಯವರ ಕುರ್ಚಿಯನ್ನು ಎಳೆದ ಘಟನೆ ಕುರಿತು ಮಾತನಾಡುವುದಿಲ್ಲ. ಆದರೆ ಇದೇ ರೀತಿ ಮುಂದುವರಿದರೆ, ಕುರ್ಚಿಯನ್ನೇ ಎಳೆದು ಹಾಕುವ ಕಾಲವೂ ದೂರವಿಲ್ಲ.ರಾಜ್ಯದಲ್ಲಿ ಅಧಿಕಾರ, ರಾಜಕೀಯ ಪ್ರಭಾವ ಮತ್ತು ಪರಸ್ಪರ ಆರೋಪ–ಪ್ರತ್ಯಾರೋಪಗಳ ಮೂಲಕ ನಾಯಕರನ್ನು ಗುರಿಯಾಗಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಇಂತಹ ಬೆಳವಣಿಗೆಗಳಿಗೆ ಅಂತ್ಯ ಹಾಡುವ ಅಗತ್ಯವಿದೆ ಎಂದು ಅವರು ಹೇಳಿದರು.

**ಸಿದ್ದರಾಮಯ್ಯ ಧ್ವನಿ ಎತ್ತಬೇಕು**

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ, ಪ್ರಸ್ತುತ ಬೆಳವಣಿಗೆಗಳ ಬಗ್ಗೆ ಅವರು ಮೌನವಾಗಿರಬಾರದು. ಸಿದ್ದರಾಮಣ್ಣ ಯಾಕೆ ಹೆದರಬೇಕು, ಯಾಕೆ ಸ್ಟೇ ತೆಗೆದುಕೊಳ್ಳಬೇಕು, ನಿಮ್ಮ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನವಾಗುತ್ತಿದ್ದರೆ ನೀವು ಹಿಂದೆ ಹೇಗೆ ಗಟ್ಟಿಯಾಗಿ ಮಾತನಾಡುತ್ತಿದ್ದಿರೋ ಹಾಗೆಯೇ ಈಗಲೂ ಮಾತನಾಡಬೇಕು ಎಂದು ಎಚ್‌ಡಿಕೆ ಮನವಿ ಮಾಡಿದರು.

# ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗಳ ರಕ್ಷಣೆಗೆ ರಾಜ್ಯ ಸರ್ಕಾರ ಬದ್ಧ

**ಬೆಂಗಳೂರು, ಅ.13;** ಆಜಾದ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವ ಯು.ಟಿ. ಖಾದರ್ ಅವರು, ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗಳನ್ನು ಕಾಪಾಡಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಅವಧಿಯನ್ನು ವಿಸ್ತರಿಸುವಂತೆ ಕೋರಿ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಪತ್ರ ಬರೆಯಲಾಗುವುದು. ಇದರಿಂದ ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಹೆಚ್ಚಿನ ಅವಕಾಶಗಳು ದೊರೆಯಲಿವೆ ಎಂದು ಅವರು ಹೇಳಿದರು.

ಕಳೆದ ವರ್ಷ ಆರ್ಥಿಕವಾಗಿ ದುರ್ಬಲವಾಗಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ನೆರವಾಗುವ ಉದ್ದೇಶದಿಂದ KSOU ಸಹಯೋಗದಲ್ಲಿ ಶುಲ್ಕ ಪಾವತಿ ಯೋಜನೆಯನ್ನು ಆರಂಭಿಸಲಾಗಿತ್ತು. ಪ್ರತಿಯೊಂದು ವಿದ್ಯಾರ್ಥಿವೇತನ ಮತ್ತು ಶೈಕ್ಷಣಿಕ ನೆರವು ಯೋಜನೆಗೆ ತನ್ನದೇ ಆದ ಷರತ್ತುಗಳು, ಅರ್ಹತಾ ಮಾನದಂಡಗಳು ಹಾಗೂ ಅನುದಾನದ ಮಿತಿಗಳಿರುತ್ತವೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಕಳೆದ ವರ್ಷ ಈ ಯೋಜನೆಯಡಿ 5,328 ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ಪಾವತಿಸಲಾಗಿತ್ತು. 2026–27ನೇ ಶೈಕ್ಷಣಿಕ ಸಾಲಿನಲ್ಲಿ ಸ್ವೀಕರಿಸಲಾದ 12,108 ಅರ್ಜಿಗಳನ್ನು ಪರಿಶೀಲಿಸಿದ ಬಳಿಕ, ಲಭ್ಯವಿದ್ದ 5 ಕೋಟಿ ಅನುದಾನದ ಮಿತಿಯೊಳಗೆ ಕೋರ್ಸ್ ಮತ್ತು ವರ್ಗವಾರು ಅರ್ಹತೆ ಹಾಗೂ ಮೆರಿಟ್ ಆಧಾರದ ಮೇಲೆ 2,758 ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿ ಸೌಲಭ್ಯ ಒದಗಿಸಲಾಗಿದೆ ಎಂದು ತಿಳಿಸಿದರು.



2026–27ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಸರ್ಕಾರ ಒಟ್ಟು 15 ಕೋಟಿ ಅನುದಾನ ಮೀಸಲಿಟ್ಟಿದೆ. ಇದರಲ್ಲಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಶಿಕ್ಷಣ ಮುಂದುವರಿಸಲು 10 ಕೋಟಿ ಹಾಗೂ ಹೊಸದಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗಾಗಿ 5 ಕೋಟಿ ಮೀಸಲಿಡಲಾಗಿದೆ ಎಂದು ಸಚಿವರು ವಿವರಿಸಿದರು.

ಪ್ರಸ್ತುತ ಈ ಯೋಜನೆಯಡಿ ಒಟ್ಟು 8,086 ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ಇನ್ನೂ ಹೆಚ್ಚಿನ ವಿದ್ಯಾರ್ಥಿಗಳಿಗೆ ನೆರವು ಒದಗಿಸಲು ಹೆಚ್ಚುವರಿ ಅನುದಾನದ ಅಗತ್ಯವಿದ್ದು, ಈ ಕುರಿತು ಹಣಕಾಸು ಇಲಾಖೆಯೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಸನ್ಮಾನ್ಯ ಸಚಿವ ಯು.ಟಿ.ಖಾದರ್ ಅವರು ತಿಳಿಸಿದರು.

ಪದವಿ ಪೂರ್ಣಗೊಳಿಸಿದ ಬಳಿಕ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಅರ್ಜಿಗಳನ್ನೂ ಪರಿಶೀಲಿಸಲಾಗುವುದು. ಉದಾಹರಣೆಗೆ, ಬಿಎ ನಂತರ ಎಂಎ, ಬಿಎಸ್ಸಿ ನಂತರ ಎಂಎಸ್ಸಿ, ಬಿಸಿಎ ನಂತರ ಎಂಸಿಎ ಹಾಗೂ ಬಿಕಾಂ ನಂತರ ಎಂಕಾಂ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುವುದು. ನಿಗದಿತ ನಿಯಮಗಳು ಮತ್ತು ಮಾರ್ಗಸೂಚಿಗಳ ಪ್ರಕಾರ ಅರ್ಹ ವಿದ್ಯಾರ್ಥಿಗಳಿಗೆ ನೆರವು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಈ ಯೋಜನೆಯಡಿ 13,000ಕ್ಕೂ ಹೆಚ್ಚು ಅರ್ಜಿಗಳು ಸ್ವೀಕರಿಸಲ್ಪಟ್ಟಿವೆ. ಎಲ್ಲಾ ಅರ್ಹ ವಿದ್ಯಾರ್ಥಿಗಳ ಶುಲ್ಕ ಪಾವತಿಸಲು ಅಂದಾಜು 30 ಕೋಟಿ ಅಗತ್ಯವಿದೆ. ಅಲ್ಲದೆ, ಈ ಯೋಜನೆಯಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮೂರು ವರ್ಷಗಳವರೆಗೆ ಶುಲ್ಕ ಪಾವತಿಸುವ ಜವಾಬ್ದಾರಿಯೂ ಸರ್ಕಾರದ ಮೇಲಿದೆ ಎಂದು ಸಚಿವರು ವಿವರಿಸಿದರು.

ವಿಶ್ವವಿದ್ಯಾಲಯವು ಪ್ರವೇಶಾತಿ ಅವಧಿಯನ್ನು ವಿಸ್ತರಿಸದಿದ್ದಲ್ಲಿ, ಮುಂದಿನ ಜನವರಿಯಲ್ಲಿ ಆರಂಭವಾಗುವ ಪ್ರವೇಶಾತಿಯ ಮತ್ತೊಂದು ಸುತ್ತಿನಲ್ಲಿ ಸೂಕ್ತ ನಿಯಮಗಳು ಮತ್ತು ಮಾರ್ಗಸೂಚಿಗಳೊಂದಿಗೆ ಈ ಯೋಜನೆಯನ್ನು ಜಾರಿಗೊಳಿಸಲು ಪ್ರಯತ್ನಿಸಲಾಗುವುದು ಎಂದು ಸಚಿವರು ತಿಳಿಸಿದರು.

## ನಿಧನ ವಾರ್ತೆ

# ಒಕ್ಕಲಿಗರ ಸಂಘ ಮಹಾರಾಷ್ಟ್ರ ಘಟಕದ ಮಾಜಿ ಅಧ್ಯಕ್ಷ ಕೆ.ರಾಜೇಗೌಡ ನಿಧನ



**ಮುಂಬಯಿ, ಅ.13:** ಒಕ್ಕಲಿಗರ ಸಂಘ ಮಹಾರಾಷ್ಟ್ರ (ರಿ.) ಇದರ ಮಾಜಿ ಅಧ್ಯಕ್ಷ ಒಕ್ಕಲಿಗ ಸಂಘ ಮಹಾರಾಷ್ಟ್ರ ಸಂಚಾಲಕತ್ವದ ಜಯಲಕ್ಷ್ಮೀ ಕೋ.ಆಪರೇಟಿವ್ ಕ್ರೆಡಿಟ್ ಸೊಸೈಟಿ ಇದರ ಮಾಜಿ ಕಾರ್ಯಾಧ್ಯಕ್ಷ ಕೆ. ರಾಜೇಗೌಡ (79.) ಇವರು ಅಲ್ಪಕಾರದ ಅಸೌಖ್ಯದಿಂದ ಕಳೆದ ಸೋಮವಾರ (ಅ.12) ಸಂಜೆ ತನ್ನ ಸ್ವಗೃಹ ಮುಲುಂಡ್ ಪಶ್ಚಿಮದ ಎಲ್.ಬಿ.ಎಸ್ ಮಾರ್ಗನಲ್ಲಿನ ರುನಾವಾಲ್ ಹೈಟ್ಸ್‌ನ ನಿವಾಸದಲ್ಲಿ ನಿಧನರಾದರು.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕು ಅಲ್ಲಿನ ಕಳ್ಳಿನಕೆರೆ ಮೂಲತಃ ರಾಜೇಗೌಡ ಇವರು ಬೃಹನ್ಮುಂಬಯಿಯಲ್ಲಿ ಐದೂವರೆ ದಶಕಗಳಿಗಿಂತಲೂ ಮಿಕ್ಕಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಒಕ್ಕಲಿಗರ ಸಂಘದ ಸ್ಥಾಪಕ ಗೌರವ ಪ್ರಧಾನ ಕಾರ್ಯದರ್ಶಿಯಾಗಿದ್ದು, ಜಯಲಕ್ಷ್ಮೀ ಕ್ರೆಡಿಟ್ ಸೊಸೈಟಿಯ ಸ್ಥಾಪಕ ನಿರ್ದೇಶಕರಾಗಿ, ಗೌರವ ಕೋಶಾಧಿಕಾರಿ, ಗೌರವ ಕಾರ್ಯದರ್ಶಿಯಾಗಿ ಕರ್ಮಭೂಮಿ ಮುಂಬಯಿಯಲ್ಲಿನ ಕನ್ನಡಿಗರ ಧ್ವನಿಯಾಗಿ ಸೇವಾ ನಿರತರಾಗಿದ್ದರು.

ವಿಷಯ ತಿಳಿದ ಕರ್ನಾಟಕ ಸರ್ಕಾರದ ಮಾಜಿ ಸಚಿವ, ಒಕ್ಕಲಿಗರ ಸಂಘ ಮಹಾರಾಷ್ಟ್ರ (ರಿ.) ಇದರ ಸಂಸ್ಥಾಪಕ ಅಧ್ಯಕ್ಷ ಹಾಗೂ ಜಯಲಕ್ಷ್ಮೀ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಸ್ಥಾಪಕ ಕಾರ್ಯಾಧ್ಯಕ್ಷ ಡಾ। ಕೆ.ಸಿ ನಾರಾಯಣ ಗೌಡ ಅವರು ತಕ್ಷಣವೇ ಮೃತರ ನಿವಾಸಕ್ಕೆ ತೆರಳಿ ದಿವಂಗತರ ಆತ್ಮಕ್ಕೆ ಸದ್ಗತಿ, ಚಿರಶಾಂತಿ ಸಿಗಲಿ ಹಾಗೂ ಈ ಅಪಾರ ದುಃಖವನ್ನು ಭರಿಸುವ ಶಕ್ತಿ ಮತ್ತು ಧೈರ್ಯವನ್ನು ಅವರ ಕುಟುಂಬಕ್ಕೆ ದೇವರು ಕರುಣಿಸಲಿ ಎಂದು ಪ್ರಾರ್ಥಿಸಿದರು. ಅಂತೆಯೇ ಉಭಯ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಸದಸ್ಯರನೇಕರು ಪಾರ್ಥೀವ ಶರೀರದ ಅಂತಿಮ ದರ್ಶನಗೈದು ಶ್ರದ್ಧಾಂಜಲಿ ಸಲ್ಲಿಸಿದರು.

ಮೃತರು ಪತ್ನಿ ಅನುಸೂಯ ಆರ್.ಗೌಡ (ಜಯಲಕ್ಷ್ಮೀ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಇದರ ನಿರ್ದೇಶಕಿ), ಸುಪುತ್ರ, ಸುಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಂಗಳವಾರ ಮಧ್ಯಾಹ್ನ ಭಾಂಡೂಪ್ ಸೋನಾಪುರ ಇಲ್ಲಿನ ಚಿತಾಗಾರದಲ್ಲಿ ನೆರವೇರಿಸಲ್ಪಟ್ಟಿತು.

# ಬರಗಾಲ ಕಾಡುತ್ತಿದ್ದರೂ ರೈತರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ: ಪ್ರತಿಪಕ್ಷ ನಾಯಕ ಅಶೋಕ್ ವಾಗ್ದಾಳಿ

**ಬೆಂಗಳೂರು, ಅ.13:** ರಾಜ್ಯದಲ್ಲಿ ಬರಗಾಲ ಕಾಡುತ್ತಿದ್ದರೂ ಕಾಂಗ್ರೆಸ್ ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಬರ ನಿರ್ವಹಣೆ, ರೈತರಿಗೆ ಪರಿಹಾರ ವಿತರಣೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ ಸ್ಟಿಂಗ್ ಆಪರೇಷನ್ ವಿವಾದದ ಕುರಿತು ಸರ್ಕಾರದ ವಿರುದ್ಧ ಹಲವು ಆರೋಪಗಳನ್ನು ಮಾಡಿದರು. ರಾಜ್ಯದಲ್ಲಿ ಬರಗಾಲದ ಸಮಸ್ಯೆ ಗಂಭೀರವಾಗಿದ್ದರೂ ಸರ್ಕಾರದ ಗಮನ ಬೇರೆಡೆಗೆ ಹೋಗಿದೆ. ರೈತರಿಗೆ ನೆರವು ನೀಡುವ ಬದಲು ಸ್ಟಿಂಗ್ ಆಪರೇಷನ್ ಮತ್ತು ಸಿ.ಡಿ ವಿವಾದದಲ್ಲೇ ಸರ್ಕಾರ ಮುಳುಗಿದೆ ಎಂದು ಅಶೋಕ್ ಟೀಕಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಸಮಸ್ಯೆಗಳಿಗಿಂತ ದೆಹಲಿಯ ರಾಜಕೀಯ ಚಟುವಟಿಕೆಗಳಿಗೆ ಹೆಚ್ಚಿನ ಸಮಯ ನೀಡುತ್ತಿದ್ದಾರೆ ಎಂದೂ ಆರೋಪಿಸಿದರು.

**217 ತಾಲೂಕುಗಳಲ್ಲಿ ಬರ, 46 ಸಾವಿರ ಕೋಟಿ ನಷ್ಟದ ಆರೋಪ**



ರಾಜ್ಯದ 217 ತಾಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿದ್ದು, ಕೃಷಿ ಕ್ಷೇತ್ರಕ್ಕೆ ಸುಮಾರು 46 ಸಾವಿರ ಕೋಟಿ ನಷ್ಟವಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದ ನಷ್ಟ ಸಂಭವಿಸಿದ್ದರೂ ಸರ್ಕಾರ ಸುಮಾರು 1,200 ಕೋಟಿ ಮಾತ್ರ ಪರಿಹಾರವಾಗಿ ನೀಡಿದೆ. ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಹಲವು ಕಡೆ ಕೊಳವೆಬಾವಿಗಳಲ್ಲಿ ನೀರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಜನರಿಗೆ ಕುಡಿಯುವ ನೀರು ಒದಗಿಸುವುದಕ್ಕೂ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ರೈತರಿಗೆ ನೀಡುತ್ತಿರುವ 2,500ರ ನೆರವು ಸಾಕಾಗುವುದಿಲ್ಲ. ಬರಗಾಲದ ಕುರಿತು ಸರ್ಕಾರ ಶ್ವೇತಪತ್ರ ಹೊರಡಿಸಬೇಕು ಮತ್ತು ಇದುವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

**ಅದ್ದೂರಿ ದಸರಾ ಆಚರಣೆಗೆ ಆಕ್ಷೇಪ**

ಬರ ಪರಿಸ್ಥಿತಿಯ ನಡುವೆಯೂ ದಸರಾವನ್ನು ಅದ್ಧೂರಿಯಾಗಿ ಆಚರಿಸಲಾಗುತ್ತಿದೆ ಎಂದು ಆಕ್ಷೇಪಿಸಿದ ಅಶೋಕ್, ರೈತರ ಸಂಕಷ್ಟಕ್ಕೆ ಆದ್ಯತೆ ನೀಡುವ ಬದಲು ಸರ್ಕಾರ ಆಡಂಬರಕ್ಕೆ ಮಹತ್ವ ನೀಡುತ್ತಿದೆ ಎಂದು ಟೀಕಿಸಿದರು. ರೈತರಿಗೆ ಸಾಲದ ನೋಟಿಸ್, ಹೈನುಗಾರರಿಗೂ ಸಂಕಷ್ಟ ರಾಜ್ಯದ ವಿವಿಧ ಭಾಗಗಳಲ್ಲಿ ರೈತರಿಗೆ ಸಾಲ ಮರುಪಾವತಿಸುವಂತೆ ನೋಟಿಸ್‌ಗಳನ್ನು ನೀಡಲಾಗುತ್ತಿದೆ ಎಂದು ಆರೋಪಿಸಿದರು. ಬರಗಾಲದ ಕುರಿತು ವಿಶೇಷ ಅಧಿವೇಶನ ನಡೆಸಿದರೂ ರೈತರಿಗೆ ಅನುಕೂಲವಾಗುವ ನಿರ್ಧಾರಗಳನ್ನು ಕೈಗೊಂಡಿಲ್ಲ. ರೈತರ ಸಮಸ್ಯೆಗಳ ಬಗ್ಗೆ ಸಮರ್ಪಕ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳುವ ಬದಲು ಸಾರ್ವಜನಿಕ ಹಣ ಖರ್ಚು ಮಾಡಲಾಗಿದೆ ಎಂದು ಅಶೋಕ್ ದೂರಿದರು.

**ರಾಹುಲ್ ಗಾಂಧಿಗೆ ಪತ್ರ**

ರಾಜ್ಯದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದು, ಕರ್ನಾಟಕಕ್ಕೆ ಭೇಟಿ ನೀಡಿ ರೈತರ ಸಮಸ್ಯೆಗಳಿಗೆ ಉತ್ತರ ನೀಡಬೇಕು ಎಂದು ಅಶೋಕ್ ಆಗ್ರಹಿಸಿದರು.

**ಸ್ಟಿಂಗ್ ಆಪರೇಷನ್: ಎಫ್‌ಐಆರ್ ದಾಖಲಿಸಲು ಒತ್ತಾಯ**

ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ತಕ್ಷಣ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು ಎಂದು ಅಶೋಕ್ ಒತ್ತಾಯಿಸಿದರು. ಸಿದ್ದರಾಮಯ್ಯ ಅವರು ದೇವರಾಜ ಅರಸು ಅವರ ದಾಖಲೆಯನ್ನು ಮುರಿದಿರುವ ಹಿರಿಯ ನಾಯಕರು. ಅವರ ನೇತೃತ್ವದಲ್ಲೇ ಕಾಂಗ್ರೆಸ್ ಚುನಾವಣೆ ಎದುರಿಸಿತ್ತು. ಇಂತಹ ನಾಯಕರು ಇಂದು ನ್ಯಾಯಾಲಯದ ಮೊರೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿ. ಮಾಜಿ ಗೃಹ ಸಚಿವನಾಗಿ ಕಾರ್ಯನಿರ್ವಹಿಸಿರುವ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಯಾವುದೇ ಆರೋಪದ ಸತ್ಯಾಸತ್ಯತೆ ತಿಳಿಯಲು ಮೊದಲು ಪ್ರಕರಣ ದಾಖಲಿಸಿ ತನಿಖೆ ನಡೆಸುವುದು ಅಗತ್ಯ ಎಂದು ಅಶೋಕ್ ಹೇಳಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಅಕ್ಟೋಬರ್, 14, 2026, ಬುಧವಾರ

## ಒಳಪುಟಗಳಲ್ಲಿ

ಪ್ರತಿಭಟನೆಗೆ ಫ್ರೀಡಂಪಾರ್ಕ್ ಬಳಸಿಕೊಂಡು ಬಾಡಿಗೆ ಪಾವತಿಸದ ಸಿಜೆಪಿ: ಆರ್. ಅಶೋಕ್ ಕಿಡಿ - ಪು.5

# ಪ್ರಜಾಪ್ರಭುತ್ವ ಪುನಶ್ಚೇತನಗೊಳಿಸುವುದೇ ನಮ್ಮ ಹೋರಾಟದ ಗುರಿ: ರಾಹುಲ್

**ಜನಪರ ಆಂದೋಲನದಲ್ಲಿ ನಾವೆಲ್ಲರೂ ಒಂದಾಗಿದ್ದೇವೆ, ಚಳವಳಿ ಮುಂದುವರಿಯಲಿದೆ**

**ಇಂಡಿಯಾ ಮೈತ್ರಿಕೂಟ ಸದಸ್ಯರು ಹಾಗೂ ವಿದ್ಯಾರ್ಥಿ ಸಂಘಟನೆಗಳ ಜತೆ ಚಹಾಕೂಟ**



**ನವದೆಹಲಿ, ಅ.13:** ಪ್ರಜಾಪ್ರಭುತ್ವವನ್ನು ರಕ್ಷಿಸುವ ಜನಪರ ಆಂದೋಲನದಲ್ಲಿ ಎಲ್ಲರೂ ಒಂದಾಗಿದ್ದೇವೆ ಮತ್ತು ಈ ಚಳವಳಿ ನಿರಂತರವಾಗಿ ಮುಂದುವರಿಯುತ್ತದೆ. ಚಹಾಕೂಟದ ನಂತರ, ನಾವೆಲ್ಲರೂ ಒಟ್ಟಾಗಿ ಮಾಧ್ಯಮಗಳ ಮುಂದೆ ನಮ್ಮ ವಾದವನ್ನು ಮಂಡಿಸುತ್ತೇವೆ. ವಿರೋಧ ಪಕ್ಷಗಳ ಪ್ರತಿಭಟನೆಯು ಭಾರತದಲ್ಲಿ "ಪ್ರಜಾಪ್ರಭುತ್ವದ ಪುನರುಜ್ಜೀವನ"ವನ್ನು ಗುರಿಯಾಗಿರಿಸಿಕೊಂಡಿದೆ ಎಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಜ್ಞಾನೇಶ್ ಕುಮಾರ್ ವಿಷಯದಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಮುಂದುವರಿಸುವ ಯತ್ನವಾಗಿ ಇಂಡಿಯಾ ಮೈತ್ರಿಕೂಟದ ನಾಯಕರು ಹಾಗೂ ವಿದ್ಯಾರ್ಥಿಗಳ ಸಂಘಟನೆಗಳಿಗಾಗಿ ರಾಹುಲ್ ಗಾಂಧಿ ಅವರು ದೆಹಲಿಯ ಸುನಹೇರಿಬಾಗ್ ರಸ್ತೆಯಲ್ಲಿರುವ ನಿವಾಸದಲ್ಲಿ ಮಂಗಳವಾರ ಏರ್ಪಡಿಸಿದ್ದ ಚಹಾಕೂಟದ ನಂತರ ಸುದ್ದಗೋಷ್ಠಿಯಲ್ಲಿ ಮಾತನಾಡಿದರು.

ಪ್ರತಿಭಟನೆಗಳು ದುರ್ಬಲಗೊಳ್ಳುವುದನ್ನು ತಪ್ಪಿಸಲು 'ಇಂಡಿಯಾ' ಮೈತ್ರಿಕೂಟವನ್ನು ಮೀರಿ ಇತರರೊಂದಿಗೂ ಕೈಜೋಡಿಸಲು ಕಾಂಗ್ರೆಸ್ ನಿರ್ಧರಿಸಿದೆ ಎಂದಿದ್ದಾರೆ. ಆದರೆ, ಈ ವಿಚಾರದಲ್ಲಿ ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ಬಗ್ಗೆ ರಾಹುಲ್‌ಗಾಂಧಿ ಯಾವುದೇ ಉಲ್ಲೇಖ ಮಾಡಿಲ್ಲ.

"ಜ್ಞಾನೇಶ್ ಕುಮಾರ್ ಮತ್ತು ಇತರರು ತಮ್ಮ ಸುತ್ತಲೂ ಕುಣಿಕೆ ಬಿಗಿಯುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಿನ್ನೆ ನೀವು ರಾಜಕೀಯ ಪಕ್ಷಗಳಲ್ಲ, ಭಾರತದ ಜನರ ಅಭಿವ್ಯಕ್ತಿಯನ್ನು ಕಂಡಿದ್ದೀರಿ... ಈ ದೇಶದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ಮರುಸ್ಥಾಪಿಸಲು ನಾವು ಕೊನೆಯವರೆಗೆ ಹೋರಾಡುತ್ತೇವೆ. ರಾಜಕೀಯ ಪ್ರತಿಭಟನೆ ಮುಂದುವರಿಯುತ್ತದೆ; ಜನರ ಪ್ರತಿಭಟನೆ ಮುಂದುವರಿಯುತ್ತದೆ ಮತ್ತು ಗೆಲುವು ಸಾಧಿಸುತ್ತದೆ," ಎಂದು ವಿರೋಧ ಪಕ್ಷದ ನಾಯಕರು ಸೇರಿಸಿದರು.

### ಒಗ್ಗಟ್ಟಾಗಿದ್ದೇವೆ, ಸಮಾನಾಂತರ ಪ್ರತಿಭಟನೆಗಳಿಲ್ಲ

ನಾವು ಇಲ್ಲಿ ಒಟ್ಟಾಗಿ, ಒಂದಾಗಿ ನಿಂತಿದ್ದೇವೆ. ಯಾವುದೇ ಸಮಾನಾಂತರ ಪ್ರತಿಭಟನೆಗಳಿಲ್ಲ, ಒಂದೇ ಒಂದು ಪ್ರತಿಭಟನೆ ಇದೆ. ಈ ದೇಶದಲ್ಲಿ ನಿಜವಾದ ಪ್ರಜಾಪ್ರಭುತ್ವ ಆಳ್ವಿಕೆಯನ್ನು ಮರುಸ್ಥಾಪಿಸಲು ನಾವು ಒಟ್ಟಾಗಿ ಹೋರಾಡುತ್ತಿದ್ದೇವೆ... ಜಂತರ್ ಮಂತರ್ ಪ್ರಜಾಪ್ರಭುತ್ವದ ಭಾವನೆಗಳನ್ನು ವ್ಯಕ್ತಪಡಿಸಲು ಇನ್ನು ಮುಂದೆ ಬಳಸಲಾಗುವುದಿಲ್ಲ ಎಂದು ಸರ್ಕಾರ ನಿರ್ಧರಿಸಿದೆ ಮತ್ತು ನಾವು ಆ ಕಲ್ಪನೆಯನ್ನು ಸವಾಲು ಮಾಡಲಿದ್ದೇವೆ ಎಂದು ರಾಹುಲ್ ಗಾಂಧಿ ಹೇಳಿದರು.

ಸಭೆಯಲ್ಲಿ ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಶಿವಸೇನೆ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ನಾಯಕ ಸಂಜಯ್ ರಾವುತ್, ಮಮತಾ ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ ಸಂಸದೆ ಸಾಗರಿಕಾ ಘೋಷ್, ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್‌ನ ನೇಹಾ ಬೋರಾ ಮತ್ತು ಇತರರು ಇದ್ದರು. ಬೋರಾ ಸೇರಿ ವಿರೋಧ ಪಕ್ಷದ ಸದಸ್ಯರು ಮತ್ತು ವಿದ್ಯಾರ್ಥಿ ನಾಯಕರು 'ಪ್ರಜಾಪ್ರಭುತ್ವಕ್ಕಾಗಿ ಮೆರವಣಿಗೆ' ನಡೆಸಿದ ಒಂದು ದಿನದ ನಂತರ ಈ ಸಭೆ ನಡೆದಿದೆ.

### ಸುಪ್ರೀಂ ಕೋರ್ಟ್‌ಗೆ ಅರ್ಜಿ

ವಿರೋಧ ಪಕ್ಷದ ನಾಯಕರು ಮತ್ತು ಇತರರು ಸಲ್ಲಿಸಿರುವ ಅರ್ಜಿಯು ಭಾರತೀಯ ಚುನಾವಣಾ ಆಯೋಗ, ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಮತ್ತು ಇತರ ಚುನಾವಣಾ ಆಯುಕ್ತರಾದ ಸುಖ್ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರನ್ನು ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಮಾಡಿದೆ. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಕೈಗೊಂಡ ನಿರ್ಧಾರಗಳ ಪರಿಶೀಲನೆ, ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಸಲ್ಲಿಕೆ, ಹೊಸ ಮತದಾರರನ್ನು ಸೇರಿಸಲು ನಮೂನೆ 6 ರಲ್ಲಿ ಮಾಡಲಾದ ಬದಲಾವಣೆಗಳ ಹಿಂಪಡೆಯುವಿಕೆ ಮತ್ತು ಸ್ವತಂತ್ರ ಲೆಕ್ಕಪರಿಶೋಧನೆ (ಆಡಿಟ್) ಸೇರಿದಂತೆ ಹಲವು ವಿಷಯಗಳನ್ನು ಈ ಮನವಿ ಕೋರಿದೆ.

# ರಾಹುಲ್ ವಿರುದ್ಧದ ಮಾನನಷ್ಟ ಪ್ರಕರಣಕ್ಕೆ ಸುಪ್ರೀಂ ತಡೆ



**ನವದೆಹಲಿ, ಅ.13:** ಪ್ರಧಾನಿ ನರೇಂದ್ರ ಮೋದಿ ವಿರುದ್ಧ 'ಚೌಕಿದಾರ್ ಚೋರ್ ಹೈ' ಹೇಳಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ಮತ್ತು ಲೋಕಸಭೆಯ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯ ಮುಂದಿನ ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸಲು ನಿರಾಕರಿಸಿದ ಬಾಂಬೇ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಪರೇಶ್ ಕುಮಾರ್ ಸಿಂಗ್ ಅವರ ಪೀಠವು, ಮಹಾರಾಷ್ಟ್ರ ಸರ್ಕಾರ ಮತ್ತು ದೂರುದಾರ ಎಂ.ಎಚ್. ಶ್ರೀಶ್ರೀಮಲ್ ಅವರಿಗೆ ನೋಟಿಸ್ ಜಾರಿಗೊಳಿಸಿದ್ದು, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

ರಾಹುಲ್ ಗಾಂಧಿ ಪರವಾಗಿ ಹಾಜರಾದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಸುಪ್ರೀಂ ಕೋರ್ಟ್ನ ಹಿಂದಿನ ತೀರ್ಪುಗಳನ್ನು ಉಲ್ಲೇಖಿಸಿ, ಈ ವಿಷಯದಲ್ಲಿ ಕಾನೂನು ಇತ್ಯರ್ಥವಾಗಿದೆ ಎಂದು ವಾದಿಸಿದರು. ಆದ್ರೆ, ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ತಡೆ ನೀಡಿ, ನಾಲ್ಕು ವಾರಗಳ ಕಾಲ ವಿಚಾರಣೆಯನ್ನು ಮುಂದೂಡಿತು.

2019 ಆಗಸ್ಟ್ 28ರಂದು ಗಿರ್ಗಾಂವ್ ಮ್ಯಾಜಿಸ್ಟ್ರೇಟ್ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ರಾಹುಲ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ಬಾಂಬೇ ಹೈಕೋರ್ಟ್, 2019ರಲ್ಲಿ ನೀಡಲಾಗಿದ್ದ ಸಮನ್ಸ್ ರದ್ದುಗೊಳಿಸಲು ಸೆ. 8ರಂದು ನಿರಾಕರಿಸಿತು. ಈ ಆದೇಶ ಪ್ರಶ್ನಿಸಿ ರಾಹುಲ್ ಗಾಂಧಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ.

# ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ಕುಗ್ಗಿಸಲು ಅವಕಾಶ ನೀಡಲ್ಲ: ಸಿ.ಎಂ. ಡಿ.ಕೆ. ಶಿವಕುಮಾರ್



**ಬೆಂಗಳೂರು, ಅ.13:** ಶಾಂತಿಯುತ ಪ್ರತಿಭಟನೆಯು ನಮ್ಮ ಪ್ರಜಾಪ್ರಭುತ್ವದ ಮೂಲಭೂತ ಹಕ್ಕಾಗಿದೆ. ಆ ಹಕ್ಕನ್ನು ದೆಹಲಿಯಲ್ಲಿ ಪ್ರತಿಪಾದಿಸುತ್ತಾ, ಬೆಂಗಳೂರಿನಲ್ಲಿ ಬೇರೆಯವರಿಗೆ ಅದನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಪ್ರತಿಭಟನಾಕಾರರು ಮತ್ತು ಮಾಧ್ಯಮ ಮಿತ್ರರನ್ನು ಒಳಗೊಂಡ ಸೋಮವಾರದ ಘಟನೆಯನ್ನು ಗಮನಿಸಿದ್ದೇನೆ. ಪೋಲಿಸ್ ಕಾರ್ಯಾಚರಣೆಗೆ ಕಾರಣವಾದ ಸಂದರ್ಭ ಕುರಿತು ಸಂಪೂರ್ಣ ವರದಿ ಕೇಳಿದ್ದೇನೆ. ಒಂದು ವೇಳೆ ಅನಗತ್ಯ ಬಲಪ್ರಯೋಗ ಅಥವಾ ಅತಿಯಾದ ವರ್ತನೆ ನಡೆದಿರುವುದು ಕಂಡುಬಂದರೆ, ಅದಕ್ಕೆ ಹೊಣೆಗಾರರ ವಿರುದ್ಧ ತಕ್ಕ ಕ್ರಮ ಜರುಗಿಸಲಾಗುವುದು ಎಂದಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಸ್ಪಷ್ಟವಾಗಿ ಒಂದು ವಿಷಯ ಮನದಟ್ಟು ಮಾಡಲು ಬಯಸುತ್ತೇನೆ: ಚುನಾವಣಾ ಆಯೋಗ ದೊಂದಿಗಿನ ಭಿನ್ನಾಭಿಪ್ರಾಯ ವಾಗಲಿ, ನನ್ನ ಸರ್ಕಾರದೊಂದಿಗಿನ ಭಿನ್ನಾಭಿಪ್ರಾಯ ವಾಗಲಿ ಅಥವಾ ವೈಯಕ್ತಿಕವಾಗಿ ನನ್ನೊಂದಿಗಿನ ಭಿನ್ನಾಭಿಪ್ರಾಯ ವಾಗಲಿ, ಶಾಂತಿಯುತವಾಗಿ ಅದನ್ನು ವ್ಯಕ್ತಪಡಿಸುವ ಯಾರೊಬ್ಬರ ಹಕ್ಕನ್ನೂ ಕುಗ್ಗಿಸಲು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

ದೇಶದ ಇತರ ಭಾಗಗಳಿಂದ ನಾವು ನಿರೀಕ್ಷಿಸುವ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕರ್ನಾಟಕವು ತನಗೂ ಅನ್ವಯಿಸಿಕೊಳ್ಳಬೇಕು. ಇಲ್ಲಿ ಯಾವುದೇ ಇಬ್ಬಗೆ ನೀತಿಗೆ ಅವಕಾಶವಿಲ್ಲ. ನಾವು ದೆಹಲಿಯಲ್ಲಿ ಪ್ರತಿಭಟನೆಯ ಹಕ್ಕನ್ನು ಪ್ರತಿಪಾದಿಸುತ್ತಾ, ಬೆಂಗಳೂರಿನಲ್ಲಿ ಅದನ್ನು ನಿರಾಕರಿಸಲು ಸಾಧ್ಯವಿಲ್ಲ. ಯಾವುದೇ ದ್ವಿಮುಖ ನೀತಿಗೆ ಇಲ್ಲಿ ಆಸ್ಪದವಿಲ್ಲ

### ಕುಮಾರಸ್ವಾಮಿಯವರು ಒಳ್ಳೆಯ ವಿಚಾರದ ಬಗ್ಗೆ ಗಮನ ಸೆಳೆದಿದ್ದಾರೆ, ಕಾಲವೇ ಉತ್ತರಿಸಲಿದೆ



ಕೇಂದ್ರ ಸಚಿವ ಕುಮಾರಸ್ವಾಮಿಯವರು ಒಳ್ಳೆಯ ವಿಚಾರದ ಬಗ್ಗೆ ರಾಜ್ಯದ ಗಮನ ಸೆಳೆದಿದ್ದಾರೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು. ದೆಹಲಿಯ ಕರ್ನಾಟಕ ಭವನದ ಬಳಿ ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯೆ ನೀಡಿ, ನಿಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳ ಸ್ಟಿಂಗ್ ಆಪರೇಷನ್ ಹಿಂದೆಯೂ ನೀವೇ ಇದ್ದೀರಿ ಎನ್ನುವ ಕುಮಾರಸ್ವಾಮಿ ಆರೋಪದ ಬಗ್ಗೆ ಕೇಳಿದಾಗ, 'ಬಹಳ ಸಂತೋಷ. ಕುಮಾರಸ್ವಾಮಿ ಅವರ ಆರೋಪಗಳಿಗೆ ಕಾಲವೇ ಉತ್ತರಿಸಲಿದೆ' ಎಂದು ಮಾರ್ಮಿಕವಾಗಿ ಉತ್ತರಿಸಿದರು.



ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ನವದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿದರು. ಸಂಸದ ಬಿ.ಎನ್. ಚಂದ್ರಪ್ಪ ಇದ್ದರು.

# ಹೂಡಿಕೆ ಆಕರ್ಷಣೆಗೆ ವಿದೇಶಗಳಲ್ಲಿ ಐಕೆಎಫ್ ಕಚೇರಿ ಸ್ಥಾಪನೆ: ಎಂ.ಬಿ.ಪಾಟೀಲ್

**ಸಾಧಕ-ಬಾಧಕಗಳ ಬಗ್ಗೆ ಸಮಾಲೋಚಿಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ**

**ಬೆಂಗಳೂರು, ಅ.13:** ಅಮೆರಿಕ, ಜಪಾನ್, ತೈವಾನ್, ದಕ್ಷಿಣ ಕೊರಿಯಾ ಮತ್ತು ಫ್ರಾನ್ಸ್ ದೇಶಗಳಿಂದ ರಾಜ್ಯದ ಕೈಗಾರಿಕಾ ವಲಯಕ್ಕೆ ಹೆಚ್ಚಿನ ಬಂಡವಾಳ ಆಕರ್ಷಿಸುವುದಕ್ಕೆ ಪೂರಕವಾಗಿ ಆಯಾ ದೇಶಗಳಲ್ಲೇ ಇನ್ವೆಸ್ಟ್ ಕರ್ನಾಟಕ ಫೋರಂನ (ಐಕೆಎಫ್) ಕಚೇರಿಗಳನ್ನು ತೆರೆಯುವ ಚಿಂತನೆ ಇದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಖನಿಜ ಭವನದಲ್ಲಿ ಮಂಗಳವಾರ ನಡೆದ ಐಕೆಎಫ್‌ನ ಆಡಳಿತ ಮಂಡಳಿಯ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಿದ್ದು, ಸಾಧಕ–ಬಾಧಕ ಬಗ್ಗೆ ಸಮಾಲೋಚನೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ದೇಶದ ಕೈಗಾರಿಕಾ ವಲಯದಲ್ಲಿ ಹೂಡಿಕೆಯನ್ನು ಸೆಳೆಯಲು ರಾಜ್ಯಗಳ ನಡುವೆ ತೀವ್ರ ಸ್ಪರ್ಧೆ ನಡೆಯುತ್ತಿದೆ. ಕೆಲ ರಾಜ್ಯ ಸರಕಾರಗಳು ಈಗಾಗಲೇ ಹೂಡಿಕೆ ಸೆಳೆಯಲು ಮೇಲ್ಕಂಡ ರಾಷ್ಟ್ರಗಳಲ್ಲಿ ಕಚೇರಿ ತೆರೆಯಲು ಮುಂದಡಿ ಇಟ್ಟಿವೆ. ಕರ್ನಾಟಕ ಈ ವಿಚಾರದಲ್ಲಿ ಸುಮ್ಮನೆ ಕೂರಲಾಗದು. ಆದ್ದರಿಂದ ಒಂದೊಂದು ದೇಶಗಳಲ್ಲೂ ಇರುವ ಕೈಗಾರಿಕಾ ವಲಯವಾರು ಪ್ರಾಬಲ್ಯವನ್ನು ಗಮನಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ ಎಂದಿದ್ದಾರೆ.

ತಯಾರಿಕೆ, ಸೆಮಿಕಂಡಕ್ಟರ್, ವೈಮಾಂತರಿಕ್ಷ ಮತ್ತು ರಕ್ಷಣಾ ವಲಯಗಳತ್ತ ನಮ್ಮ ರಾಜ್ಯದ ಆರ್ಥಿಕತೆ ಹೊರಳು ಹಾದಿಯಲ್ಲಿದೆ. ಹೀಗಾಗಿ ಹೂಡಿಕೆ ಅತ್ಯಗತ್ಯವಾಗಿದೆ.

ಆದ್ದರಿಂದ ನಾವು ಹಲವು ದೇಶಗಳಲ್ಲಿ ಐಕೆಎಫ್ ಕಚೇರಿಗಳನ್ನು ತೆರೆಯಲು ಅಥವಾ ಕೆಲವೆಡೆಗಳಲ್ಲಿ ಅಲ್ಲಲ್ಲಿ ಇರುವ ಸೂಕ್ತ/ತಜ್ಞ ವ್ಯಕ್ತಿಗಳನ್ನು ಮುಖ್ಯಸ್ಥರನ್ನಾಗಿ ನೇಮಿಸುವ ಕುರಿತು ಚರ್ಚಿಸಲಾಗಿದೆ. ಇನ್ನೊಂದಿಷ್ಟು ಕಡೆ ಐಕೆಎಫ್ ಮೂಲಕವೇ 'ಕಂಟ್ರಿ ಲೀಡ್ಸ್ ಹೆಡ್'ಗಳನ್ನು ನೇಮಿಸುವ ಬಗ್ಗೆಯೂ ವಿಚಾರ ವಿನಿಮಯ ನಡೆಸಲಾಗಿದೆ. ಸದ್ಯದಲ್ಲೇ ಈ ಕುರಿತು ಮತ್ತೊಂದು ಸಭೆ ನಡೆಸಲಾಗುವುದು ಎಂದು ಅವರು ನುಡಿದಿದ್ದಾರೆ.

ಇನ್ವೆಸ್ಟ್ ಕರ್ನಾಟಕ ಫೋರಂ ಸಕ್ರಿಯವಾಗಿ ಇರಬೇಕೆಂದೇ ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ಅದನ್ನು ಪುನಾರೂಪಿಸಿದೆ. ಬಂಡವಾಳ ಹೂಡಿಕೆಯಲ್ಲಿ ಈಗ ನಾವು ಜಾಗತಿಕ ಸ್ಪರ್ಧೆಯನ್ನು ಎದುರಿಸುತ್ತಿದ್ದೇವೆ. ಹೊಸ ಕೈಗಾರಿಕಾ ನೀತಿಯಲ್ಲಿ ಆದ್ಯತೆಯ ಕ್ಷೇತ್ರಗಳನ್ನು ಕೂಡ ಗುರುತಿಸಲಾಗಿದೆ. ಇದರಂತೆ ಐಕೆಎಫ್ ಮೂಲಕ ಈ ಹೊಸ ಉಪಕ್ರಮ ಕುರಿತು ಗಂಭೀರವಾಗಿ ಚಿಂತಿಸಲಾಗುತ್ತಿದೆ.

ಹೂಡಿಕೆದಾರರು ಇರುವಲ್ಲಿಗೆ ನಾವೇ ಹೋಗಬೇಕಾದ್ದು ಅನಿವಾರ್ಯವಾಗಿದೆ. ಇಲ್ಲದೆ ಹೋದರೆ, ಅವರು ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತಾರೆ ಎಂದು ಪಾಟೀಲ ಹೇಳಿದ್ದಾರೆ.

ಏಕಸ್ ಉದ್ಯಮ ಸಮೂಹದ ಸಿಇಒ ಅರವಿಂದ್ ಮೆಳ್ಳಿಗೇರಿ ವರ್ಚುಯಲ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯಲ್, ಐಕೆಎಫ್ ಸಿಒಒ ಪ್ರವೀಣ್ ಉಪಸ್ಥಿತರಿದ್ದರು.

# ವಿಬಿ-ಜಿ ರಾಮ್ ಜಿ ಅಕ್ರಮ: ರಾಮನ ಹೆಸರಿನಲ್ಲಿ ಬಡವರ ಮೇಲೆ ದಾಳಿ: ಕಾಂಗ್ರೆಸ್



ನವದೆಹಲಿ, ಅ.13: ಕೇಂದ್ರ ಸರ್ಕಾರದ ನೂತನ ವಿಬಿ–ಜಿ ರಾಮ್ ಜಿ ಯೋಜನೆಯಲ್ಲಿ ನಕಲಿ ಹಾಜರಾತಿ ಅಕ್ರಮ ನಡೆದಿರುವುದನ್ನು ಉಲ್ಲೇಖಿಸಿ ಕಾಂಗ್ರೆಸ್ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದೆ. ಒಂದೆಡೆ ಶ್ರೀರಾಮನ ಹೆಸರು ಜಪಿಸುವುದು, ಇನ್ನೊಂದೆಡೆ ಅಧಿಕಾರ ರಾಜಕಾರಣ ಮಾಡುತ್ತಾ ಬಡವರ ಹಕ್ಕುಗಳ ಮೇಲೆ ದಾಳಿ ನಡೆಸುವುದು ಬಿಜೆಪಿಯ ನೈಜ ಕೆಲಸ, ಗುಣ ಮತ್ತು ಮುಖವಾಗಿದೆ ಎಂದು ಕಾಂಗ್ರೆಸ್ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಧ್ಯಮಗಳ ವರದಿಯನ್ನು ಉಲ್ಲೇಖಿಸಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಜೈರಾಮ್ ರಮೇಶ್, ಸರ್ಕಾರದ ಅಧಿಕೃತ ನ್ಯಾಷನಲ್ ಮೊಬೈಲ್ ಮಾನಿಟರಿಂಗ್ ಸಿಸ್ಟಮ್ ಆಪ್‌ಗೆ ಹೋಲುವ ಕ್ಲೋನ್ ಆಪ್ ಒಂದನ್ನು ಸೃಷ್ಟಿಸಿ, ಕಾರ್ಮಿಕರ ನಕಲಿ ಹಾಜರಾತಿ ದಾಖಲಿಸುವ ಮೂಲಕ ಯೋಜನೆ ಹಣ ದುರ್ಬಳಕೆ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಉತ್ತರ ಪ್ರದೇಶದ ಚಂದೌಲಿ, ಗಾಜಿಯಾಬಾದ್ ಮತ್ತು ಬಹ್ರೈಚ್ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಅಧಿಕಾರಿಗಳ ಲಾಗಿನ್ ಐಡಿ, ಪಾಸ್ವರ್ಡ್ ದುರ್ಬಳಕೆ ಮಾಡಿಕೊಂಡು ಪೂರ್ವಭಾವಿ ಯಾಗಿ ತೆಗೆದಿರಿಸಿದ ಫೋಟೋಗಳ ಮೂಲಕ ನಕಲಿ ಹಾಜರಾತಿ ನಮೂದಿಸುತ್ತಿರುವ ಅಕ್ರಮ ಬಯಲಾಗಿದೆ ಎಂದು ವರದಿಗಳನ್ನು ಉಲ್ಲೇಖಿಸಲಾಗಿದೆ.

ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಯಲ್ಲಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು (ಮನರೇಗಾ) ರದ್ದುಗೊಳಿಸಿ, ಜುಲೈ 1ರಿಂದ ವಿಬಿ–ಜಿ ರಾಮ್ ಜಿ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಹೊಸ ಯೋಜನೆ ತಂದರೂ ಗ್ರಾಮೀಣ ಪ್ರದೇಶದ ಬಡವರ ಹಕ್ಕುಗಳಿಗೆ ರಕ್ಷಣೆ ಸಿಗುತ್ತಿಲ್ಲ, ಅಕ್ರಮಗಳನ್ನು ತಡೆಯಲು ಸರ್ಕಾರ ವಿಫಲವಾಗಿದೆ ಎಂದು ಕಾಂಗ್ರೆಸ್ ದೂರಿದೆ.

# ವಿಪತ್ತು ನಿರ್ವಹಣೆಗೆ ಎಐ ಬಳಕೆ: 2030ರ ವೇಳೆಗೆ ಕರ್ನಾಟಕ ದೇಶಕ್ಕೆ ಮಾದರಿ

**ಅಂತಾರಾಷ್ಟ್ರೀಯ ವಿಪತ್ತು ಅಪಾಯ ಕಡಿತ ದಿನಾಚರಣೆಯಲ್ಲಿ ಡಿಸಿಎಂ ಪರಂ ಹೇಳಿಕೆ**



**ಬೆಂಗಳೂರು, ಅ.13:** ಪ್ರಕೃತಿ ವಿಕೋಪಗಳನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಿಲ್ಲ. ಆದರೆ ಅವುಗಳಿಂದ ಉಂಟಾಗುವ ಕಷ್ಟನಷ್ಟಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆ, ವೈಜ್ಞಾನಿಕ ಯೋಜನೆ, ಜನಜಾಗೃತಿ ಅತ್ಯಗತ್ಯವಾಗಿದೆ. ಈ ಸಂಬಂಧ ತಂತ್ರಜ್ಞಾನ, ಎಐ ಅಳವಡಿಕೆಗೆ ಒತ್ತು ನೀಡಲಾಗುತ್ತಿದ್ದು, 2030ರ ವೇಳೆಗೆ ಕರ್ನಾಟಕವನ್ನು ವಿಪತ್ತಿನಿಂದ ಸಂಭವಿಸಬಹುದಾದ ಅಪಾಯವನ್ನು ಕಡಿಮೆಗೊಳಿಸುವ ದೇಶಕ್ಕೆ ಮಾದರಿ ರಾಜ್ಯವಾಗಿ ಮಾಡಲಾಗುವುದು ಎಂದು ಡಿಸಿಎಂ ಡಾ. ಜಿ. ಪರಮೇಶ್ವರ್ ಹೇಳಿದರು.

ಮಂಗಳವಾರ ಅಂತಾರಾಷ್ಟ್ರೀಯ ವಿಪತ್ತು ಅಪಾಯ ಕಡಿತ ದಿನದ ಅಂಗವಾಗಿ ಬೆಂಗಳೂರಿನ ವಿಕಾಸಸೌಧದಲ್ಲಿ ಆಯೋಜಿಸಿದ್ದ ವಿಪತ್ತಿನಿಂದ ಉಂಟಾಗಬಹುದಾದ ಅಪಾಯ ತಗ್ಗಿಸುವ ರಾಜ್ಯ ವೇದಿಕೆಯ ಮೊದಲ ಸಭೆ ಉದ್ಘಾಟಿಸಿ ಮಾತನಾಡಿ, ವಿಪತ್ತು ಸಂಭವಿಸಿದ ನಂತರ ರಕ್ಷಣಾ ಕಾರ್ಯಾಚರಣೆ ಮತ್ತು ಪರಿಹಾರ ವಿತರಣೆಗೆ ಸೀಮಿತವಾಗದೆ, ವಿಪತ್ತು ಸಂಭವಿಸುವ ಮೊದಲೇ ಅಪಾಯಗಳನ್ನು ಗುರುತಿಸಿ, ಜನರ ಜೀವ ಹಾಗೂ ಜೀವನೋಪಾಯವನ್ನು ರಕ್ಷಿಸುವ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಹೇಳಿದರು. ವಿಪತ್ತು ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಬಲಪಡಿಸಲು ಕೃತಕ ಬುದ್ಧಿಮತ್ತೆ, ಉಪಗ್ರಹ ಚಿತ್ರಣ, ಭೌಗೋಳಿಕ ಮಾಹಿತಿ ಮತ್ತು ವೈಜ್ಞಾನಿಕ ಮುನ್ಸೂಚನೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರವೂ ಸೇರಿದಂತೆ ವೈಜ್ಞಾನಿಕ ಸಂಸ್ಥೆಗಳ ಮಾಹಿತಿಯನ್ನು ಜಿಲ್ಲಾಡಳಿತ, ಗ್ರಾಮ ಪಂಚಾಯಿತಿಗಳು ಮತ್ತು ಅಪಾಯಕ್ಕೆ ಒಳಗಾಗುವ ಪ್ರತಿಯೊಂದು ಕುಟುಂಬಕ್ಕೂ ಸಕಾಲದಲ್ಲಿ ತಲುಪಿಸುವ ವ್ಯವಸ್ಥೆ ರೂಪಿಸಬೇಕು.

ಕೇವಲ ವಿಪತ್ತಿನ ಎಚ್ಚರಿಕೆ ನೀಡುವುದು ಸಾಕಾಗುವುದಿಲ್ಲ. ಆ ಎಚ್ಚರಿಕೆಯ ಆಧಾರದಲ್ಲಿ ಯಾವ ಪ್ರದೇಶದಲ್ಲಿ, ಯಾವ ಸಮಯದಲ್ಲಿ, ಯಾರ ರಕ್ಷಣೆಗೆ ಆದ್ಯತೆ ನೀಡಬೇಕು ಎಂಬುದನ್ನು ನಿರ್ಧರಿಸುವ ವ್ಯವಸ್ಥೆ ಅಗತ್ಯ ಎಂದು ಹೇಳಿದರು.

### 2030ರ ಮಾರ್ಗಸೂಚಿ ಪರಿಣಾಮಕಾರಿಯಾಗಿ ಜಾರಿ

ಕರ್ನಾಟಕ ರಾಜ್ಯ ವಿಪತ್ತು ಅಪಾಯ ತಗ್ಗಿಸುವಿಕೆ ಮಾರ್ಗಸೂಚಿ 2025–2030 ಅನ್ನು ಕಾಲಮಿತಿಯೊಳಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಇಲಾಖಾವಾರು ಜವಾಬ್ದಾರಿಗಳನ್ನು ನಿಗದಿಪಡಿಸಿ, ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಬೇಕು. ವಾರ್ಷಿಕ ಪ್ರಗತಿ ವರದಿ ಮತ್ತು ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆ ನಡೆಸಬೇಕು ಎಂದು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರದ ಆಯುಕ್ತೆ ಹೊನ್ನಾಂಬ, ಯೂನಿಸೆಫ್ ಡಿಆರ್‌ಆರ್ ಅಧಿಕಾರಿ ಡಾ. ಮಹೇಂದ್ರ ರಾಜಾರಾಮ್, ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿಗಾ ಕೇಂದ್ರದ ನಿರ್ದೇಶಕ ಎಂ.ಎಸ್.ದಿವಾಕರ್ ಉಪಸ್ಥಿತರಿದ್ದರು.



ನವದೆಹಲಿಯಲ್ಲಿ ಮಂಗಳವಾರ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆ ಸಚಿವ ಭೂಪೇಂದ್ರ ಯಾದವ್ ಅವರು ದೆಹಲಿ ಮಾಲಿನ್ಯ ನಿಯಂತ್ರಣ ಸಮಿತಿಯ ಸಂಯೋಜಿತ ನಿಯಂತ್ರಣ ಮತ್ತು ಕಮಾಂಡ್ ಕೇಂದ್ರವನ್ನು ಪರಿಶೀಲಿಸಿದರು. ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು ಹಾಗೂ ಕಾರ್ಪೊರೇಟ್ ವ್ಯವಹಾರಗಳ ರಾಜ್ಯ ಸಚಿವ ಹರ್ಷ್ ಮಲ್ಹೋತ್ರಾ ಮತ್ತು ದೆಹಲಿಯ ಮುಖ್ಯಮಂತ್ರಿ ರೇಖಾ ಗುಪ್ತಾ ಕೂಡ ಹಾಜರಿದ್ದರು.

# 2 ಸಾವಿರ ರೂ. ಮೀರಿದ ಯುಪಿಐ ಪಾವತಿಗೆ ಶುಲ್ಕ: ದೀಪಾವಳಿ ಬಳಿಕ ಜಾರಿ

**ನವದೆಹಲಿ, ಅ.13:** 2,000 ರೂ. ಮೀರಿದ ಕೆಲವು ಯುಪಿಐ ವ್ಯವಹಾರಗಳಿಗೆ ವ್ಯಾಪಾರಿ ರಿಯಾಯಿತಿ ದರ (ಎಂಡಿಆರ್) ವಿಧಿಸುವ ನಿರ್ಧಾರದ ಜಾರಿಯನ್ನು ದೀಪಾವಳಿ ಹಬ್ಬದ ನಂತರಕ್ಕೆ ಮುಂದೂಡಲಾಗಿದೆ ಎಂದು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ತಿಳಿಸಿದೆ.




ಹಬ್ಬದ ಸಂದರ್ಭದಲ್ಲಿ ವ್ಯಾಪಾರಿಗಳು ಮತ್ತು ಗ್ರಾಹಕರಿಗೆ ತೊಂದರೆಯಾಗದಂತೆ ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ. ಅಕ್ಟೋಬರ್ 15ರಿಂದ ಜಾರಿಗೆ ಬರಬೇಕಿದ್ದ ಶುಲ್ಕವನ್ನು ಮುಂದೂಡಲಾಗಿದ್ದು, ಹೊಸ ಜಾರಿ ದಿನಾಂಕವನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು ಎಂದು ಎನ್‌ಪಿಸಿಐ ಅಕ್ಟೋಬರ್ 13ರಂದು ತಿಳಿಸಿದೆ.

ಎನ್‌ಪಿಸಿಐನ ಯುಪಿಐ ಮತ್ತು ಸೇವೆಗಳ ಮಾರ್ಗದರ್ಶಕ ಸಮಿತಿಯು ಆಯ್ದ ವ್ಯಕ್ತಿಯಿಂದ ವ್ಯಾಪಾರಿಗೆ (ಪಿ2ಎಂ) ನಡೆಯುವ ಯುಪಿಐ ವ್ಯವಹಾರಗಳಿಗೆ ದೀಪಾವಳಿ ಬಳಿಕ ಶುಲ್ಕ ವಿಧಿಸಲು ನಿರ್ಧರಿಸಿದೆ. ಈ ಹಿಂದೆ ಪ್ರಕಟಿಸಿದ್ದ ನಿಯಮಗಳ ಪ್ರಕಾರ, ಆಯ್ದ ವ್ಯಾಪಾರಿ ವ್ಯವಹಾರಗಳಲ್ಲಿ ರೂ. 2,000 ಮೀರಿದ ಪಾವತಿಗಳಿಗೆ ಶೇ. 0.4ರಷ್ಟು ಎಂಡಿಆರ್ ವಿಧಿಸಲು ಉದ್ದೇಶಿಸಲಾಗಿತ್ತು. ಉದಾಹರಣೆಗೆ, ರೂ. 10,000 ಮೊತ್ತದ ಅರ್ಹ ವಹಿವಾಟಿಗೆ ರೂ. 40 ಶುಲ್ಕ ಅನ್ವಯಿಸಲಿದೆ. 75,000 ರೂ. ಅಥವಾ ಅದಕ್ಕಿಂತ ಹೆಚ್ಚಿನ ವ್ಯವಹಾರಗಳಿಗೆ ಈ ಶುಲ್ಕದ ಗರಿಷ್ಠ ಮಿತಿ ರೂ. 300 ಆಗಿರಲಿದೆ.

ರೈಲ್ವೆ, ದೂರಸಂಪರ್ಕ, ವಿಮೆ, ಇಂಧನ, ಉಪಯುಕ್ತ ಸೇವೆಗಳು ಮತ್ತು ಶಿಕ್ಷಣದಂತಹ ಕೆಲವು ನಿರ್ದಿಷ್ಟ ಕ್ಷೇತ್ರಗಳಲ್ಲಿ ರೂ. 2,000 ಮೀರಿದ ವ್ಯವಹಾರಗಳಿಗೆ ಪ್ರತಿ ವಹಿವಾಟಿಗೆ ರೂ. 5ರ ನಿಗದಿತ ಶುಲ್ಕ ವಿಧಿಸುವ ವ್ಯವಸ್ಥೆಯನ್ನೂ ಪ್ರಸ್ತಾಪಿಸಲಾಗಿದೆ. ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ ಯುಪಿಐ ಹಣ ವರ್ಗಾವಣೆಗೆ ಯಾವುದೇ ಶುಲ್ಕ ಇರುವುದಿಲ್ಲ. ರೂ. 2,000 ವರೆಗಿನ ವ್ಯಾಪಾರಿ ಪಾವತಿಗಳು ಹಾಗೂ ಶೂನ್ಯ ಎಂಡಿಆರ್ ವ್ಯವಸ್ಥೆಯಡಿ ಬರುವ ಸಣ್ಣ ವ್ಯಾಪಾರಿಗಳ ವ್ಯವಹಾರಗಳಿಗೂ ಶುಲ್ಕ ಅನ್ವಯಿಸುವುದಿಲ್ಲ. ತಿಂಗಳಿಗೆ ರೂ. 1 ಲಕ್ಷದವರೆಗೆ ಯುಪಿಐ ಮೂಲಕ ಹಣ ಸ್ವೀಕರಿಸುವ ಅರ್ಹ ಸಣ್ಣ ವ್ಯಾಪಾರಿಗಳಿಗೆ ಪ್ರಸ್ತುತ ವಿನಾಯಿತಿ ಮುಂದುವರಿಯಲಿದೆ.

ಎಂಡಿಆರ್ ಎನ್ನುವುದು ಡಿಜಿಟಲ್ ಪಾವತಿಗಳನ್ನು ಸ್ವೀಕರಿಸುವುದಕ್ಕಾಗಿ ವ್ಯಾಪಾರಿಗಳು ಬ್ಯಾಂಕ್‌ಗಳು ಮತ್ತು ಪಾವತಿ ಸೇವಾ ಸಂಸ್ಥೆಗಳಿಗೆ ಪಾವತಿಸುವ ಶುಲ್ಕವಾಗಿದೆ. ಇದು ಸರ್ಕಾರ ಸಂಗ್ರಹಿಸುವ ತೆರಿಗೆಯಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಈ ಹಿಂದೆ ಸ್ಪಷ್ಟಪಡಿಸಿತ್ತು. ಹಬ್ಬದ ವ್ಯಾಪಾರ ವ್ಯವಹಾರದ ಅವಧಿಯಲ್ಲಿ ಶುಲ್ಕ ಜಾರಿಯಿಂದ ಉಂಟಾಗಬಹುದಾದ ಗೊಂದಲವನ್ನು ತಪ್ಪಿಸಲು ಈ ಮುಂದೂಡಿಕೆ ನೆರವಾಗಲಿದೆ. ಆದರೆ, ಹೊಸ ನಿಯಮಗಳು ಯಾವ ದಿನದಿಂದ ಜಾರಿಗೆ ಬರಲಿವೆ ಎಂಬುದರ ಕುರಿತು ಎನ್‌ಪಿಸಿಐ ಇನ್ನೂ ಅಂತಿಮ ದಿನಾಂಕ ಪ್ರಕಟಿಸಿಲ್ಲ.

# ಜಂತರ್ ಮಂತರ್ ಪ್ರತಿಭಟನೆಗೆ ನುಗ್ಗಿದ ಸಿಜೆಪಿ ನಾಯಕರು ಪೊಲೀಸ್ ವಶಕ್ಕೆ

**ನವದೆಹಲಿ, ಅ.13:** ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ವಿಧಿಸಿರುವ ನಿರ್ಬಂಧವನ್ನು ವಿರೋಧಿಸಿ, ಅಲ್ಲಿಗೆ ಪ್ರವೇಶಿಸಲು ಯತ್ನಿಸಿದ ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ನಾಯಕರನ್ನು ದೆಹಲಿ ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.



ಸಿಜೆಪಿಯ ಮುಖ್ಯ ವಕ್ತಾರ ಸೌರವ್ ದಾಸ್, ರಾಷ್ಟ್ರೀಯ ವಕ್ತಾರ ಆಶುತೋಷ್ ರಂಕಾ ಹಾಗೂ ಅಜಿಂಕ್ಯ ಶಿಂಧೆ ಸೇರಿದಂತೆ ಪಕ್ಷದ ಇತರ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಜಂತರ್ ಮಂತರ್‌ನಲ್ಲಿ ಭದ್ರತಾ ವ್ಯವಸ್ಥೆ ಮತ್ತು ಬ್ಯಾರಿಕೇಡ್‌ಗಳನ್ನು ಹಾಕಲಾಗಿದ್ದರೂ, ಕಾರ್ಯಕರ್ತರು ಗೇಟ್ ಹತ್ತಿ ಒಳ ಪ್ರವೇಶಿಸಿದ್ದಾರೆ. ಈ ವೇಳೆ ರಾಷ್ಟ್ರಧ್ವಜ ಹಿಡಿದು ಘೋಷಣೆಗಳನ್ನು ಕೂಗಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳ ಕುರಿತು ಸಿಜೆಪಿ ಪ್ರತಿಭಟನೆ ನಡೆಸುತ್ತಿದೆ. ಪ್ರತಿಭಟನೆಗೆ ಜಂತರ್ ಮಂತರ್‌ನಲ್ಲಿ ಅನುಮತಿ ನೀಡುವಂತೆ ಪಕ್ಷವು ಪೊಲೀಸರನ್ನು ಒತ್ತಾಯಿಸಿತ್ತು.

ಆದರೆ, ದೆಹಲಿ ಪೊಲೀಸರು ಜಂತರ್ ಮಂತರ್ ಅಧಿಕೃತ ಪ್ರತಿಭಟನಾ ಸ್ಥಳಗಳ ಪಟ್ಟಿಯಿಂದ ತೆಗೆದು ಹಾಕಿದ್ದಾರೆ. ಪ್ರತಿಭಟನೆ ಮತ್ತು ಧರಣಿಗಳಿಗೆ ಪರ್ಯಾಯವಾಗಿ ಮಧ್ಯ ದೆಹಲಿಯ ರಾಮಲೀಲಾ ಮೈದಾನ, ವಾಯವ್ಯ ದೆಹಲಿಯ ಬುರಾರಿ ಮೈದಾನ ಹಾಗೂ ಪೂರ್ವ ದೆಹಲಿಯ ಸಿಬಿಡಿ ಮೈದಾನಗಳನ್ನು ಗುರುತಿಸಿದ್ದಾರೆ. ಈ ನಿರ್ಧಾರದ ಬೆನ್ನಲ್ಲೇ ಸಿಜೆಪಿ ನಾಯಕರು ಜಂತರ್ ಮಂತರ್ ಪ್ರವೇಶಿಸಲು ಯತ್ನಿಸಿದ್ದಾರೆ.

ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ಸಾಮಾಜಿಕ ಜಾಲತಾಣದಲ್ಲಿ ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿರುವುದನ್ನು ಖಂಡಿಸಿದ್ದಾರೆ. ಪ್ರತಿಭಟನೆಯನ್ನು ನಿರ್ಬಂಧಿತ ಸ್ಥಳವೆಂದು ಘೋಷಿಸಬಹುದು; ಆದರೆ ಪ್ರತಿರೋಧದ ಧ್ವನಿಯನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂಬರ್ಥದಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ ವಿಚಾರವಾಗಿ ದೆಹಲಿಯಲ್ಲಿ ರಾಜಕೀಯ ಸಂಘರ್ಷ ತೀವ್ರಗೊಂಡಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ.

## ವಕೀಲರ ಭೇಟಿಗೆ ಅವಕಾಶ ನೀಡದ ಪೊಲೀಸರ ವಿರುದ್ಧ ಸಿಜೆಪಿ ಆಕ್ರೋಶ

**ನವದೆಹಲಿ, ಅ.13:** ಜಂತರ್ ಮಂತರ್‌ಗೆ ಪ್ರವೇಶಿಸಲು ಯತ್ನಿಸುತ್ತಿದ್ದ ಕಾಕ್ರೋಚ್ ಜನತಾ ಪಕ್ಷ ನಾಯಕರಾದ ಸೌರವ್ ದಾಸ್, ಆಶುತೋಷ್ ರಂಕಾ ಮತ್ತು ಅಜಿಂಕ್ಯ ಶಿಂಧೆ ಅವರನ್ನು ದೆಹಲಿ ಪೊಲೀಸರು ಮಂಗಳವಾರ (ಅಕ್ಟೋಬರ್ 13) ವಶಕ್ಕೆ ಪಡೆದಿದ್ದು ಅವರನ್ನು ವಕೀಲರನ್ನು ಭೇಟಿಯಾಗಲು ಬಿಡುತ್ತಿಲ್ಲ ಎಂದು ಪಕ್ಷ ಆರೋಪಿಸಿದೆ. ಜಂತರ್ ಮಂತರ್ ಪ್ರದೇಶದಲ್ಲಿ ಪ್ರತಿಭಟನೆ ನಡೆಸಲು ನಿರ್ಬಂಧ ವಿಧಿಸಿರುವ ಬಗ್ಗೆ ದಿಶಾ ವಿದ್ಯಾರ್ಥಿ ಸಂಘಟನೆಯ ಕಾರ್ಯಕರ್ತರು ಕನ್ನಾಟ್ ಪ್ಲೇಸ್‌ನಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಚುನಾವಣಾ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳು ತೀವ್ರ ಸ್ವರೂಪ ಪಡೆದುಕೊಂಡಿದ್ದು, ದೆಹಲಿಯಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ.

ಸಿಜೆಪಿಯ ಕಾನೂನು ವಿಭಾಗದ ರತ್ನಾ ಸಿಂಗ್ ಅವರು ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಜಾಫರಪುರ್ ಕಲಾನ್ ಪೊಲೀಸ್ ಠಾಣೆಯ ಠಾಣಾಧಿಕಾರಿಯು ವಶಕ್ಕೆ ಪಡೆದಿರುವ ನಮ್ಮ ನಾಯಕರನ್ನು ಅವರ ವಕೀಲರೊಂದಿಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ ಮತ್ತು ಅವರ ಮೊಬೈಲ್ ಫೋನ್‌ಗಳನ್ನೂ ಕಿತ್ತುಕೊಳ್ಳಲಾಗಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಸಿಜೆಪಿ ಮತ್ತು ಇತರ ಸಂಘಟನೆಗಳ ಪ್ರತಿಭಟನೆ ಮುಂದುವರಿಯುವ ಸಾಧ್ಯತೆ ಇರುವುದರಿಂದ, ಅಕ್ಟೋಬರ್ 20 ರವರೆಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ 273 ತುಕಡಿಗಳ ನಿಯೋಜನೆಯನ್ನು ವಿಸ್ತರಿಸಲು ದೆಹಲಿ ಪೊಲೀಸರು ಗೃಹ ಸಚಿವಾಲಯಕ್ಕೆ ಮನವಿ ಮಾಡಿದ್ದಾರೆ.

# ಎಸ್‌ಐಆರ್ ಪ್ರತಿಭಟನೆ ವೇಳೆ ಸುಳ್ಳುಸುದ್ದಿ ಹರಡಿದ ಆರೋಪ

## ಪಾಕ್ ಮೂಲದ ಸೇರಿ 500 ಸಾಮಾಜಿಕ ಜಾಲತಾಣ ಪೋಸ್ಟ್‌ಗಳಿಗೆ ದೆಹಲಿ ಪೊಲೀಸರಿಂದ ಕತ್ತರಿ

**ನವದೆಹಲಿ, ಅ.13:** ಎಸ್‌ಐಆರ್ ಪ್ರತಿಭಟನೆ ವೇಳೆ ಸುಳ್ಳು ಸುದ್ದಿಗಳ ಪ್ರಸಾರ, ವದಂತಿಗಳ ಹರಡುವಿಕೆ ಆರೋಪದ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರು ಸುಮಾರು 500 ಸಾಮಾಜಿಕ ಜಾಲತಾಣ ಪೋಸ್ಟ್‌ಗಳನ್ನು ತೆಗೆದುಹಾಕಿದ್ದಾರೆ. ಅಲ್ಲದೆ, ಸುಳ್ಳು ಮಾಹಿತಿ ಹರಡುತ್ತಿದ್ದ ಆರೋಪದ ಮೇಲೆ ಪಾಕಿಸ್ತಾನ ಮೂಲದ ಕೆಲವು ಸಾಮಾಜಿಕ ಜಾಲತಾಣ ಖಾತೆಗಳನ್ನು ಗುರುತಿಸಿದ್ದು, ಅವುಗಳ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಿದ್ದಾರೆ.

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹರಡುತ್ತಿರುವುದನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಜನರಲ್ಲಿ ಆತಂಕ ಸೃಷ್ಟಿಸುವುದು, ಗೊಂದಲ ಉಂಟುಮಾಡುವುದು ಹಾಗೂ ಸಾರ್ವಜನಿಕ ಶಾಂತಿಗೆ ಧಕ್ಕೆ ತರುವ ಉದ್ದೇಶದಿಂದ ಕೆಲವು ಖಾತೆಗಳು ತಪ್ಪು ಮಾಹಿತಿಯನ್ನು ಪ್ರಸಾರ ಮಾಡಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅಕ್ಟೋಬರ್ 10ರಂದು ನಡೆದ ಪ್ರತಿಭಟನೆಗಳ ವೇಳೆ ಸಾವು–ನೋವು ಸಂಭವಿಸಿದೆ ಎಂಬ ಸುಳ್ಳು ವರದಿಗಳನ್ನೂ ಕೆಲವು ಖಾತೆಗಳು ಹರಡಿದ್ದವು ಎಂದು ಆರೋಪಿಸಲಾಗಿದೆ. ಪ್ರತಿಭಟನೆ ವೇಳೆ ದೆಹಲಿ ಪೊಲೀಸರು ಗುಂಡು ಹಾರಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗಾಯಗೊಂಡಿದ್ದಾರೆ ಎಂಬ ಸುಳ್ಳು ಸುದ್ದಿಯನ್ನೂ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿತ್ತು. ಇಂತಹ ಪೋಸ್ಟ್‌ಗಳು ಜನರಲ್ಲಿ ಆತಂಕ ಮೂಡಿಸುವ ಸಾಧ್ಯತೆ ಹಿನ್ನೆಲೆಯಲ್ಲಿ ಪೊಲೀಸರು ನಿಗಾ ಹೆಚ್ಚಿಸಿದ್ದಾರೆ.

ಪಾಕಿಸ್ತಾನದಿಂದ ಕಾರ್ಯನಿರ್ವಹಿಸುತ್ತಿವೆ ಎನ್ನಲಾದ ಕೆಲವು ಖಾತೆಗಳು ಭಾರತೀಯರ ಹೆಸರಿನಲ್ಲಿ ಸುಳ್ಳು ಸುದ್ದಿಗಳು, ತಪ್ಪು ದಾರಿಗೆಳೆಯುವ ವಿಡಿಯೊಗಳು ಹಾಗೂ ಪ್ರಚೋದನಕಾರಿ ಸಂದೇಶಗಳನ್ನು ಹರಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ. ಈ ಖಾತೆಗಳ ಮೂಲಕ ಭಾರತದ ವಿರುದ್ಧ ನಕಾರಾತ್ಮಕ ಪ್ರಚಾರ ನಡೆಸಿ, ದೇಶದಲ್ಲಿ ಅಶಾಂತಿ ಸೃಷ್ಟಿಸುವ ಪ್ರಯತ್ನ ನಡೆದಿದೆಯೇ ಎಂಬ ಬಗ್ಗೆಯೂ ತನಿಖೆ ನಡೆಯುತ್ತಿದೆ.

ದೆಹಲಿ ಪೊಲೀಸರ ಸೈಬರ್ ವಿಭಾಗವು ಸಾಮಾಜಿಕ ಜಾಲತಾಣಗಳಲ್ಲಿನ ಚಟುವಟಿಕೆಗಳ ಮೇಲೆ ನಿಗಾ ಇರಿಸಿದೆ. ಆಕ್ಷೇಪಾರ್ಹ ಮತ್ತು ಸುಳ್ಳು ಮಾಹಿತಿಯುಳ್ಳ ಪೋಸ್ಟ್‌ಗಳನ್ನು ತೆಗೆದುಹಾಕಲು ಸಂಬಂಧಪಟ್ಟ ಸಾಮಾಜಿಕ ಜಾಲತಾಣ ಸಂಸ್ಥೆಗಳನ್ನು ಸಂಪರ್ಕಿಸಲಾಗಿದೆ. ತಪ್ಪು ಮಾಹಿತಿ ಹರಡಿದ ಆರೋಪದ ಸಂಬಂಧ ಪೊಲೀಸರು ಪ್ರಕರಣಗಳನ್ನೂ ದಾಖಲಿಸಿಕೊಂಡಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಪ್ರತಿಯೊಂದು ಮಾಹಿತಿಯನ್ನೂ ಸತ್ಯವೆಂದು ನಂಬಬಾರದು. ಅಧಿಕೃತ ಮೂಲಗಳಿಂದ ಮಾಹಿತಿ ಖಚಿತಪಡಿಸಿಕೊಂಡ ನಂತರವೇ ಹಂಚಿಕೊಳ್ಳಬೇಕು. ವದಂತಿಗಳನ್ನು ಹರಡುವ ಮೂಲಕ ಸಾರ್ವಜನಿಕ ಶಾಂತಿಗೆ ಭಂಗ ತರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

# ಮೋದಿಗೂ ಇದೇ ಮಾತು ಹೇಳುತ್ತೀರಾ: ಸುಪ್ರೀಂಗೆ ದೀಪ್ಕೆ ಪ್ರಶ್ನೆ

**ನವದೆಹಲಿ, ಅ.13:** ದೆಹಲಿಯ ಪ್ರತಿಭಟನೆಗಳ ಕುರಿತು ಪ್ರತಿಕ್ರಿಯಿಸುವಾಗ ಕಾನೂನು ಸುವ್ಯವಸ್ಥೆ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಹೇಳಿದ್ದರು. ಈ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ, ಪ್ರಧಾನಿ ನರೇಂದ್ರ ಮೋದಿ ಅವರಿಗೂ ಇದೇ ಮಾತು ಹೇಳುತ್ತೀರಾ ಎಂದು ಸುಪ್ರೀಂ ಕೋರ್ಟ್‌ಗೆ ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಿದ ವಿಚಾರ ಪ್ರಸ್ತಾಪಿಸಿದ ದೀಪ್ಕೆ, ಮತದಾನ ಮಾಡಲು ಸಾಧ್ಯವಾಗದವರು ಮುಂದಿನ ಬಾರಿ ಮತ ಹಾಕಬಹುದು ಎಂದು ಹೇಳಲಾಗಿದೆ. ಪ್ರಧಾನಿ ಮೋದಿ ಅವರಿಗೆ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಬೇಡಿ, ಮುಂದಿನ ಬಾರಿ ಸ್ಪರ್ಧಿಸಿ ಎಂದು ಹೇಳುತ್ತೀರಾ, ಹಾಗೆ ಹೇಳಲು ಸಾಧ್ಯವಿಲ್ಲದಿದ್ದರೆ ಮತದಾರರಿಗೆ ಈ ಸಲಹೆ ನೀಡಲು ಯಾವ ಆಧಾರವಿದೆ ಎಂದು ಪ್ರಶ್ನಿಸಿದ್ದಾರೆ.



ಎಸ್‌ಐಆರ್ ಸೇರಿದಂತೆ ಎಲ್ಲ ನಿರ್ಧಾರಗಳನ್ನು ಸರ್ವಾನುಮತದಿಂದ ತೆಗೆದುಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ. ಇತ್ತ, ಎಸ್‌ಐಆರ್ ಪ್ರಕ್ರಿಯೆ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ವಿದ್ಯಾರ್ಥಿ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸುತ್ತಿದ್ದು, ಅವರ ರಾಜೀನಾಮೆಗೆ ಆಗ್ರಹಿಸಿವೆ. ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡುವವರೆಗೂ ದೇಶಾದ್ಯಂತ ಪ್ರತಿಭಟನೆಗಳು ಮುಂದುವರಿಯಲಿವೆ ಎಂದು ಅಭಿಜೀತ್ ದೀಪ್ಕೆ ಹೇಳಿದ್ದಾರೆ.

ದೆಹಲಿಯ ಪ್ರತಿಭಟನೆಗಳು ಮತ್ತು ನಿರ್ಬಂಧಗಳ ಕುರಿತು ಕೇಳಿದ ಪ್ರಶ್ನೆಗೆ ಸಿಜೆಐ ಸೂರ್ಯಕಾಂತ್, ಇದು ಕಾನೂನು ಸುವ್ಯವಸ್ಥೆಯ ವಿಷಯ. ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದ್ದರು. ಆದರೆ, ಸಾಮಾನ್ಯ ನಾಗರಿಕರು ಮತ್ತು ಜನಪ್ರತಿನಿಧಿಗಳು ಸೇರಿದಂತೆ ಎಲ್ಲರಿಗೂ ಸುಪ್ರೀಂ ಕೋರ್ಟ್‌ನ ಬಾಗಿಲು ತೆರೆದಿದೆ ಎಂದೂ ತಿಳಿಸಿದ್ದರು.

ಈ ಹೇಳಿಕೆಗೆ ಪ್ರತಿಕ್ರಿಯಿಸಿದ್ದ ಕಾಂಗ್ರೆಸ್‌ನ ಕೇರಳ ಘಟಕ, ಕಾನೂನು ಸುವ್ಯವಸ್ಥೆ ನಿಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದಾದರೆ ರಾಜೀನಾಮೆ ನೀಡಿ. ಈ ಜವಾಬ್ದಾರಿ ನಿಭಾಯಿಸಬಲ್ಲ ಬೇರೊಬ್ಬರನ್ನು ನಾವು ಹುಡುಕುತ್ತೇವೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿತ್ತು. ಬಳಿಕ ಆ ಪೋಸ್ಟ್ ಅನ್ನು ಅಳಿಸಲಾಗಿತ್ತು. ಈ ಕುರಿತು ಪ್ರತಿಕ್ರಿಯಿಸಲು ಅಭಿಜೀತ್ ದೀಪ್ಕೆ ನಿರಾಕರಿಸಿದ್ದಾರೆ.

# ದುರ್ಯೋಧನನ ದಹನಕ್ಕಾಗಿ ಮಾನವ ಹಕ್ಕುಗಳ ಆಯೋಗಕ್ಕೆ ಅರ್ಜಿ

**ನವದೆಹಲಿ, ಅ.13:** ವಿಜಯದಶಮಿ/ದಸರಾ ಹಬ್ಬದ ಸಮಯದಲ್ಲಿ ಪ್ರತಿವರ್ಷ ರಾವಣನ ಪೋಸ್ಟರ್ ಅಥವಾ ಗೊಂಬೆಯನ್ನು ದಹಿಸುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಪ್ರತಿಪಾದಿಸಿ ಛತ್ತೀಸ್‌ಗಢ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಅರ್ಜಿಯೊಂದು ಸಲ್ಲಿಕೆಯಾಗಿದೆ. ಅಷ್ಟಕ್ಕೂ ಇಂತಹ ಅರ್ಜಿ ಹೊಸದೇನಲ್ಲ, ಈ ಹಿಂದೆಯೂ ಇಂತಹ ಅರ್ಜಿ ಸಲ್ಲಿಕೆಯಾಗಿದೆ.

ಪ್ರತಿವರ್ಷ ರಾವಣನ ದಹನ ಮಾಡುವುದು ತಾರತಮ್ಯದಿಂದ ಕೂಡಿದ್ದು, ಇದು ಹಕ್ಕುಗಳ ಉಲ್ಲಂಘನೆಯಾಗಿದೆ. ರಾವಣನ ಬೊಂಬೆಯನ್ನು ಸುಡುವ ಬದಲು ದುರ್ಯೋಧನನ ಬೊಂಬೆಯನ್ನು ಏಕೆ ಸುಡಬಾರದು ಎಂದು ಅರ್ಜಿದಾರರು ಆಯೋಗದ ಮುಂದೆ ಪ್ರಶ್ನಿಸಿದ್ದಾರೆ.

ಅರ್ಜಿ ಪರಿಶೀಲಿಸಿದ ಛತ್ತೀಸ್‌ಗಢ ಮಾನವ ಹಕ್ಕುಗಳ ಆಯೋಗ ಸಭ್ಯತೆ ಮತ್ತು ತಾಂತ್ರಿಕ ಕಾರಣಗಳನ್ನು ನೀಡಿ ವಜಾಗೊಳಿಸಿದೆ. ಕಾನೂನು ಮತ್ತು ಮಾನವ ಹಕ್ಕುಗಳ ನಿಯಮಗಳ ಅಡಿಯಲ್ಲಿ ಮಾನವ ಹಕ್ಕುಗಳು ಕೇವಲ ಜೀವಂತ ಅಥವಾ ಐತಿಹಾಸಿಕವಾಗಿ ಮನುಷ್ಯರೆಂದು ಪರಿಗಣಿಸಲ್ಪಟ್ಟ ವ್ಯಕ್ತಿಗಳಿಗೆ ಮಾತ್ರ ಅನ್ವಯಿಸುತ್ತವೆ. ಪೌರಾಣಿಕ ಗ್ರಂಥಗಳ ಪ್ರಕಾರ ರಾಕ್ಷಸ ರಾಜನಾಗಿರುವ ರಾವಣನು ಮಾನವ ವರ್ಗದಡಿಯಲ್ಲಿ ಬರುವುದಿಲ್ಲ ಎಂದು ಆಯೋಗ ಹೇಳಿದೆ.

ಹಾಗೆಯೇ ಇಂತಹ ಅರ್ಜಿಗಳು ಕೇವಲ ಪ್ರಚಾರಕ್ಕಾಗಿ ಅಥವಾ ಹಬ್ಬಗಳ ಸಂದರ್ಭದಲ್ಲಿ ಅನಗತ್ಯ ಚರ್ಚೆ ಹುಟ್ಟುಹಾಕಲು ಸಲ್ಲಿಕೆಯಾಗುತ್ತವೆಯೇ ಹೊರತು, ಇದರಿಂದ ಯಾವುದೇ ನೈಜ ಮಾನವ ಹಕ್ಕುಗಳ ಉಲ್ಲಂಘನೆ ಆಗುವುದಿಲ್ಲ ಎಂದು ಆಯೋಗವು ಅಭಿಪ್ರಾಯಪಟ್ಟಿದೆ.

ಈ ಹಿಂದೆ ಮಧ್ಯಪ್ರದೇಶದ ಇಂದೋರ್ ಹಾಗೂ ಮಹಾರಾಷ್ಟ್ರದ ನಾಗ್ಪುರದಲ್ಲಿ ಕೆಲವು ವ್ಯಕ್ತಿಗಳು ಮತ್ತು ಸಂಘಟನೆಗಳು ದಸರಾ ಹಬ್ಬದಂದು ರಾವಣನ ಪ್ರತಿಕೃತಿ ದಹಿಸುವುದನ್ನು ವಿರೋಧಿಸಿ ನ್ಯಾಯಾಲಯ, ಹೈಕೋರ್ಟ್‌ಗಳಲ್ಲಿ ಅರ್ಜಿ ದಾಖಲಿಸಿದ್ದವು. ರಾವಣನು ಮಹಾನ್ ವಿದ್ವಾಂಸ ಮತ್ತು ಶಿವಭಕ್ತನಾಗಿದ್ದರಿಂದ ಆತನ ದಹನ ತಡೆಯಬೇಕು ಎಂಬ ವಾದವನ್ನು ಆ ಅರ್ಜಿಗಳಲ್ಲಿ ಮಂಡಿಸಲಾಗಿತ್ತು.

ಇನ್ನೊಂದೆಡೆ ದಸರಾದಂದು ರಾವಣನ ಬೃಹತ್ ಪ್ರತಿಕೃತಿಗಳನ್ನು ಸುಡುವುದರಿಂದ ವಾಯು ಮಾಲಿನ್ಯ ಉಂಟಾಗುತ್ತದೆ, ದೆಹಲಿ ಹೈಕೋರ್ಟ್‌ನಲ್ಲಿ ಪ್ರತಿಕೃತಿ ದಹನವನ್ನು ನಿಯಂತ್ರಿಸಬೇಕು ಅಥವಾ ನಿಷೇಧಿಸಬೇಕು ಎಂದು ಕೋರಿ ಕೆಲವು ಪರಿಸರವಾದಿಗಳು ಸಹ ಈ ಹಿಂದೆ ಅರ್ಜಿಗಳನ್ನು ಸಲ್ಲಿಸಿದ್ದರು.

ಅಷ್ಟಕ್ಕೂ ದೇಶದಲ್ಲಿ ರಾಮನನ್ನು ಪೂಜಿಸುವಂತೆ ರಾವಣನನ್ನೂ ಪೂಜಿಸುವ ಸಮುದಾಯವಿದೆ. ಮಧ್ಯಪ್ರದೇಶದ ಮಂದಸೌರ್‌ನ ರಾವಣ ಗ್ರಾಮದಲ್ಲಿ ರಾವಣನನ್ನು ಅಳಿಯನಂತೆ, ವಿದ್ವಾಂಸ ಎಂದು ಕಾಣಲಾಗುತ್ತದೆ. ಇಲ್ಲಿನ ಕೆಲ ಸಮುದಾಯದವರು ರಾವಣನಿಗೆ ಪೂಜೆ ಸಲ್ಲಿಸುತ್ತಾರೆ ಮತ್ತು ಮದುವೆ ಸಮಾರಂಭಗಳಲ್ಲಿ ರಾವಣನ ಪ್ರತಿಮೆಗೆ ಮೊದಲ ಆಹ್ವಾನ ನೀಡುವ ಪದ್ಧತಿಯೂ ಇದೆ. ಉತ್ತರ ಪ್ರದೇಶದ ಬಿಸ್ಖ್ ಎಂಬ ದೆಹಲಿ ಹತ್ತಿರವಿರುವ ಈ ಗ್ರಾಮವನ್ನು ರಾವಣನ ಜನ್ಮಸ್ಥಳವೆಂದು ನಂಬಲಾಗಿದೆ. ಇಲ್ಲಿ ದಸರೆಯ ದಿನ ರಾವಣನ ದಹನ ಮಾಡುವ ಬದಲು ಆತನ ಆತ್ಮಶಾಂತಿಗಾಗಿ ಪೂಜೆ ಮತ್ತು ಯಾಗಗಳನ್ನು ಮಾಡಲಾಗುತ್ತದೆ. ಇನ್ನು ನಮ್ಮ ರಾಜ್ಯದ ಕೋಲಾರದ ಕೆಲ ಭಾಗಗಳಲ್ಲಿ ಮತ್ತು ಮಂಡ್ಯದ ಕೆಲವು ಕಡೆಗಳಲ್ಲಿ ಶಿವಭಕ್ತನಾದ ರಾವಣನ ದೇವಾಲಯಗಳಿದ್ದು, ಅಲ್ಲಿ ಶಿವನೊಂದಿಗೆ ರಾವಣನನ್ನೂ ಪೂಜಿಸುವ ಭಕ್ತರಿದ್ದಾರೆ. ಕೇರಳದ ಕಣ್ಣೂರು ಮತ್ತು ಆಂಧ್ರಪ್ರದೇಶದಲ್ಲಿ ಕೆಲವು ಸಮುದಾಯಗಳು ರಾವಣನನ್ನು ರಾಕ್ಷಸನಾಗಿ ನೋಡದೆ, ಅತ್ಯಂತ ಶಕ್ತಿಶಾಲಿ ಶಿವಭಕ್ತ ಮತ್ತು ಮಹಾನ್ ವಿದ್ವಾಂಸನಾಗಿ ಗೌರವಿಸುತ್ತವೆ.

# ಧರ್ಮಸ್ಥಳದಲ್ಲಿ ನವರಾತ್ರಿ ವೈಭವದ ಸಂಭ್ರಮಾಚರಣೆ

**ಮುಂಬಯಿ, ಅ.13:** ಧರ್ಮಸ್ಥಳದಲ್ಲಿ ನವರಾತ್ರಿ ಸಂದರ್ಭದಲ್ಲಿ ಮಂಗಳೂರು ಅರ್ಕುಳದ ಪವಿತ್ರವಿನಯ್ ಮಯ್ಯ ಮತ್ತು ಅವರ ಮಗಳು ಕುಮಾರಿ ಇಂಚರ ಹಾಗೂ ಟಿ.ವಿ. ಗಿರಿ ಎರಡು ಗಂಟೆಗಳ ಕಾಲ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಹಿಮ್ಮೇಳದಲ್ಲಿ ತಬಲಾವಾದಕರಾಗಿ ವಿವೇಕ್ ಬಾಳಿಗ, ಕೀಬೋರ್ಡ್ ಅಮ್ಮು ಮಾಸ್ಟರ್ ಕಾಸರಗೋಡು ಮತ್ತು ಕಮಲಾಕ್ಷ ಗುಡಿಗಾರ್, ರಿದಂಪ್ಯಾಡ್ ವಾದಕರಾಗಿ ಪ್ರದೀಪ್ ಕಾಸರಗೋಡು ಸಹಕರಿಸಿದರು. ದೇವಸ್ಥಾನದಲ್ಲಿ ವಿಶೇಷ ಅಲಂಕಾರ ಪೂಜೆ ನಡೆಯಿತು. ಸೋಮವಾರವಾಗಿದ್ದು ಭಕ್ತರ ಸಂಖ್ಯೆ ಅಧಿಕವಾಗಿತ್ತು.ಮಂಗಳವಾರ ರಾತ್ರಿ ಮೈಸೂರಿನ ಕುಮಾರಿ ಮಾನ್ಸಿ ಭಕ್ತಿ ಸಂಗೀತ ಹಾಡಿದರು.




ಬುಧವಾರ ಮಂಗಳೂರಿನ ಮಾಸ್ಟರ್ ಆಗಮ ಪೆರ್ಲ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವಿದೆ. ಅ. 19ರ ವರೆಗೆ ಪ್ರತಿದಿನ ಸಂಜೆ ಆರು ಗಂಟೆಯಿಂದ ಎಂಟು ಗಂಟೆ ವರೆಗೆ ನಾಡಿನ ಖ್ಯಾತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

# ಸೌದಿ ಅರೇಬಿಯಾದಿಂದ ತುರ್ತು ನಿರ್ಗಮನಕ್ಕೆ ನೆರೆಯ ದೇಶಗಳ ವಿಮಾನ ಬಳಸಿ: ಭಾರತೀಯರಿಗೆ ಸೂಚನೆ

**ರಿಯಾದ್,ಅ.13:** ಸೌದಿ ಅರೇಬಿಯಾ ಮತ್ತು ಯೆಮನ್‌ನ ಹೌತಿ ಬಂಡುಕೋರರ ನಡುವಿನ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸೌದಿಯಲ್ಲಿರುವ ಭಾರತೀಯರಿಗೆ ಭಾರತೀಯ ರಾಯಭಾರ ಕಚೇರಿ ಹೊಸ ಸಲಹೆ ನೀಡಿದೆ. ತುರ್ತು ಸಂದರ್ಭದಲ್ಲಿ ದೇಶದಿಂದ ನಿರ್ಗಮಿಸಲು ಬಯಸುವ ಭಾರತೀಯರು ಕತಾರ್ ಮತ್ತು ಬಹರೇನ್ ಸೇರಿದಂತೆ ನೆರೆಯ ಕೊಲ್ಲಿ ರಾಷ್ಟ್ರಗಳ ವಿಮಾನ ನಿಲ್ದಾಣಗಳಿಂದ ಲಭ್ಯವಿರುವ ವಿಮಾನಗಳನ್ನು ಬಳಸಬಹುದು ಎಂದು ತಿಳಿಸಿದೆ.



ರಿಯಾದ್‌ಗೆ ತೆರಳುವ ಮತ್ತು ಅಲ್ಲಿಂದ ಹೊರಡುವ ವಿಮಾನಗಳ ಸೇವೆಯನ್ನು ನಾಲ್ಕು ಭಾರತೀಯ ವಿಮಾನಯಾನ ಸಂಸ್ಥೆಗಳು ತಾತ್ಕಾಲಿಕವಾಗಿ ರದ್ದುಗೊಳಿಸಿವೆ. ಈ ಹಿನ್ನೆಲೆಯಲ್ಲಿ ಮಂಗಳವಾರ ಪ್ರಕಟಣೆ ಹೊರಡಿಸಿರುವ ರಾಯಭಾರ ಕಚೇರಿ, ನೆರೆಯ ದೇಶಗಳಿಂದ ಪ್ರಯಾಣಿಸಲು ಆಯಾ ದೇಶಗಳ ವೀಸಾ ಪಡೆಯುವುದು ಕಡ್ಡಾಯ ಎಂದು ಸ್ಪಷ್ಟಪಡಿಸಿದೆ. ಮನೆಯೊಳಗೇ ಇರಿ; ವಿಡಿಯೊ ಹಂಚಬೇಡಿ: ಸೌದಿಯಲ್ಲಿರುವ ಭಾರತೀಯರು ಮನೆಯೊಳಗೇ ಇರಬೇಕು. ಪ್ರಸ್ತುತ ಬೆಳವಣಿಗೆಗಳಿಗೆ ಸಂಬಂಧಿಸಿದ ವಿಡಿಯೋ ಹಾಗೂ ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು ಅಥವಾ ಮರುಹಂಚಿಕೆ ಮಾಡುವುದು ಬೇಡ. ಸ್ಥಳೀಯ ಅಧಿಕಾರಿಗಳ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ರಾಯಭಾರ ಕಚೇರಿ ಸಲಹೆ ನೀಡಿದೆ. ರಿಯಾದ್‌ನ ಭಾರತೀಯ ರಾಯಭಾರ ಕಚೇರಿ, ಜೆಡ್ಡಾದಲ್ಲಿರುವ ದೂತಾವಾಸ ಹಾಗೂ ವಿಎಫ್‌ಎಸ್ ಮೂಲಕ ಪಾಸ್‌ಪೋರ್ಟ್ ಮತ್ತು ದಾಖಲೆ ದೃಢೀಕರಣ ಸೇವೆಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದೆ.

ಅ.17ರವರೆಗೆ ವಿಮಾನ ಹಾರಾಟ ರದ್ದು ಏರ್ ಇಂಡಿಯಾ ಎಕ್ಸ್‌ಪ್ರೆಸ್, ಆಕಾಶ ಏರ್, ಇಂಡಿಗೊ ಮತ್ತು ಏರ್ ಇಂಡಿಯಾ ಸಂಸ್ಥೆಗಳು ಅಕ್ಟೋಬರ್ 17ರವರೆಗೆ ರಿಯಾದ್‌ಗೆ ತೆರಳುವ ಮತ್ತು ಅಲ್ಲಿಂದ ಹೊರಡುವ ವಿಮಾನಗಳನ್ನು ರದ್ದುಗೊಳಿಸಿವೆ. ಆದರೆ ಸೌದಿಯ ವಿಮಾನಯಾನ ಸಂಸ್ಥೆ ಸೌದಿಯಾ, ದಮ್ಮಾಮ್, ಜೆಡ್ಡಾ ಮತ್ತು ಮದೀನಾ ನಗರಗಳಿಂದ ನಿಗದಿತ ವಿಮಾನ ಸೇವೆಗಳನ್ನು ಮುಂದುವರಿಸಿದೆ. ಫ್ಲೈನಾಸ್ ಸಂಸ್ಥೆಯೂ ದಮ್ಮಾಮ್–ಲಖನೌ ಮಾರ್ಗದಲ್ಲಿ ವಿಮಾನಗಳನ್ನು ನಿರ್ವಹಿಸುತ್ತಿದೆ ಎಂದು ರಾಯಭಾರ ಕಚೇರಿ ತಿಳಿಸಿದೆ.

# ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶಿವಾನಂದ ತಗಡೂರುಗೆ ತವರಿನ ಗೌರವ

**ಚನ್ನರಾಯಪಟ್ಟಣ:** ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕೃತರಾದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರನ್ನು ತವರು ತಾಲೂಕು ಚನ್ನರಾಯಪಟ್ಟಣದಲ್ಲಿ ಅಭಿಮಾನಪೂರ್ವಕವಾಗಿ ಸನ್ಮಾನಿಸಲಾಯಿತು.



ತಾಲೂಕು ಕಾರ್ಯ ನಿರತ ಪತ್ರಕರ್ತರ ಸಂಘ ಸಂಘಟಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ರಂಗಕರ್ಮಿ ಮತ್ತು ನಾಟಕ ಅಕಾಡೆಮಿ ಮಾಜಿ ಸದಸ್ಯ ಚಂದ್ರು ಕಾಳೇನಹಳ್ಳಿ, ಹೋರಾಟದ ನೆಲೆಯಿಂದ ತಳ ಹಂತದಿಂದ ಬೆಳೆದು ಬಂದ ಶಿವಾನಂದ ತಗಡೂರು ಅವರು ಹಾಸನ ಜಿಲ್ಲೆಯಲ್ಲಿ ರಂಗಕರ್ಮಿಯಾಗಿ ಹೆಜ್ಜೆ ಗುರುತು ಮೂಡಿಸಿದವರು. ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿರುವುದು ತಾಲೂಕಿಗೆ ಅಷ್ಟೇ ಅಲ್ಲ, ಹಾಸನ ಜಿಲ್ಲೆಗೆ ಹೆಮ್ಮೆಯ ಸಂಗತಿ ಎಂದರು.

ಪತ್ರಕರ್ತರಾಗಿಯೂ ರಾಜ್ಯಮಟ್ಟದಲ್ಲಿ ಹೆಸರು ಮಾಡಿದ ಶಿವಾನಂದ ತಗಡೂರು, ಬದುಕಿನುದ್ದಕ್ಕೂ ಹೋರಾಟ ಮಾಡಿಕೊಂಡೇ ಬಂದಿದ್ದಾರೆ. ನಿರಂತರವಾಗಿ ಅವರು ಪತ್ರಕರ್ತರ ಸಮುದಾಯಕ್ಕೆ ನೆರವು, ಸೌಲಭ್ಯ ಕೊಡಿಸುತ್ತಾ ಬಂದಿರುವ ಕಾರಣಕ್ಕಾಗಿಯೇ ಅವರು ರಾಜ್ಯ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾಗಿ ಮೂರು ಬಾರಿ ಅವಿರೋಧವಾಗಿ ಆಯ್ಕೆಯಾಗಲು ಸಾಧ್ಯವಾಗಿದೆ ಎಂದರು.

ಚನ್ನರಾಯಪಟ್ಟಣ ಮಣ್ಣಿನಲ್ಲಿ ಅರಳಿದ ಪತ್ರಕರ್ತರೊಬ್ಬರು, ರಂಗಕರ್ಮಿಯಾಗಿಯೂ ಬಹುಮುಖ ವ್ಯಕ್ತಿತ್ವ ರೂಢಿಸಿಕೊಂಡು ಸಾಗುತ್ತಿರುವುದು ನಮಗೆಲ್ಲ ಅಭಿಮಾನದ ಸಂಗತಿ ಎಂದರು.

ರಂಗಸಿರಿ ತಂಡದ ಕಾರ್ಯದರ್ಶಿ ಪಿ.ಷಾಡ್ರಾಕ್ ಮಾತನಾಡಿ, ಸಾಕ್ಷರತಾ ಆಂದೋಲನದಲ್ಲಿ ಬೀದಿ ನಾಟಕಗಳ ಮೂಲಕ ಜಿಲ್ಲೆಯ 1700ಕ್ಕೂ ಹೆಚ್ಚು ಹಳ್ಳಿಗಳನ್ನು ನಾವು ಶಿವಾನಂದ್ ಜೊತೆಯಲ್ಲಿ ಸುತ್ತಿದ್ದೇವೆ. 800ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಬೀದಿ ನಾಟಕಗಳನ್ನು ಮಾಡಿದ್ದೇವೆ. ಆಂದೋಲನದ ಮುಖ್ಯ ಸಂಯೋಜಕರಾಗಿ ಶಿವಾನಂದ ನೀಡಿದ ಕೊಡುಗೆ ಅನನ್ಯ ಎಂದರು.

ತೊಂಬತ್ತರ ದಶಕದಲ್ಲಿ ರಂಗಸಿರಿ ನಾಟಕ ತಂಡ ಕಟ್ಟಲು ಮತ್ತು ಈ ತಂಡ ಮೂರು ದಶಕಗಳ ಕಾಲ ಮುನ್ನಡೆಯಲು ಶಿವಾನಂದ ತಗಡೂರು ಪಾತ್ರ ಮಹತ್ವದ್ದು. ಸ್ವತಃ ಪಾತ್ರದಾರಿಯಾಗಿ ಅಭಿನಯಿಸಿದ್ದು, ರಂಗ ತೆರೆಯ ನೇಪಥ್ಯದಲ್ಲಿ ನಿರಂತರ ಕೆಲಸ ಮಾಡಿದ್ದು, ಈಗಲೂ ಆ ಕೆಲಸ ಮುಂದುವರಿಸಿರುವುದು ಅವರೊಳಗೆ ರಂಗಭೂಮಿ ಬಗ್ಗೆ ಇರುವ ಕಾಳಜಿ ಮತ್ತು ಪ್ರೀತಿಯನ್ನು ತೋರಿಸುತ್ತದೆ ಎಂದರು.

ಹಿರಿಯ ರಂಗಕರ್ಮಿ ನಂಜುಂಡಮೈಮ್ ಮಾತನಾಡಿ, ನಮ್ಮ ತಂಡದ ನಾಟಕಗಳನ್ನು ಪ್ರೋತ್ಸಾಹ ಮಾಡುತ್ತಿದ್ದ ತಗಡೂರು, ಹಾಸನದಲ್ಲಿ ನೆಲೆ ನಿಂತು ರಂಗಭೂಮಿಗೆ ರಂಗಸಿರಿ ಮೂಲಕ ಜೀವ ತುಂಬಿದರು ಎಂದು ಹೇಳಿದರು.

ಪತ್ರಕರ್ತ ಜಯರಾಂ, ಶ್ಯಾಮ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ್, ಮಾಜಿ ಅಧ್ಯಕ್ಷ ಎ. ಎಲ್.ನಾಗೇಶ್, ಜೆಡಿಎಸ್ ಮುಖಂಡ ಪುಟ್ಟಸ್ವಾಮಿ ಮತ್ತಿತರರು ಮಾತನಾಡಿದರು.

ರೈತಸಂಘದ ಮುಖಂಡ ಪುಟ್ಟೇಗೌಡ, ಪರಸರಪ್ರೇಮಿ ಚ.ನಂ.ಅಶೋಕ್, ಮೆಡಿಕಲ್ ವಸಂತ್, ತಗಡೂರು ಬಸವರಾಜು, ಕಲ್ಲೇಸೋಮನಹಳ್ಳಿ ಭಾರತೀಶ್, ಲಕ್ಕರಸನಹಳ್ಳಿ ಅಶೋಕ್, ರಂಗಕರ್ಮಿ ಉಮೇಶ್ ಮತ್ತಿತರರು ಹಾಜರಿದ್ದರು.



# ಸತ್ಯಸಾಯಿ ಗ್ರಾಮದಲ್ಲಿ ಶಾರದಾ ನವರಾತ್ರಿ: ಮೋದಿ ಲಿಸ್ಟ್‌ನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಅಭಿವೃದ್ಧಿಗೆ ಆದ್ಯತೆ: ಶೋಭಾ ಕರಂದ್ಲಾಜೆ



**ಚಿಕ್ಕಬಳ್ಳಾಪುರ, ಅ.13–** ಸತ್ಯ ಸಾಯಿ ಗ್ರಾಮದಲ್ಲಿ ನಡೆಯುತ್ತಿರುವ ಶಾರದಾ ನವರಾತ್ರಿ ಆಚರಣೆಯ ಮೂರನೇ ದಿನವಾದ ಮಂಗಳವಾರ ಚಂದ್ರಘಂಟಾ ರೂಪದಲ್ಲಿ ದೇವಿಯನ್ನು ಆರಾಧಿಸಲಾಯಿತು. ಪವಮಾನ ಹೋಮ ಮತ್ತು ಆಶ್ಲೇಷ ಬಲಿಯನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ಹೋಮದ ಪೂರ್ಣಾಹುತಿಯನ್ನು ನೆರವೇರಿಸಿ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಉಚಿತ ಶಿಕ್ಷಣ ಮತ್ತು ಆರೋಗ್ಯ ಸೇವೆಯ ಮೂಲಕ ಸದ್ಗುರು ಮಧುಸೂದನ ಸಾಯಿ ಅವರು ಜಗತ್ತಿಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಅವರ ಜೊತೆಗೆ ಇಡೀ ಸಮಾಜ, ದೇಶ ನಿಲ್ಲಬೇಕಾಗಿದೆ ಎಂದು ಕರೆ ನೀಡಿದರು.

ದೇಶದ ಅತ್ಯಂತ ಹಿಂದುಳಿದ ಜಿಲ್ಲೆಗಳ ಪೈಕಿ ಕೆಲವನ್ನು ಆದ್ಯತೆಯ ಮೇರೆಗೆ ಅಭಿವೃದ್ಧಿಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಒಂದು ಪಟ್ಟಿ ಸಿದ್ಧಪಡಿಸಿದ್ದಾರೆ. ಅದರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯೂ ಸೇರಿದೆ. ಇಲ್ಲಿನ ಚಟುವಟಿಕೆಗಳನ್ನು ಅವರು ಸ್ವತಃ ಪರಿಶೀಲಿಸುತ್ತಿರುತ್ತಾರೆ. ಸದ್ಗುರುಗಳ ಸಂಸ್ಥೆಗಳು ಕಾರ್ಯನಿರ್ವಹಿಸುವ ಮೊದಲಿನ ಪರಿಸ್ಥಿತಿಯನ್ನು ಇಂದಿನ ಸ್ಥಿತಿಗೆ ಹೋಲಿಸಿದರೆ ವ್ಯತ್ಯಾಸ ನಿಚ್ಚಳವಾಗಿ ಗೋಚರಿಸುತ್ತದೆ ಎಂದು ವಿವರಿಸಿದರು.

ನಮ್ಮ ಸದ್ಗುರುಗಳು ಅಧ್ಯಾತ್ಮವನ್ನು ಸೇವೆಯೊಂದಿಗೆ ಬೆಸೆದಿದ್ದಾರೆ. ಉಚಿತ ವೈದ್ಯಕೀಯ ಶಿಕ್ಷಣ ಕೊಡುವ ಕಾಲೇಜು ಮುದ್ದೇನಹಳ್ಳಿಯಲ್ಲಿ ಮಾತ್ರವೇ ಇದೆ. ಇಂಥ ಪ್ರಯೋಗ ಮಾಡುತ್ತಿರುವ ಜಗತ್ತಿನ ಏಕೈಕ ಗುರು ಇವರೊಬ್ಬರೇ ಎಂದು ಶ್ಲಾಘಿಸಿದರು.

ಆಶೀರ್ವಚನ ನೀಡಿದ 'ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್' ಸಂಸ್ಥಾಪಕ ಸದ್ಗುರು ಮಧುಸೂದನ ಸಾಯಿ, ನಮ್ಮ ದೇಶವು ಮಹಿಳೆಯರು ಪುರುಷರಷ್ಟೇ ಸಮಾನರು ಎನ್ನುವುದಲ್ಲ; ಪುರುಷರಿಂಗಲೂ ಶ್ರೇಷ್ಠ ಎಂದೇ ಪ್ರತಿಪಾದಿಸುತ್ತದೆ. ಜೀವನಕ್ಕೆ ಅಗತ್ಯವಾಗಿ ಬೇಕಿರುವ ಎಲ್ಲಕ್ಕೂ ಮಾತೃತ್ವವನ್ನು ಕಲ್ಪಿಸಿ ಗೌರವಿಸಲಾಗುತ್ತಿದೆ ಎಂದು ವಿಶ್ಲೇಷಿಸಿದರು.

ಜಗತ್ತಿನ ಯಾವುದೇ ಗಂಡಸು ಪ್ರಸವವೇದನೆ ಅನುಭವಿಸಲಾರ, ಮಗುವನ್ನು ಗರ್ಭದಲ್ಲಿ ಹೊತ್ತು ಸಾಕಲಾರ. ಈ ಮಹತ್ವದ ಜವಾಬ್ದಾರಿಯನ್ನು ಮಹಿಳೆಗೆ ನೀಡಿರುವ ದೇವರು ತನ್ನ ಸೃಷ್ಟಿಯಲ್ಲಿಯೇ ಅವಳಿಗೆ ಆದ್ಯತೆ ನೀಡಿದ್ದಾನೆ. ನಿಜವಾದ ಅರ್ಥದಲ್ಲಿ ಸಮಾಜವನ್ನು ಮಹಿಳೆಯರೇ ಮುನ್ನಡೆಸುತ್ತಿದ್ದಾರೆ ಎಂದು ಹೇಳಿದರು.

ಸುಗಮ ಬದುಕಿಗೆ ಸಹಕರಿಸುವ ಎಲ್ಲವನ್ನೂ ದೇವರೆಂದೇ ಗುರುತಿಸಿ ಆರಾಧಿಸುವ ಸಂಸ್ಕೃತಿ ನಮ್ಮದು. ಹಾವುಗಳ ಪಾರಿಸರಿಕ ಮೌಲ್ಯ ಅರಿತಿದ್ದ ನಮ್ಮ ಹಿರಿಯರು ಆಶ್ಲೇಷ ಬಲಿ, ನಾಗರಕಲ್ಲಿನ ಸಂಪ್ರದಾಯಗಳ ಮೂಲಕ ಜನರಿಗೆ ಅವುಗಳ ಮಹತ್ವ ತಿಳಿಸಲು ತಮ್ಮದೇ ಮಾರ್ಗ ಕಂಡುಕೊಂಡಿದ್ದರು ಎಂದು ನುಡಿದರು.

ಶೃಂಗೇರಿಯಿಂದ ಬಂದಿರುವ ಋತ್ವಿಜರ ತಂಡದ ಮುಖ್ಯಸ್ಥರಾದ ಯಜ್ಞನಾರಾಯಣ ಭಟ್ ಮಾತನಾಡಿ, ಮನಸ್ಸಿಗೆ ಏಕಕಾಲಕ್ಕೆ ಆಹ್ಲಾದ ಮತ್ತು ಏಕಾಗ್ರತೆಯನ್ನು ಕೊಡುವ ಮೂಲಕ ಅಧ್ಯಾತ್ಮ ಸಾಧನೆಯಲ್ಲಿ ಚಂದ್ರಘಂಟಾ ಮಾತೆ ಮುನ್ನಡೆಸುತ್ತಾಳೆ ಎನ್ನುವುದು ಪಾರಂಪರಿಕ ನಂಬಿಕೆ. ದಿನನಿತ್ಯದ ನಮ್ಮ ಬದುಕಿನಲ್ಲಿ ತಿಳಿದೋ–ತಿಳಿಯದೆಯೋ ಆದ ಪಾಪಗಳನ್ನು ಪವಮಾನದ ಹೋಮದ ಮಂತ್ರಗಳು ತೊಳೆದು ಪವಿತ್ರಗೊಳಿಸುತ್ತವೆ" ಎಂದು ನವರಾತ್ರಿಯ 3ನೇ ದಿನ ಮಹತ್ವ ವಿವರಿಸಿದರು.



## ಸತ್ಯ ಸಾಯಿ ಗ್ರಾಮಕ್ಕೆ ಜಪಾನ್ ರೈತರ ನಿಯೋಗ

ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಉಪಕ್ರಮಗಳಿಂದ ಕರ್ನಾಟಕದ ರಾಗಿ ಬೆಳೆ ಪದ್ಧತಿಯಲ್ಲಿ ಆಗುತ್ತಿರುವ ಪರಿವರ್ತನೆಯನ್ನು ತಿಳಿದುಕೊಳ್ಳಲು ಜಪಾನ್‌ನ 15 ರೈತರ ನಿಯೋಗವು 'ಅಗ್ ಬಯೊಟೆಕ್' ಕಂಪನಿಯ ತಾಕಾ ಮಸಾಸನನ್ ನೇತೃತ್ವದದಲ್ಲಿ ಮಂಗಳವಾರ ಸತ್ಯ ಸಾಯಿಗ್ರಾಮಕ್ಕೆ ಭೇಟಿ ನೀಡಿತು. 'ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್' ಮೂಲಕ ದೇಶದ 1 ಕೋಟಿ ಮಕ್ಕಳಿಗೆ ಪ್ರತಿದಿನ ಮುಂಜಾನೆ 'ಸಾಯಿ ಶ್ಯೂರ್' ಪೌಷ್ಠಿಕ ಆಹಾರ ನೀಡುತ್ತಿರುವ ವಿಚಾರ ತಿಳಿದ ನಿಯೋಗದ ಸದಸ್ಯರು ತಾವೂ ಹೇಗೆ ಈ ಕಾರ್ಯದಲ್ಲಿ ಕೈಜೋಡಿಸಬಹುದು ಎನ್ನುವ ಬಗ್ಗೆ ಮಾಹಿತಿ ಪಡೆದುಕೊಂಡರು. ಜಪಾನ್ ನಿಯೋಗಕ್ಕೆ 'ಸುಭಿಕ್ಷಾ ಸಾವಯವ ಕೃಷಿಕರ ಬಹುರಾಜ್ಯ ಸಹಕಾರ ಸಂಘ'ದ ಮುಖ್ಯಸ್ಥರಾದ ಅ.ಶ್ರೀ.ಆನಂದ ಮತ್ತು ಸಾಯಿ ಶ್ಯೂರ್‌ನ ನಿರ್ದೇಶಕರಾದ ಭರಣಿ ಪ್ರಸಾದ್ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಕರ್ನಾಟಕದ ರಾಗಿ ಆಧಾರಿತ ಉತ್ಪನ್ನಗಳಿಗೆ ಜಪಾನ್‌ನಲ್ಲಿ ಮಾರುಕಟ್ಟೆ ಕಲ್ಪಿಸುವುದು, ಬೆಳೆ ಪದ್ಧತಿ ತಂತ್ರಜ್ಞಾನ ವಿನಿಮಯದ ಕುರಿತು ಅರ್ಥಪೂರ್ಣ ಚರ್ಚೆ ನಡೆಯಿತು.



ಮಂಗಳವಾರ ಮೈಸೂರು ಅರಮನೆಯಲ್ಲಿ ನಡೆದ ದಸರಾ ರಂಗೋಲಿ ಸ್ಪರ್ಧೆಯಲ್ಲಿ ಮಹಿಳೆಯರು ಭಾಗವಹಿಸಿದರು.

# ರೋರಿಕ್–ದೇವಿಕಾ ರಾಣಿ ಎಸ್ಟೇಟ್‌ನಲ್ಲಿ ಪರಿಸರ ಸ್ನೇಹಿ ಕಾಮಗಾರಿ ಚುರುಕುಗೊಳಿಸಿ: ಸಚಿವ ಕೆ.ಜೆ.ಜಾರ್ಜ್



**ಬೆಂಗಳೂರು, ಅ.7:** ರೋರಿಕ್–ದೇವಿಕಾ ರಾಣಿ ಎಸ್ಟೇಟ್‌ನಲ್ಲಿ ಎಕೋ ಟೂರಿಸಂ ಅಭಿವೃದ್ಧಿಗೆ ಸಂಬಂಧಿಸಿದಂತೆ ನ್ಯಾಯಾಲಯದ ನಿರ್ದೇಶನದ ಮಿತಿಯಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳನ್ನು ಚುರುಕುಗೊಳಿಸುವಂತೆ ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಅಧಿಕಾರಿಗಳಿಗೆ ಸೂಚಿಸಿದರು.

ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಇಂದು ರೋರಿಕ್–ದೇವಿಕಾ ರಾಣಿ ಎಸ್ಟೇಟ್‌ಗೆ ಭೇಟಿ ನೀಡಿದ ಸಚಿವರು, ಅಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿ, ಅನುಮತಿಸಲಾದ ಅಭಿವೃದ್ಧಿ ಕಾರ್ಯಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸಿದರು.

ಎಸ್ಟೇಟ್‌ನ ನೈಸರ್ಗಿಕ ಪರಿಸರ, ಹಸಿರು ವಲಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಂಡೇ ಪ್ರವಾಸಿಗರಿಗೆ ಅಗತ್ಯ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಸಚಿವರು ತಿಳಿಸಿದರು.

ರೋರಿಕ್–ದೇವಿಕಾ ರಾಣಿ ಎಸ್ಟೇಟ್ ಕಲೆ, ಸಂಸ್ಕೃತಿ ಮತ್ತು ನೈಸರ್ಗಿಕ ಪರಂಪರೆಯ ವಿಶಿಷ್ಟ ತಾಣವಾಗಿದೆ. ಇಲ್ಲಿ ಕೈಗೊಳ್ಳುವ ಪ್ರತಿಯೊಂದು ಕಾಮಗಾರಿಯೂ ನ್ಯಾಯಾಲಯದ ನಿರ್ದೇಶನಗಳು ಮತ್ತು ಪರಿಸರ ಸಂರಕ್ಷಣಾ ಮಾನದಂಡಗಳಿಗೆ ಅನುಗುಣವಾಗಿರಬೇಕು. ಅನುಮತಿಸಲಾದ ಕಾಮಗಾರಿಗಳನ್ನು ವಿಳಂಬವಿಲ್ಲದೆ ಪೂರ್ಣಗೊಳಿಸಿ, ಈ ತಾಣವನ್ನು ಸಂರಕ್ಷಣೆ ಆಧಾರಿತ ಎಕೋ ಟೂರಿಸಂ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು ನಮ್ಮ ಉದ್ದೇಶ ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಡಾ. ರಾಮ್‌ಪ್ರಸಾತ್ ಮನೋಹರ್ ಮಾತನಾಡಿ, ರೋರಿಕ್–ದೇವಿಕಾ ರಾಣಿ ಎಸ್ಟೇಟ್‌ನ ಅಭಿವೃದ್ಧಿಯನ್ನು ಕೇವಲ ಮೂಲಸೌಕರ್ಯ ಕಾಮಗಾರಿಯಾಗಿ ನೋಡುತ್ತಿಲ್ಲ. ಇಲ್ಲಿನ ಪರಿಸರ, ಪರಂಪರೆ ಮತ್ತು ಕಲಾತ್ಮಕ ಮಹತ್ವವನ್ನು ಕಾಪಾಡಿಕೊಂಡೇ ಪ್ರವಾಸಿಗರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಸಮತೋಲನದ ಮಾದರಿಯನ್ನು ರೂಪಿಸಲಾಗುತ್ತಿದೆ. ನ್ಯಾಯಾಲಯ ಅನುಮತಿಸಿರುವ ಕಾಮಗಾರಿಗಳನ್ನು ಆದ್ಯತೆ ಆಧಾರದಲ್ಲಿ ಕೈಗೆತ್ತಿಕೊಂಡು, ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಮುಂದಿನ ಹಂತಗಳನ್ನು ಯೋಜಿಸಲಾಗುವುದು.

ಸಚಿವರು ಕಾಮಗಾರಿಗಳ ಪ್ರಗತಿ, ಪ್ರವಾಸಿಗರ ಮೂಲಸೌಲಭ್ಯ, ಪರಿಸರ ಸಂರಕ್ಷಣೆ ಹಾಗೂ ಯೋಜನೆಯ ಮುಂದಿನ ಹಂತಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆಯ ಆಯುಕ್ತ ಶಿವಪ್ರಸಾದ್ ಪಿ.ಆರ್. ಹಾಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶಿವರಾಮ್ ಬಾಬು ಎಂ., ಐಎಫ್‌ಎಸ್ ಸೇರಿದಂತೆ ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಪರಿಶಿಷ್ಟರ ಮೀಸಲಾತಿ ಪ್ರಮಾಣ ಹೆಚ್ಚಳದ ತೀರ್ಮಾನ ರದ್ದು ಬಿಜೆಪಿ ಸರ್ಕಾರದಿಂದಾದ ಪ್ರಮಾದ: ಸಿದ್ದರಾಮಯ್ಯ



**ಬೆಂಗಳೂರು, ಸೆ.13:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹೆಚ್ಚಳದ ನಿರ್ಧಾರವನ್ನು ರದ್ದುಗೊಳಿಸಿದ ಹೈಕೋರ್ಟ್ ತೀರ್ಪು, ಹಲವು ತಲೆಮಾರುಗಳಿಂದ ಸಮಾನ ಅವಕಾಶ ವಂಚಿತವಾಗಿದ್ದ ಶೋಷಿತ ಸಮುದಾಯಗಳ ಘನತೆಯ ಬದುಕಿನ ಕನಸಿಗೆ ಘಾಸಿಯುಂಟು ಮಾಡಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ನ್ಯಾಯಾಲಯದ ತೀರ್ಪಿನ ಬಗ್ಗೆ ಗೌರವವನ್ನು ವ್ಯಕ್ತಪಡಿಸುತ್ತಲೇ, ಸಾಮಾಜಿಕ ನ್ಯಾಯದ ವಿಚಾರದಲ್ಲಿ ಅಂದಿನ ಬಿಜೆಪಿ ಸರ್ಕಾರವು ಪೂರ್ವ ತಯಾರಿ ಇಲ್ಲದೆ ಅವಸರದಲ್ಲಿ ಮೀಸಲಾತಿ ಹೆಚ್ಚಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮಾಡಿರುವ ಅನ್ಯಾಯವನ್ನು ಖಂಡಿಸುತ್ತೇನೆ. ಸುಪ್ರೀಂ ಕೋರ್ಟ್ ಇಂದಿರಾ ಸಹಾನಿ ಪ್ರಕರಣದಲ್ಲಿ ಒಟ್ಟು ಮೀಸಲಾತಿಯು ಶೇ. 50ರ ಮಿತಿಯನ್ನು ಮೀರಬಾರದು ಎಂದು ನೀಡಿದ್ದ ತೀರ್ಪಿನ ಅರಿವಿದ್ದರೂ, ಬಿಜೆಪಿ ಸರ್ಕಾರ 2023ರ ವಿಧಾನಸಭಾ ಚುನಾವಣೆಗೂ ಮುನ್ನ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಶೇ. 3ರಿಂದ ಶೇ.7ಕ್ಕೆ ಹೆಚ್ಚಿಸಿದ್ದು ಈಗಿನ ಅವಾಂತರಕ್ಕೆ ಕಾರಣ ಎಂದಿದ್ದಾರೆ.

ಮೀಸಲಾತಿ ಹೆಚ್ಚಳಕ್ಕೆ ಸೂಕ್ತ ಸಾಂವಿಧಾನಿಕ ರಕ್ಷಣೆಯನ್ನು ನೀಡದೆ ಆತುರವಾಗಿ ಜಾರಿ ಮಾಡಿದ್ದೇಕೆ ಸಾಮಾಜಿಕ ನ್ಯಾಯದ ಪಾಲನೆಗಿಂತ ಚುನಾವಣಾ ಲಾಭವೇ ಬಿಜೆಪಿಗೆ ಮುಖ್ಯವಾಗಿತ್ತೆ ಎಂದಿದ್ದಾರೆ.

ಅಹಿಂದ ವರ್ಗಗಳಾದ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರಿಗೆ ಸೂಕ್ತ ಮೀಸಲಾತಿ ಸೌಲಭ್ಯ ದೊರೆತು, ಅವರು ಸಮಾಜದ ಮುಖ್ಯವಾಹಿನಿಗೆ ಬರಬೇಕು, ಇದರಲ್ಲಿ ಯಾವುದೇ ರಾಜಿಯಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯಿಲ್ಲದೆ ರಾಜಕೀಯ ಪ್ರಜಾಪ್ರಭುತ್ವ ಅಪೂರ್ಣ ಎನ್ನುವುದು ನನ್ನ ದೃಢ ನಂಬಿಕೆ. ಕೇಂದ್ರ ಸರ್ಕಾರವು ಶೇ. 50ರ ಮಿತಿಗೆ ಜೋತುಬೀಳದೆ , ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಹೆಚ್ಚಿಸಿ ಅದನ್ನು ಸಂವಿಧಾನದ 9ನೇ ಶೆಡ್ಯೂಲ್ ಸೇರಿಸಿ ರಕ್ಷಣೆ ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದಿದ್ದಾರೆ.

# ಶಕ್ತಿಗೆ ಬಲ ತುಂಬಿದ ಸರ್ಕಾರ: ನಾಲ್ಕು ಸಾರಿಗೆ ನಿಗಮಗಳಿಗೆ 430 ಕೋಟಿ ರೂ. ಬಿಡುಗಡೆ



**ಬೆಂಗಳೂರು, ಅ.13:** ನಿತ್ಯ ಲಕ್ಷಾಂತರ ಮಹಿಳೆಯರ ಉಚಿತ ಪ್ರಯಾಣಕ್ಕೆ ಆಧಾರವಾಗಿರುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಗೆ ಮತ್ತೊಂದು ಭಾರಿ ಆರ್ಥಿಕ ಬಲ ದೊರೆತಿದೆ.

ಅಕ್ಟೋಬರ್ 2026ರ ತಿಂಗಳ ಉಚಿತ ಬಸ್ ಪ್ರಯಾಣದ ವೆಚ್ಚ ಭರಿಸಲು ಸರ್ಕಾರ ಏಕಕಾಲದಲ್ಲಿ 430 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದು, ಕರ್ನಾಟಕದ ನಾಲ್ಕು ರಸ್ತೆ ಸಾರಿಗೆ ನಿಗಮಗಳಿಗೆ ಅನುದಾನ ಹಂಚಿಕೆ ಮಾಡಿ ಆದೇಶ ಹೊರಡಿಸಿದೆ.

2026–27ನೇ ಸಾಲಿನ ಆಯವ್ಯಯದಲ್ಲಿ ಶಕ್ತಿ ಯೋಜನೆಗಾಗಿ ಒಟ್ಟು 5,300 ಕೋಟಿ ರೂಪಾಯಿ ಮೀಸಲಿಡಲಾಗಿದ್ದು, ಸಹಾಯಧನ, ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಗಿರಿಜನ ಉಪಯೋಜನೆ (ಟಿಎಸ್‌ಪಿ) ಅಡಿಯಲ್ಲಿ ಈ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ಅಕ್ಟೋಬರ್ 2026ರ ತಿಂಗಳಲ್ಲಿ ವಿತರಿಸಲಾಗಿರುವ ಮತ್ತು ವಿತರಿಸಲಾಗಲಿರುವ ಶೂನ್ಯ ದರದ ಟಿಕೆಟ್‌ಗಳ ವೆಚ್ಚ ಭರಿಸುವ ಉದ್ದೇಶದಿಂದ 430 ಕೋಟಿ ರೂಪಾಯಿ ಬಿಡುಗಡೆಯಾಗಿದ್ದು, ವಿವಿಧ ಸಾರಿಗೆ ನಿಗಮಗಳಿಗೆ ಶೇಕಡಾವಾರು ಅನುಪಾತ ದಂತೆ ಅನುದಾನ ಹಂಚಿಕೆ ಮಾಡಲಾಗಿದೆ. ಈ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 16,434.59 ಲಕ್ಷ ರೂಪಾಯಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ 7,843.21 ಲಕ್ಷ ರೂಪಾಯಿ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 10,539.30 ಲಕ್ಷ ರೂಪಾಯಿ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 8,182.90 ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ.

ಅನುದಾನ ಬಿಡುಗಡೆಗೆ ಸರ್ಕಾರ ಕೆಲ ಷರತ್ತುಗಳನ್ನು ವಿಧಿಸಿದೆ. ಅಕ್ಟೋಬರ್ ತಿಂಗಳ ವಾಸ್ತವಿಕ ವೆಚ್ಚದ ಕ್ರೋಢೀಕೃತ ವಿಭಾಗವಾರು ವಿವರಗಳನ್ನು ಶಕ್ತಿ ಯೋಜನೆಯ ನೋಡಲ್ ಸಂಸ್ಥೆಯಾಗಿರುವ ಕೆಎಸ್‌ಆರ್‌ಟಿಸಿ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಇದರ ಜೊತೆಗೆ ಶಕ್ತಿ ಸ್ಮಾರ್ಟ್ ಕಾರ್ಡ್‌ಗಳ ವಿತರಣಾ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಹಾಗೂ ಬಿಡುಗಡೆಗೊಂಡಿರುವ ಅನುದಾನದ ಬಳಕೆ ಪ್ರಮಾಣಪತ್ರಗಳನ್ನು ನಾಲ್ಕೂ ಸಾರಿಗೆ ನಿಗಮಗಳು ಕಡ್ಡಾಯವಾಗಿ ಸಲ್ಲಿಸಬೇಕು ಎಂದು ನಿರ್ದೇಶಿಸಲಾಗಿದೆ.

ರಾಜ್ಯ ಹುಜೂರು ಖಜಾನೆಯಿಂದ ಹಣವನ್ನು ಡ್ರಾ ಮಾಡಿಕೊಳ್ಳಲು ನಾಲ್ಕು ಸಾರಿಗೆ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸರ್ಕಾರ ಅನುಮತಿ ನೀಡಲಾಗಿದೆ.

# ಪ್ರತಿಭಟನೆಗೆ ಫ್ರೀಡಂಪಾರ್ಕ್ ಬಳಸಿಕೊಂಡು ಬಾಡಿಗೆ ಪಾವತಿಸದ ಸಿಜೆಪಿ: ಆರ್.ಅಶೋಕ್ ಕಿಡಿ



**ಬೆಂಗಳೂರು, ಅ.12:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಮತ್ತು ವಿಶೇಷ ತೀವ್ರ ಪರಿಷ್ಕರಣೆ ಕ್ರಮದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಅಕ್ಟೋಬರ್ 8ರಂದು ಪ್ರತಿಭಟನೆ ನಡೆಸಿತ್ತು. ನಟ ಪ್ರಕಾಶ್ ರಾಜ್, ಅಭಿಜಿತ್ ದೀಪ್ಕೆ, ಯೂಟ್ಯೂಬರ್ ಧ್ರುವ ರಾಠಿ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಆದರೆ ಪ್ರತಿಭಟನೆಗೆ ಫ್ರೀಡಂ ಪಾರ್ಕ್‌ನ ಸಭಾಂಗಣ ಬಳಸಿಕೊಂಡ ಸಿಜೆಪಿ ಬಾಡಿಗೆಯನ್ನೇ ಪಾವತಿಸಿಲ್ಲ ಎನ್ನಲಾಗಿದೆ. ಈ ವಿಚಾರವಾಗಿ ಪ್ರತಿಪಕ್ಷ ನಾಯಕ ಆರ್. ಅಶೋಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಜಿರಳೆಗಳ ಪ್ರತಿಭಟನೆಗೆ ಕಾಂಗ್ರೆಸ್ ಸರ್ಕಾರ ಬಿಟ್ಟಿಭಾಗ್ಯ ಯೋಜನೆ ಜಾರಿ ಮಾಡಿದೆ. ಜಿಬಿಎ ವ್ಯಾಪ್ತಿಯಲ್ಲಿ ಯಾವುದೇ ಸಂಘ, ಸಂಸ್ಥೆಗಳು ಫ್ರೀಡಂ ಪಾರ್ಕ್‌ನ ಸಭಾಂಗಣ ಬಳಸಿಕೊಂಡರೆ 1 ಲಕ್ಷ ರೂ. ಬಾಡಿಗೆ ಪಾವತಿಸಬೇಕು. ಆದರೆ ಜಿರಳೆ ಪಾರ್ಟಿಯವರು ನಡೆಸಿದ ಪ್ರತಿಭಟನೆಗೆ ಒಂದು ರೂಪಾಯಿ ಕೂಡ ಪಾವತಿಸಿಲ್ಲ. ಬೆಂಗಳೂರಿನ ಒಬ್ಬ ಶಾಸಕರು ಹಾಗೂ ಮುಖಂಡರು ಬಾಡಿಗೆ ತೆಗೆದುಕೊಳ್ಳಬಾರದು ಎಂದು ಅಧಿಕಾರಿಗಳಿಗೆ ಮೌಖಿಕ ಸೂಚನೆ ಕೂಡ ನೀಡಿದ್ದಾರೆ.

ಕಾಂಗ್ರೆಸ್ ಸರ್ಕಾರ ತನಗೆ ಅನುಕೂಲವಾಗುವಂತೆ ಪ್ರತಿಭಟನೆ ಮಾಡುವವರಿಗೆ ಎಲ್ಲ ಅನುಕೂಲಗಳನ್ನು ಮಾಡಿಕೊಡುತ್ತಿದೆ. ಅದು ಕೂಡ ಕೇಂದ್ರ ಸರ್ಕಾರದ ವಿರುದ್ಧ, ಬಿಜೆಪಿಯ ವಿರುದ್ಧ ಪ್ರತಿಭಟನೆ ಮಾಡಿದರಂತೂ ಸಂಪೂರ್ಣ ಉಚಿತ ಸ್ಕೀಮು ನೀಡುತ್ತದೆ ಎಂದು ಅಶೋಕ್ ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೇ, ಇಲ್ಲಿ ಬರದಿಂದ ಕಂಗೆಟ್ಟ ರೈತರು, ಗೌರವಧನ ಹೆಚ್ಚಳವಾಗದೆ ನೋವಿನಲ್ಲಿರುವ ಆಶಾ ಕಾರ್ಯ ಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಕೂಡ ಪ್ರತಿಭಟನೆ ನಡೆಸುತ್ತಾರೆ. ಹಾಗೆಂದೂ ಅವರೆಲ್ಲ ರಿಗೂ ಉಚಿತವಾಗಿ ಸಭಾಂಗಣವನ್ನು ನೀಡಲಾಗಿದೆಯೇ ಜಿರಳೆ ಪಾರ್ಟಿಯವರಿಂದ ಎಷ್ಟು ಬಾಡಿಗೆ ಪಡೆಯಲಾಗಿದೆ ಎಂಬ ಮಾಹಿತಿಯನ್ನು ಕೂಡಲೇ ನೀಡಿ. ಇಲ್ಲವಾದರೆ ಎಲ್ಲ ಸಂಘಟನೆಗಳಿಗೂ ಸಂಪೂರ್ಣ ಉಚಿತವಾಗಿ ಪ್ರತಿಭಟನೆ ನಡೆಸಲು ಅವಕಾಶ ಮಾಡಿಕೊಡಿ ಎಂದವರು ಆಗ್ರಹಿಸಿದ್ದಾರೆ.

# ಸಿ.ಡಿ., ಸ್ಟಿಂಗ್ ಹಿಂದೆ ಒಂದೇ ಫ್ಯಾಕ್ಟರಿ, ಆದರೆ, ಪಾಲುದಾರರು ಬೇರೆ: ಕೆ.ಎನ್.ರಾಜಣ್ಣ ವ್ಯಂಗ್ಯ ನುಡಿ




**ಬೆಂಗಳೂರು, ಅ.13:** ರಾಜ್ಯದಲ್ಲಿ ನಡೆಯುತ್ತಿರುವ ಸ್ಟಿಂಗ್ ಆಪರೇಷನ್ ವಿಚಾರದಲ್ಲಿ ಮಾಜಿ ಸಚಿವ ಕೆ.ಎನ್. ರಾಜಣ್ಣ ಮಾತನಾಡಿದ್ದು ಸಿಎಂ ಆಗಿದ್ದ ಸಿದ್ದರಾಮಯ್ಯ ವಿರುದ್ಧ ನಡೆಸಿದ ಸ್ಟಿಂಗ್ ಆಪರೇಷನ್‌ಗೆ ಅವರು ಸ್ಟೇ ಪಡೆದಿರುವ ವಿಚಾರವನ್ನು ಪ್ರಸ್ತಾಪಿಸಿ ಇದನ್ನು ಬ್ಲಾಕ್‌ಮೇಲ್ ಎಂದೇ ಭಾವಿಸಬಹುದು ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ರಾಜಣ್ಣ, ಸಿಡಿ ಹಾಗೂ ಸ್ಟಿಂಗ್ ಆಪರೇಷನ್‌ಗಳಿಗೆ ರಾಜ್ಯದಲ್ಲಿ ಒಂದೇ ಫ್ಯಾಕ್ಟರಿ ಇದೆ, ಆದರೆ ಅದರಲ್ಲಿ ಪಾರ್ಟ್‌ನರ್‌ಗಳು ಮಾತ್ರ ಬೇರೆ ಬೇರೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಬಳಿ ಎಲ್ಲಾ ಅಧಿಕಾರ ಇದೆ. ಅವರೇ ತನಿಖೆ ಮಾಡಿಸಬೇಕು. ಜನರಲ್ಲಿ ಮೂಡಿರುವ ಗೊಂದಲ ದೂರ ಮಾಡಬೇಕು. ಇದು ಯಾರಿಗೂ ಗೌರವ ತರಲ್ಲ". ತಮ್ಮ ಮೇಲೂ ಪ್ರಯತ್ನಆಗಿತ್ತು. ನನ್ನ ಮೇಲೂ ಹನಿ ಟ್ರ್ಯಾಪ್ ಪ್ರಯತ್ನ ಮಾಡಿದ್ರು. ಸರ್ಕಾರಿ ನಿವಾಸ ಆಗಿದ್ದರಿಂದ ಸೆಕ್ಯುರಿಟಿಗೆ ಸಿಸಿ ಟಿವಿ ಇರುತ್ತೆ ಅಂತ ಭಾವಿಸಿದ್ದೆ. ಆದರೆ ಇಲ್ಲ ಎಂದು ಆಮೇಲೆ ಗೊತ್ತಾಯ್ತು ಎಂದು ಬಹಿರಂಗಪಡಿಸಿದ್ದಾರೆ.

### ಇದು ಬಹಳ ಹಳೆಯ ಸ್ಟಿಂಗ್ ಆಪರೇಷನ್

ಸಿದ್ದರಾಮಯ್ಯ ಅವರ ಮೇಲೆ ಸ್ಟಿಂಗ್ ಆಗಿದ್ದಕ್ಕೆ ಸ್ಟೇ ಬಂದಿರುವುದು ನಾಯಕತ್ವ ವಿಚಾರವಾಗಿ ಬಂದಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ ಅವರು, "ಇದು ಬಹಳ ಹಳೆಯ ಸ್ಟಿಂಗ್ ಆಪರೇಷನ್. ರಾಜ್ಯದಲ್ಲಿ ಇದಕ್ಕೆ ಫ್ಯಾಕ್ಟರಿ ಇದೆ. ಒಂದೇ ಫ್ಯಾಕ್ಟರಿ ಇದೆ, ಪಾಟ್ನರ್ ಬೇರೆ ಇದೆ" ಎಂದು ಗಂಭೀರ ಆರೋಪ ಮಾಡಿದ್ದಾರೆ.

### ರಮೇಶ್ ಜಾರಕಿಹೊಳಿ ಪ್ರಕರಣ ಉಲ್ಲೇಖ

ರಮೇಶ್ ಜಾರಕಿಹೊಳಿ ಅವರದ್ದನ್ನು ಮಾಡಿದ್ದವರೇ ಸಿದ್ದರಾಮಯ್ಯ ಅವರದ್ದು ಮಾಡಿದ್ದು. ಕರ್ನಾಟಕದ ಮಾನ–ಮರ್ಯಾದೆ ಹರಾಜಾಗುತ್ತಿದೆ. ನಮ್ಮ ಗೌರವ ನಾವೇ ಕಳೆದುಕೊಳ್ಳುತ್ತಿದ್ದೇವೆ ಎಂದು ರಾಜಣ್ಣ ಕಳವಳ ವ್ಯಕ್ತಪಡಿಸಿದ್ದಾರೆ.

### ಕುಮಾರಸ್ವಾಮಿ ಕುರಿತು ವ್ಯಂಗ್ಯ

ಕುಮಾರಸ್ವಾಮಿ ಅವರ ಸಾಫ್ಟ್ ಕಾರ್ನರ್ ವಿಚಾರ ಪ್ರಸ್ತಾಪಿಸಿದ ರಾಜಣ್ಣ, ಶತ್ರುವಿನ ಶತ್ರು ಮಿತ್ರ ಎಂಬ ಗಾದೆ ಇದೆ. ಸ್ಟೇ ತೆಗೆದುಕೊಂಡಿದ್ದಾರೆ ಅಂದ್ರೆ ಫ್ಯಾಕ್ಟ್ ಆಗಿದೆ ಅಂತ. ಸಿಎಂ ತನಿಖೆ ಮಾಡಿಸಿ ಸ್ಟಿಂಗ್ ಸ್ಟಾಪ್ ಮಾಡಿಸಬೇಕು. ಅಸಹಾಯಕನ ತರಹ ಅವರೇ ಮಾತನಾಡಿಸಿದ್ರೆ ಹೇಗೆ, ಯಾವೆಲ್ಲ ಇದೆ ಅಂತ ಆಚೆ ಹೇಳಲಿ. ಸ್ಟಿಂಗ್ ಮಾಡೋದು ಇಲ್ಲಿಗೆ ನಿಲ್ಲುತ್ತದೆ" ಎಂದು ಹೇಳಿದ್ದಾರೆ.

# ಪ್ರಗತಿಪಥ ಯೋಜನೆಯಡಿ 2248 ಕಿ.ಮೀ. ಗ್ರಾಮೀಣ ರಸ್ತೆ ಅಭಿವೃದ್ಧಿ: ಸಚಿವ ಈಶ್ವರ ಖಂಡ್ರೆ



**ಬೆಂಗಳೂರು, ಅ.13:** ರಾಜ್ಯದ 202 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಗತಿಪಥ ಯೋಜನೆ ಅಡಿಯಲ್ಲಿ 5400 ಕಿ.ಮೀ ಗ್ರಾಮೀಣ ರಸ್ತೆ ಅಭಿವೃದ್ಧಿ ಮಾಡಲಾಗುತ್ತಿದ್ದು, ಈ ಪೈಕಿ ಮೊದಲ ಹಂತದಲ್ಲಿ 2248 ಕಿ.ಮೀ. ಕಾಮಗಾರಿ ಕೈಗೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, 1692 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮೊದಲ ಹಂತದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿರುವ 562 ರಸ್ತೆಗಳ ಕಾಮಗಾರಿಯಲ್ಲಿ ಗುಣಮಟ್ಟದ ಖಾತ್ರಿಗೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನ ಈ ಯೋಜನೆಯಲ್ಲಿ ಬ್ಯಾಂಕ್ ಶೇ.70ರಷ್ಟು ಆರ್ಥಿಕ ನೆರವು ಒದಗಿಸುತ್ತಿದ್ದು, ರಾಜ್ಯ ಸರ್ಕಾರ ಶೇ.30ರಷ್ಟು ಭರಿಸುತ್ತಿದೆ. ಯೋಜನೆಯ ಮೊದಲ ಹಂತಕ್ಕೆ ನವೆಂಬರ್ ಮೊದಲ ವಾರದಲ್ಲಿ ಚಾಲನೆ ನೀಡಲು ಎಲ್ಲ ಸಿದ್ಧತೆ ಮಾಡಿಕೊಳ್ಳುವಂತೆಯೂ ತಿಳಿಸಿದರು.

ಈ ಸಂದರ್ಭದಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ನಿರ್ದೇಶಕ ದೇವರಾಜೇಗೌಡ, ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಮುಖ್ಯ ಎಂಜಿನಿಯರ್ ಮುರಳೀಧರ್ ಮತ್ತಿತರರು ಪಾಲ್ಗೊಂಡಿದ್ದರು.

# ಕೆಐಎಡಿಬಿ ಪ್ರಗತಿ ಪರಿಶೀಲನೆ: ನಿಯಮ ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧವೂ ಕ್ರಮ

### ನಿಗದಿತ ಅವಧಿಯಲ್ಲಿ ಹಣ ಕಟ್ಟದವರ ಕೈಗಾರಿಕಾ ನಿವೇಶನ ರದ್ದು: ಎಂ.ಬಿ. ಪಾಟೀಲ್ ಎಚ್ಚರಿಕೆ



**ಬೆಂಗಳೂರು,ಅ.13:** ಕೆಐಎಡಿಬಿ ಮೂಲಕ ಉದ್ಯಮಿಗಳಿಗೆ ಮಂಜೂರು ಮಾಡುವ ನಿವೇಶನಗಳಿಗೆ ನಿಗದಿತ ಅವಧಿಯಲ್ಲಿ ಹಣ ಪಾವತಿ ಮಾಡದಿದ್ದರೆ ಅಂತಹವರ ನಿವೇಶನ ಹಂಚಿಕೆಯನ್ನು ನಿಯಮ ಪ್ರಕಾರ ರದ್ದುಪಡಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಖನಿಜ ಭವನದಲ್ಲಿ ಕೆಐಎಡಿಬಿ ಅಧಿಕಾರಿಗಳ ಜತೆ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು ಈ ಸಂಬಂಧ ನಿಯಮ ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಎಚ್ಚರಿಕೆ ನೀಡಿದರು. ನಿಯಮ ಪ್ರಕಾರ ನಿವೇಶನ ಹಂಚಿಕೆಯಾದ ಒಂದು ತಿಂಗಳಲ್ಲಿ ಶೇಕಡ 30ರಷ್ಟು ಹಣವನ್ನು ಪಾವತಿಸಬೇಕು. ಒಂದು ವೇಳೆ ಕಟ್ಟದಿದ್ದಲ್ಲಿ ಕೋರಿಕೆಯ ಮೇರೆಗೆ ಶೇಕಡ 10ರಷ್ಟು ಬಡ್ಡಿಯೊಂದಿಗೆ ಮತ್ತೊಂದು ತಿಂಗಳು ಕಾಲಾವಕಾಶ ಕೊಡಲಾಗುವುದು. ಅದರ ನಂತರವೂ ಕಟ್ಟದಿದ್ದರೆ ಹಂಚಿಕೆಯನ್ನೇ ರದ್ದುಪಡಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದ್ದಾರೆ.

ಕೈಗಾರಿಕಾ ನಿವೇಶನಗಳಿಗೆ ಭಾರೀ ಬೇಡಿಕೆಯ ಒತ್ತಡವಿದೆ. ಈ ವಿಚಾರದಲ್ಲಿ ಕೆಐಎಡಿಬಿ ನಿಯಮಾವಳಿ ಸ್ಪಷ್ಟವಾಗಿದೆ. ಈ ವಿಷಯದಲ್ಲಿ ಅಧಿಕಾರಿಗಳು ಉದಾಸೀನ ಪ್ರದರ್ಶಿಸುತ್ತಿರುವುದು ತಮಗೆ ಅಸಮಾಧಾನ ತಂದಿದೆ ಎಂದು ಅವರು ವಿವರಿಸಿದ್ದಾರೆ.

ನಿವೇಶನ ಮಂಜೂರು ಮಾಡಿದ ಮೇಲೆ ಮುಂದಿನ ಕೆಲಸಗಳು ತ್ವರಿತವಾಗಿ ನಡೆಯಬೇಕು. ಆ ಜಾಗಗಳನ್ನು ಬಹುಕಾಲ ಹಾಗೆಯೇ ಖಾಲಿ ಬಿಟ್ಟುಕೊಂಡು ಕೂರುವುದರಲ್ಲಿ ಅರ್ಥವಿಲ್ಲ. ಇದನ್ನು ಹೂಡಿಕೆದಾರರು ಕೂಡ ಅರಿತಿರಬೇಕು. ಇಂಥ ಪ್ರಕರಣಗಳು ಕಂಡುಬಂದಲ್ಲಿ ನಿವೇಶನ ಹಿಂದಕ್ಕೆ ಪಡೆದುಕೊಂಡು, ನಿಗದಿತ ಮೊತ್ತ ಪಾವತಿಸುವ ಸಾಮರ್ಥ್ಯ ಇರುವವರಿಗೆ ಅವುಗಳನ್ನು ಮಂಜೂರು ಮಾಡಬೇಕು ಎಂದು ಅವರು ಕಟ್ಟುನಿಟ್ಟಾಗಿ ಹೇಳಿದ್ದಾರೆ.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತರಾದ ಖುಷ್ಬೂ ಗೋಯಲ್, ಕೆಐಎಡಿಬಿ ಸಿಇಒ ಗೋವಿಂದ ರೆಡ್ಡಿ, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಉಪಸ್ಥಿತರಿದ್ದರು.

# ಎಸ್‌ಐಆರ್ ಪ್ರತಿಭಟನೆ ವೇಳೆ ಪೊಲೀಸರು ಕೈಗೊಂಡ ಕ್ರಮಗಳ ಮರುಪರಿಶೀಲನೆ ಸಚಿವ ಪ್ರಿಯಾಂಕ್ ಖರ್ಗೆ ಆದೇಶ

**ಬೆಂಗಳೂರು, ಅ.13:** ಬೆಂಗಳೂರಿನಲ್ಲಿ ನಡೆದ ಎಸ್‌ಐಆರ್ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರು ಕೈಗೊಂಡ ಕ್ರಮಗಳ ಕುರಿತು ಮರುಪರಿಶೀಲಿಸಲು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆದೇಶಿಸಿದ್ದಾರೆ. ಅಲ್ಲದೆ, ಶಾಂತಿಯುತ ಪ್ರತಿಭಟನೆಗಳಿಗೆ ಅಡ್ಡಿಪಡಿಸದಂತೆ ಪೊಲೀಸ್ ಪಡೆಗೆ ಸೂಚನೆ ನೀಡಿದ್ದಾರೆ.

ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ರಾಜೀನಾಮೆಗೆ ಆಗ್ರಹಿಸಿ, ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿಯ ಕಚೇರಿಯತ್ತ ಮೆರವಣಿಗೆ ನಡೆಸಲು ಯತ್ನಿಸಿದ ಹಲವು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದ ಮರುದಿನವೇ ಸಚಿವರು ಈ ಹೇಳಿಕೆ ನೀಡಿದ್ದಾರೆ.

ಪೊಲೀಸರು ತಮ್ಮನ್ನು ಹಾಗೂ ಪತ್ರಿಕಾ ಛಾಯಾಗ್ರಾಹಕರನ್ನು ದುರ್ವರ್ತನೆಯಿಂದ ನಡೆಸಿಕೊಂಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದ್ದರು.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಿಯಾಂಕ್ ಖರ್ಗೆ, ಶಾಂತಿಯುತ ಪ್ರತಿಭಟನೆಯ ಹಕ್ಕು ಪ್ರಜಾಪ್ರಭುತ್ವದ ಮೂಲಭೂತ ಅಂಶವಾಗಿದ್ದು, ಅದನ್ನು ದಮನಿಸುವ ಬದಲು ಗೌರವಿಸಬೇಕು ಮತ್ತು ರಕ್ಷಿಸಬೇಕು ಎಂದು ಹೇಳಿದ್ದಾರೆ.

ಬೆಂಗಳೂರು ಪೊಲೀಸರು ಪ್ರತಿಭಟನಾಕಾರರನ್ನು ನಿರ್ವಹಿಸಿದ ರೀತಿಯ ಬಗ್ಗೆ ಮರು ಪರಿಶೀಲನೆ ನಡೆಸಲಾಗುವುದು, ಯಾವುದೇ ಶಾಂತಿಯುತ ಪ್ರತಿಭಟನೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಲು ಪೊಲೀಸರಿಗೆ ಸೂಚನೆ ನೀಡಿದ್ದೇನೆ. ತಮ್ಮ ಸುರಕ್ಷತೆ ಹಾಗೂ ಇತರರ ಹಕ್ಕುಗಳ ರಕ್ಷಣೆಗಾಗಿ ಪೊಲೀಸರೊಂದಿಗೆ ಸಹಕರಿಸುವಂತೆ ಮತ್ತು ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಸಚಿವರು ಪ್ರತಿಭಟನಾಕಾರರಿಗೆ ಮನವಿ ಮಾಡಿದ್ದಾರೆ.

ನಿಮ್ಮ ಹಕ್ಕುಗಳನ್ನು ರಕ್ಷಿಸುವುದೇ ಪೊಲೀಸರ ಕೆಲಸವೇ ಹೊರತು, ನಿಮ್ಮ ಧ್ವನಿಗೆ ಅಡ್ಡಿಯಾಗುವುದಲ್ಲ ಎಂದು ಹೇಳಿದ್ದಾರೆ.





ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ, ಕಲಬುರಗಿಯಲ್ಲಿ ಮಂಗಳವಾರ 'ಇಂಡಿಯಾ ಒಕ್ಕೂಟ'ದ ಸದಸ್ಯರು ಪ್ರತಿಭಟನೆ ನಡೆಸಿದರು.

# ಸಾರಿಗೆ ಸಂಸ್ಥೆಗೆ ಮತ್ತೊಂದು ಸಂಕಷ್ಟ, ಡೀಸೆಲ್ ಕೊರತೆಯ ನಂತರ ಈಗ ಟಿಕೆಟ್ ಪೇಪರ್‌ಗೂ ಬರ.!

**ಕಲಬುರಗಿ, ಅ. 13:** ಶಕ್ತಿ ಯೋಜನೆಯಿಂದ ಆರ್ಥಿಕವಾಗಿ ನಿಶಕ್ತಗೊಂಡಿರುವ ಸಾರಿಗೆ ಸಂಸ್ಥೆಗಳಿಗೆ ತೀವ್ರ ಆರ್ಥಿಕ ಸಂಕಷ್ಟಗಳು ಬೆಂಬಿಡದೆ ಕಾಡುತ್ತಿವೆ. ಇತ್ತೀಚೆಗಷ್ಟೇ ಡೀಸೆಲ್ ಪೂರೈಕೆಯ ಸಮಸ್ಯೆಯಿಂದ ಬಸ್ ಸಂಚಾರಕ್ಕೆ ಸಮಸ್ಯೆಯಾಗಿ, ಡಿಪೋದಿಂದ ಬಸ್ ಹೊರಗೆ ಬರಲು ಸಾಧ್ಯವಾಗದೇ ನಿಂತು ಹೋಗಿತ್ತು. ಇದೀಗ ಟಿಕೆಟ್ ನೀಡಲು ಇಟಿಎಂ ಯಂತ್ರಗಳಲ್ಲಿ ಬಳಸುವ ಟಿಕೆಟ್ ಪೇಪರ್ ರೋಲ್‌ಗಳ ಕೊರತೆ ಎದುರಾಗಿದೆ.

ಕಾಗದದ ಅಭಾವದಿಂದ ಒಂದೇ ಟಿಕೆಟ್‌ನಲ್ಲಿ ಮೂವರು ಅಥವಾ ನಾಲ್ವರು ಪ್ರಯಾಣಿಕರಿಗೆ ಟಿಕೆಟ್ ನೀಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಪ್ರಯಾಣಿಕರು ಮತ್ತು ಸಾರಿಗೆ ಸಂಸ್ಥೆಯ ಸಿಬ್ಬಂದಿ ಇಬ್ಬರೂ ತೊಂದರೆ ಅನುಭವಿಸುವಂತಾಗಿದೆ.

ಟಿಕೆಟ್ ಪೇಪರ್ ಪೂರೈಕೆದಾರರಿಗೆ ಬಾಕಿ ಹಣ ಪಾವತಿಯಾಗದಿರುವುದೇ ಈ ಸಮಸ್ಯೆಗೆ ಪ್ರಮುಖ ಕಾರಣ ಎನ್ನಲಾಗಿದೆ. ಹಣಕಾಸಿನ ವ್ಯವಹಾರಗಳು ಬಾಕಿ ಉಳಿದಿರುವ ಹಿನ್ನೆಲೆಯಲ್ಲಿ ಪೂರೈಕೆದಾರರು ಕಾಗದದ ರೋಲ್‌ಗಳ ಸರಬರಾಜನ್ನು ಕಡಿಮೆ ಮಾಡಿದ್ದಾರೆ. ಪರಿಣಾಮವಾಗಿ, ಹಲವು ಬಸ್‌ಗಳಲ್ಲಿ ಟಿಕೆಟ್ ಮುದ್ರಿಸಲು ಅಗತ್ಯವಾದ ಕಾಗದದ ಕೊರತೆ ಕಾಣಿಸಿಕೊಂಡಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ, ಬೀದರ್-ಕಲಬುರಗಿ ಸೇರಿದಂತೆ ಕೆಲವು ಪ್ರಮುಖ ಮಾರ್ಗಗಳಲ್ಲಿ ಈ ಸಮಸ್ಯೆ ತೀವ್ರವಾಗಿದೆ ಎಂದು ವರದಿಯಾಗಿದೆ. ಕೆಲವು ನಿರ್ವಾಹಕರು ತಮ್ಮ ಬಸ್‌ಗಳ ಕಾರ್ಯಾಚರಣೆ ಅಸ್ತವ್ಯಸ್ತವಾಗದಂತೆ ಸಹೋದ್ಯೋಗಿಗಳಿಂದ ಪೇಪರ್ ರೋಲ್‌ಗಳನ್ನು ಸಾಲವಾಗಿ ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ.

ಇದಕ್ಕೂ ಮೊದಲು, ತೈಲ ಕಂಪನಿಗಳಿಗೆ ಬಾಕಿ ಹಣ ಪಾವತಿಸದ ಕಾರಣ ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ಬಸ್ ಸಂಚಾರದ ಮೇಲೆ ಪರಿಣಾಮ ಬೀರಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರ 170 ಕೋಟಿ ರೂ ಬಿಡುಗಡೆ ಮಾಡಿತ್ತು. ಇದೀಗ ಟಿಕೆಟ್ ಪೇಪರ್ ಪೂರೈಕೆಯಲ್ಲೂ ಸಮಸ್ಯೆ ಎದುರಾಗಿರುವುದು ಸಾರಿಗೆ ಸಂಸ್ಥೆಗಳ ಹಣಕಾಸು ನಿರ್ವಹಣೆ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಸಾರಿಗೆ ಸಂಸ್ಥೆಗಳು ಹಿಂದಿನಿಂದಲೂ ನಷ್ಟದಲ್ಲೇ ನಡೆಯುತ್ತಿದ್ದವು. ಆದರೂ



ಸೀಜನ್‌ಗಳಲ್ಲಿ ಭರ್ಜರಿ ಪ್ರಯಣದ ಮೂಲಕ ನಷ್ಟ ಸರಿದೂಗಿಸಿಕೊಂಡು ಹೋಗುತ್ತಿದ್ದವು. ಆದರೆ ಕಳೆದ ಮೂರು ವರ್ಷಗಳಿಂದ ಜಾರಿಯಾದ ರಾಜ್ಯ ಸರ್ಕಾರದ 'ಶಕ್ತಿ' ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯ ದೊರೆಯುತ್ತಿದೆ. ಇದರಿಂದ ಹೆಚ್ಚಿದ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಸಾರಿಗೆ ಸಂಸ್ಥೆಗಳು ಸೇವೆ ಒದಗಿಸಬೇಕಿದೆ. ಆದರೆ, ಯೋಜನೆಯ ಹಣ ಮರುಪಾವತಿ ಸೇರಿದಂತೆ ವಿವಿಧ ಪಾವತಿಗಳು ವಿಳಂಬವಾದರೆ ಸಂಸ್ಥೆಗಳ ದೈನಂದಿನ ಬಸ್ ಕಾರ್ಯಾಚರಣೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ.

ಸಾರ್ವಜನಿಕ ಸಾರಿಗೆ ಸುಗಮವಾಗಿ ನಡೆಯಲು ಡೀಸೆಲ್ ಮಾತ್ರವಲ್ಲ, ಟಿಕೆಟ್ ಪೇಪರ್‌ನಂತಹ ಮೂಲಭೂತ ಅಗತ್ಯಗಳೂ ಸಮಯಕ್ಕೆ ಸರಿಯಾಗಿ ಲಭ್ಯವಾಗಬೇಕು. ಬಾಕಿ ಪಾವತಿಗಳ ಸಮಸ್ಯೆಯನ್ನು ಬಗೆಹರಿಸಿ, ಟಿಕೆಟ್ ರೋಲ್‌ಗಳ ಪೂರೈಕೆಯನ್ನು ಸಹಜ ಸ್ಥಿತಿಗೆ ತರುವುದು ಸಾರಿಗೆ ಸಂಸ್ಥೆಗಳ ಮುಂದಿರುವ ಸವಾಲಾಗಿದೆ.

## ವೈದ್ಯಕೀಯ ಪ್ರಮಾಣಪತ್ರ ಇಲ್ಲದೆ ವೃತ್ತಿ
# ಬೀದರ್ ಜಿಲ್ಲೆಯಲ್ಲಿ 213 ನಕಲಿ ವೈದ್ಯರು ಪತ್ತೆ

**ಬೀದರ್, ಅ. 13:** ನಕಲಿ ಔಷಧ ದಂಧೆ ರಾಜ್ಯವನ್ನು ತಲ್ಲಣಗೊಳಿಸಿರುವ ಬೆನ್ನಲ್ಲೇ ಬೀದರ್ ಜಿಲ್ಲೆಯಲ್ಲಿ 213 ನಕಲಿ ವೈದ್ಯರು ಜನರನ್ನು ವಂಚಿಸಿ ಕೆಲಸ ಮಾಡುತ್ತಿರುವುದು ಆತಂಕಕ್ಕೀಡು ಮಾಡಿದೆ. ಹಣದಾಸೆಗಾಗಿ ಜನರ ಜೀವಕ್ಕೆ ಕುತ್ತು ತರುತ್ತಿರುವ ನಕಲಿ ವೈದ್ಯರಿಂದ ಚಿಕಿತ್ಸೆ ಪಡೆದಿರುವ ಹಲವರು ನಾನಾ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗಿ ಜೀವನ ಪರ್ಯಂತ ನೋವು ಅನುಭವಿಸುವಂತೆ ಮಾಡಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ 213 ನಕಲಿ ವೈದ್ಯರು ಪತ್ತೆಯಾಗಿದ್ದಾರೆ. ಈ ಕುರಿತು ಆರೋಗ್ಯ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಲಭ್ಯವಾಗಿದೆ. ಜಿಪಂ ಸಿಇಒ ಅವರು ಭಾಲ್ಕಿ ತಾಲೂಕಿನ ಬೀರಿ ಗ್ರಾಮಕ್ಕೆ ಭೇಟಿ ನೀಡಿದಾಗ ನಕಲಿ ವೈದ್ಯನೊಬ್ಬನ ವಿಚಾರಣೆ ನಡೆಸಿದರು. ಕೆಲವು ದಿನಗಳ ಹಿಂದೆ ಔರಾದ್ ತಾಲೂಕಿನ ಜಂಬಗಿ ಹಾಗೂ ಕಮಲನಗರ ತಾಲೂಕಿನ ಚಾಂದೋರಿ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿದರು. ಆದರೂ ಕೂಡ ಜಿಲ್ಲೆಯಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಯಾವುದೇ ಅರ್ಹತೆ ಇಲ್ಲದ ವ್ಯಕ್ತಿಗಳು ಕ್ಲಿನಿಕ್‌ಗಳನ್ನು ನಡೆಸುತ್ತಿದ್ದಾರೆ.

ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ನಕಲಿ ವೈದ್ಯರ

**ಯಾವುದೇ ಕಾರಣಕ್ಕೂ ವೈದ್ಯಕೀಯ ಪ್ರಮಾಣ ಪತ್ರ ಇಲ್ಲದೆ ವೈದ್ಯಕೀಯ ವೃತ್ತಿ ಅಥವಾ ಕ್ಲಿನಿಕ್ ನಡೆಸಬಾರದು. ಹೊರ ರಾಜ್ಯಗಳಿಂದ ಬಂದು ಬೀದರ್ ಜಿಲ್ಲೆಯಲ್ಲಿ ನಕಲಿ ವೈದ್ಯರು ವೃತ್ತಿಯಲ್ಲಿ ತೊಡಗಿರುವುದು ಗಮನಕ್ಕೆ ಬಂದಿದೆ. ಅಂತಹವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು.**

**– ಅನಿಲ್ ಚಿಂತಾಮಣಿ, ಪ್ರಭಾರಿ ಡಿಎಚ್‌ಒ**

ಹಾವಳಿ ಹೆಚ್ಚಾಗುತ್ತಿದ್ದು, ನಕಲಿ ವೈದ್ಯರಿಂದ ಹಳ್ಳಿಗಳ ಮುಗ್ಧ ಜನರ ಜೀವ ಅಪಾಯದಲ್ಲಿದೆ. ಆರೋಗ್ಯದ ಮೇಲೆ ಅಡ್ಡ ಪರಿಣಾಮಗಳನ್ನು ಬೀರುವ ಹೆಚ್ಚಿನ ಡೋಸ್‌ನ ಔಷಧಿಗಳನ್ನು ಕ್ಲಿನಿಕ್‌ಗಳಲ್ಲಿ ಇಟ್ಟಿರುವುದು



ಆರೋಗ್ಯ ಇಲಾಖೆಯ ಅಧಿಕಾರಿಗಳು ನಡೆಸಿರುವ ದಾಳಿಯ ವೇಳೆ ಅಘಾತಕಾರಿ ಮಾಹಿತಿ ಬೆಳಕಿಗೆ ಬಂದಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಇವರ ಹಾವಳಿ ವಿಪರೀತವಾಗಿದೆ. ಆದರೆ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಯಾವುದೇ ಪರಿಣಾಮಕಾರಿಯಾಗಿ ದಾಳಿ ನಡೆಸುತ್ತಿಲ್ಲ ಎನ್ನುವ ಆರೋಪ ಜನ ಸಾಮಾನ್ಯರಲ್ಲಿ ಕೇಳಿ ಬರುತ್ತಿದೆ.

ಜಿಲ್ಲೆಯಲ್ಲಿ ಅನಧಿಕೃತ ಆಸ್ಪತ್ರೆಗಳು. ಕ್ಲಿನಿಕ್ ಗಳು ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಬೇರು ಬಿಟ್ಟಿವೆ. ವೈದ್ಯರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಅಮಾಯಕರ ಪ್ರಾಣದಲ್ಲಿ ಚೆಲ್ಲಾಟವಾಡುವ ನಕಲಿ ವೈದ್ಯರ ಹಾವಳಿ ನಿಯಂತ್ರಿಸಿ ಜನರ ಪ್ರಾಣ ಉಳಿಸುವ ಕೆಲಸ ಆರೋಗ್ಯ ಇಲಾಖೆ ಮಾಡಬೇಕಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಕಾವಲು ಪಡೆ) ಜಿಲ್ಲಾಧ್ಯಕ್ಷ ಅವಿನಾಶ್ ಬುಧರಕರ್ ಆಗ್ರಹಿಸಿದ್ದಾರೆ.

ಆರೋಗ್ಯ ಇಲಾಖೆಯ ಅಧಿಕಾರಿಗಳು ಸಾಥ್: ಜಿಲ್ಲೆಯಲ್ಲಿ ನಕಲಿ ವೈದ್ಯರು ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳು ನಡೆಸುತ್ತಿರುವುದು ಆರೋಗ್ಯ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಇದ್ದರೂ ಕೂಡ ಯಾವುದೇ ಕ್ರಮಕೈಗೊಳ್ಳಲು ಹಿಂದೇಟು ಹಾಕಲಾಗುತ್ತಿದೆ. ಆಯಾ ತಾಲೂಕು ಆರೋಗ್ಯ ಅಧಿಕಾರಿಗಳು ಮೌನ ವಹಿಸಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಆರೋಗ್ಯ ಇಲಾಖೆಯ ಅಧಿಕಾರಿಗಳು ಸಾಥ್ ನೀಡುತ್ತಿದ್ದಾರೆ ಎನ್ನುವ ಆರೋಪ ಕೇಳಿ ಬರುತ್ತಿದೆ.

# ಬರೀದ್ ಷಾಹಿಯಲ್ಲಿ ಉದ್ಯಾನದಲ್ಲಿ ವಿಶೇಷ ಯೋಗ ಶಿಬಿರ

**ಬೀದರ್, ಅ. 13:** ಜಿಲ್ಲಾ ಪತಂಜಲಿ ಯೋಗ ಸಮಿತಿ ವತಿಯಿಂದ ನಗರದ ಬರೀದ್ ಷಾಹಿ ಉದ್ಯಾನದಲ್ಲಿ ವಿಶೇಷ ಯೋಗ ಶಿಬಿರ ಜರುಗಿತು. ಪತಂಜಲಿ ಯೋಗ ಪೀಠದ ರಾಜ್ಯ ಪ್ರಭಾರಿ ಭವರಲಾಲ್ ಆರ್ಯ ಯೋಗ ಶಿಬಿರ ನಡೆಸಿಕೊಟ್ಟರು.



ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ, ಪ್ರಮುಖರಾದ ಗಣಪತರಾವ್ ಖೂಬಾ, ಅಣ್ಣಯಪ್ಪ ಸ್ವಾಮಿ, ಶ್ರೀದೇವಿ ಶಿವಕುಮಾರ, ಮಂಜುಳಾ ತಡಿಬಿಡಿಮಠ, ಗುರುದತ್ತ ವಿದ್ಯಾರ್ಥಿ, ಪತಂಜಲಿ ಯೋಗ ಪೀಠದ ಜಿಲ್ಲೆಯ ಪ್ರಮುಖರಾದ ಗೋರಖನಾಥ ಕುಂಬಾರ, ಅಜಯ ಕುಮಾರ ದುಬೆ, ಗುರುನಾಥ ಮೂಲಗೆ, ರೂಪಾ ಪಾಟೀಲ, ವಿದ್ಯಾವತಿ ಹಿರೇಮಠ, ಜಗದೀಶ ಖೂಬಾ, ಗುರುನಾಥ ರಾಜಗೀರಾ, ನಂದಕುಮಾರ ತಾಂದಳೆ, ಮಂಜುಳಾ ಮುಚಳಂಬೆ, ಗಣಪತಿ ಭತಮುರ್ಗೆ, ರವೀಂದ್ರ ತೆಲಗಣಿ ಮತ್ತಿತರರು ಉಪಸ್ಥಿತರಿದ್ದರು.

ಕುಂಬಾರ್ ನೇಮಕ: ಗೋರಖನಾಥ ಕುಂಬಾರ್ ಅವರನ್ನು ಪತಂಜಲಿ ಯೋಗ ಸಮಿತಿ ನೂತನ ಬೀದರ್ ಜಿಲ್ಲಾಧ್ಯಕ್ಷರಾಗಿ ಹಾಗೂ ಜಿಲ್ಲಾ ಮಹಿಳಾ ಪ್ರಭಾರಿಯಾಗಿ ವಿದ್ಯಾವತಿ ಹಿರೇಮಠ, ಸಹ ಪ್ರಭಾರಿಯಾಗಿ ರೂಪಾ ಪಾಟೀಲ ಅವರನ್ನು ನೇಮಕ ಮಾಡಿ, ಕಾರ್ಯಕ್ರಮದಲ್ಲಿ ಘೋಷಿಸಲಾಯಿತು. ಭವರಲಾಲ್ ಆರ್ಯ ಮಾತನಾಡಿ, ಸಮಿತಿಯ ನೂತನ ಜಿಲ್ಲಾಧ್ಯಕ್ಷರು ಹಾಗೂ ಮಹಿಳಾ ಪ್ರಭಾರಿಗಳು ಜಿಲ್ಲೆಯ ಇತರ ಸಂಘ ಸಂಸ್ಥೆಗಳ ಜೊತೆಗೆ ಹಾಗೂ ಹಿರಿಯ ಯೋಗ ಸಾಧಕರ ಸಹಕಾರದೊಂದಿಗೆ ಜಿಲ್ಲೆಯ ಜನರ ಉತ್ತಮ ಆರೋಗ್ಯಕ್ಕಾಗಿ ಯೋಗ ಜಾಗೃತಿ ಮೂಡಿಸಲು ಪಣ ತೊಟ್ಟು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

# ಅಕ್ರಮ ನೀರಾವರಿಗೆ ಅಧಿಕಾರಿಗಳ ಸಾಥ್! ಬಲ ಇದ್ದವರಿಗೆ ನೀರು, ಇಲ್ಲದವರಿಗೆ ಬರೀ ನೆಲ

**ರಾಯಚೂರು, ಅ. 13:** ತುಂಗಭದ್ರಾ ಜಲಾಶಯದ ಎಡದಂಡೆ ಮುಖ್ಯ ನಾಲೆಯ ನೀರಿನ ವಿಚಾರದಲ್ಲಿ ಬಲ ಇದ್ದವರ ಭೂಮಿಗೆ ನೀರು, ಇಲ್ಲದವರಿಗೆ ಬರೀ ನೆಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಹಲವು ವಿಧದ ಟೇಲೆಂಡ್‌ಗಳಿವೆ. 47ನೇ ಮೈಲಿನ ಮೇಲ್ಭಾಗದ ರೈತರಿಗೆ ಸಿಕ್ಕಷ್ಟು ನೀರಿನ ಅವಕಾಶ ಕೆಳಭಾಗದವರಿಗೆ ಸಿಗುತ್ತಿಲ್ಲ.



ಕಾರಟಗಿ ಮತ್ತು ಸಿಂಧನೂರು ತಾಲ್ಲೂಕಿನ ರೈತರಿಗೆ ಸಿಕ್ಕಷ್ಟು ನೀರಿನ ಅವಕಾಶ ಅನಂತರ ಬರುವ ಮಾನ್ವಿ, ಸಿರವಾರ ಮತ್ತು ರಾಯಚೂರಿಗೆ ಸಿಗುತ್ತಿಲ್ಲ. ಅದೇ ರೀತಿ ಪ್ರತಿಯೊಂದು ವಿತರಣಾ ಕಾಲುವೆಯ ಕೆಳಭಾಗದ ರೈತರಿಗೂ ನೀರಿನ ಕೊರತೆ ಆಗುತ್ತಿದೆ. ಮೇಲ್ಭಾಗದ ರೈತರಿಗೆ ತಮ್ಮ ಪಾಳಿ ಇದ್ದಾಗಲೂ ನೀರು ಸಿಗುತ್ತದೆ. ಅಲ್ಲದೆ ಕೆಳಭಾಗದ ರೈತರು ನೀರು ಪಡೆಯುವಾಗಲೂ ಮೇಲ್ಭಾಗದವರು ಒಂದಿಲ್ಲೊಂದು ವಿಧದ ಅಕ್ರಮ ಮಾರ್ಗದಿಂದ ನೀರು ಪಡೆಯುತ್ತಾರೆ. ಹೀಗಾಗಿ ಕೆಳಭಾಗದ ರೈತರಿಗೆ ನೀರಿನ ಕೊರತೆ ಆಗುತ್ತದೆಂಬುದು ರೈತರ ಗಂಭೀರ ಆರೋಪ.

ಎಡದಂಡೆ ಮುಖ್ಯ ನಾಲೆಯ ಮೇಲ್ಭಾಗದಲ್ಲಿ ನೀರಾವರಿಗೆ ಒಳಪಡದ ಭೂಮಿಗಳಿಗೂ ನೀರನ್ನು ಪಡೆಯುತ್ತಿರುವುದು ದೊಡ್ಡ ರೀತಿಯ ಅಕ್ರಮವಾಗಿದೆ. ಹರಿಯುವ ಎಡದಂಡೆ ನಾಲೆಗೆ ಪೈಪ್‌ಗಳನ್ನು ಹಾಕಿ ಮೇಲ್ಭಾಗಕ್ಕೆ ನೀರು ಪಡೆಯುತ್ತಿರುವುದರಿಂದ ಅಧಿಕೃತವಾಗಿ ಮಾಡಿಕೊಂಡಿರುವ ನೀರಾವರಿಗೆ ಸಮನಾಗಿ ಮೇಲ್ಭಾಗದಲ್ಲಿ ಅಕ್ರಮ ನೀರಾವರಿ ಪ್ರದೇಶವಿದೆ. ದೊಡ್ಡ ಪ್ರಭಾವಿಗಳು ಮೇಲ್ಭಾಗದಲ್ಲಿ ನೀರಾವರಿ ಮಾಡಿಕೊಂಡದ್ದನ್ನು ಅನುಕರಣೆ ಮಾಡಿ ಪ್ರತಿಯೊಬ್ಬ ರೈತರು ಸಹ ಅಕ್ರಮವಾಗಿ ನೀರು ಪಡೆಯುತ್ತಿದ್ದಾರೆ. ಹೀಗಾಗಿ ಎಡದಂಡೆ ನಾಲೆಯ ಪಶ್ಚಿಮದಲ್ಲಿ ಸಹಸ್ರಾರು ಎಕರೆ ಜಮೀನಿಗೆ ನೀರುಣಿಸಲಾಗುತ್ತಿದೆ. ಈ ಕಾರಣಕ್ಕಾಗಿಯೇ ಕೆಳಭಾಗದ ರೈತರು ತೊಂದರೆ ಅನುಭವಿಸುವಂತಾಗಿದೆ' ಎಂದು ಅಖಿಲ ಭಾರತ ಕಿಸಾನ್ ಸಭಾ ಮುಖಂಡರಾದ ಚಂದ್ರಶೇಖರ ಕ್ಯಾತನಟ್ಟಿ, ಬಸವಂತ ರಾಯಗೌಡ ಕಲ್ಲೂರು ಅಭಿಪ್ರಾಯ ಪಟ್ಟಿದ್ದಾರೆ. ಅಕ್ರಮವಾಗಿ ನೀರು ಪಡೆಯುತ್ತಿರುವುದನ್ನು ಸರಿಪಡಿಸಲು ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಗಳು ಸೇರಿದಂತೆ ಎಲ್ಲ ಅಧಿಕಾರಿಗಳಿಗೂ ಸಾಧ್ಯವಾಗುತ್ತಿಲ್ಲ. ಇದೇ ನೆಪದಿಂದ ಕೆಲ ಅಧಿಕಾರಿಗಳು ಸಹ ಅಕ್ರಮ ನೀರಾವರಿ ಮಾಡಿಕೊಂಡಿರುವ ಭೂಮಾಲೀಕರಿಂದ ಪ್ರತಿ ಬೆಳೆಗೆ ವ್ಯವಸ್ಥಿತವಾಗಿ ಕಮಿಷನ್ ಮಾದರಿಯಲ್ಲಿ ಭೂಮಿಯ ಪ್ರಮಾಣದ ಆಧಾರದಲ್ಲಿ ಭಕ್ಷೀಸು ನಿಗದಿ ಪಡಿಸಿಕೊಂಡಿದ್ದಾರೆ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಅಮೀನ್ ಪಾಷಾ ದಿದ್ದಿಗಿ ಹಾಗೂ ಶರಣಪ್ಪ ಮರಳಿ ಸುಲ್ತಾನಪುರ ಅವರು ಆರೋಪಿಸಿದ್ದಾರೆ.

ರಾಯಚೂರು, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು ಎಚ್ಚೆತ್ತುಕೊಂಡು ಮುನಿರಾಬಾದ್‌ನಿಂದ ರಾಯಚೂರುವರೆಗೆ ಹಾಕಿರುವ ಅಕ್ರಮ ಪೈಪ್‌ಲೈನ್‌ಗಳನ್ನು ತೆರವುಗೊಳಿಸಿ ಕ್ರಿಮಿನಲ್ ಮೊಕದ್ದಮೆ ಹೂಡುವ ಮೂಲಕ ದಿಟ್ಟಕ್ರಮಕ್ಕೆ ಮುಂದಾಗಬೇಕಿದೆ ಎಂಬುದು ರೈತರ ಒತ್ತಾಸೆಯಾಗಿದೆ.

# ಅಧ್ಯಯನ ನಡೆಸಿದ ಕೇಂದ್ರ ತಂಡ: ದೇಶದ ಜಲ ಸಂರಕ್ಷಣೆಗೆ ಬೀದರ್ ಕರೇಜ್ ವ್ಯವಸ್ಥೆ ಮಾದರಿ

**ಬೀದರ್ ಅ. 13:** ಅಂತರ್ಜಲ ವಿಸ್ಮಯವಾಗಿರುವ ಇಲ್ಲಿನ ಕರೇಜ್ ಜಲ ವ್ಯವಸ್ಥೆ ಹಾಗೂ ಅದರ ಪುನರುಜ್ಜೀವನ ಕಾರ್ಯದ ಅಧ್ಯಯನ ಹಿನ್ನಲೆಯಲ್ಲಿ ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಧಿಕಾರಿಗಳ ತಂಡವು ಭೀದರಗೆ ಭೇಟಿ ನೀಡಿ ಪುರಾತನ ಕರೇಜ್ ವ್ಯವಸ್ಥೆಗಳ ವೀಕ್ಷಣೆ ಮಾಡಿತು.



ಕೇಂದ್ರ ಗ್ರಾಮೀಣಾಭವೃದ್ಧಿ ಸಚಿವಾಲಯದ ಅಧೀನ ಕಾರ್ಯದರ್ಶಿ ದೀಪಕ್ ಕುಮಾರ ಹಾಗೂ ಯೋಜನಾ ನಿರ್ದೇಶಕಿ ಸಾಹು ಅವರನ್ನೊಳಗೊಂಡ ತಂಡವು ಕರೇಜ್ ವ್ಯವಸ್ಥೆಯ ನಿರ್ಮಾಣ, ಅದರ ಐತಿಹಾಸಿಕ ಹಿನ್ನೆಲೆ, ನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣಕ್ಕೆ ಅದರ ಕೊಡುಗೆ ಹಾಗೂ ಇತ್ತೀಚಿನ ಪುನರುಜ್ಜೀವನ ಕಾರ್ಯಗಳ ಕುರಿತು ಮಾಹಿತಿ ಪಡೆದುಕೊಂಡಿತು. ಈ ವೇಳೆ ಟೀಮ್ ಯುವಾ ಸಂಸ್ಥೆಯ ಸಹ ಸಂಸ್ಥಾಪಕ ವಿನಯಕುಮಾರ್ ಮಾಳಗೆ, ಸದಸ್ಯರಾದ ಪ್ರೇಮಕುಮಾರ ಮತ್ತು ಶಂಕರ ಅವರು ಕೇಂದ್ರದ ಅಧಿಕಾರಿಗಳಿಗೆ ಕರೇಜ್ ವ್ಯವಸ್ಥೆಯ ಕುರಿತು ವಿವರಿಸಿದರು.

ಜಲ ಸಂರಕ್ಷಣೆಯ ಅನುಭವ ಪಾಠವಾಗಬಹುದು: ಗಡಿನಾಡು ಬೀದರನಲ್ಲಿ ನೀರಿನ ಸಂರಕ್ಷಣೆ, ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಅನುಭವಗಳು ದೇಶದ ವಿವಿಧ ಭಾಗಗಳಲ್ಲಿ ಎದುರಾಗುತ್ತಿರುವ ನೀರಿನ ಕೊರತೆ ಮತ್ತು ಜಲಸಂಕಷ್ಟಕ್ಕೆ ಪರಿಹಾರ ಕಂಡುಕೊಳ್ಳಲು ಕರೇಜ್ ವ್ಯವಸ್ಥೆ ಮಾರ್ಗದರ್ಶಕ ಅಂಶಗಳಾಗಬಹುದು. ಇಂತಹ ವಿಶಿಷ್ಟ ಅವಕಾಶಗಳು ಮತ್ತು ಸ್ಥಳೀಯ ಜ್ಞಾನವನ್ನು ರಾಜ್ಯ ಸರ್ಕಾರಗಳು ಅರ್ಥಮಾಡಿಕೊಂಡು ಬಳಸಿಕೊಳ್ಳಲು ಪ್ರಾರಂಭಿಸಿದಾಗ, ಒಂದು ಸಾಮಾನ್ಯ ಕೆಲಸವು ದೊಡ್ಡ ಉಪಕ್ರಮವಾಗಿ ರೂಪುಗೊಳ್ಳಬಹುದು ಎಂದು ದೀಪಕ್ ಕುಮಾರ ಅಭಿಪ್ರಾಯ ಪಟ್ಟರು.

ಇತಿಹಾಸದ ಪಾಠಗಳನ್ನು ಮರೆಯಬಾರದು: ಹಳೆಯ ಕಾಲದ ಜನರು ನೀರಿನ ಅಗತ್ಯವನ್ನು ಅರಿತು, ಸ್ಥಳೀಯ ಪರಿಸರ ಮತ್ತು ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ರೂಪಿಸಿಕೊಂಡಿದ್ದ ಇಂತಹ ಜಲಸಂಪನ್ಮೂಲಗಳು ನಮ್ಮ ಇತಿಹಾಸದ ಪ್ರಮುಖ ಪಾಠಗಳಾಗಿವೆ. ಅವುಗಳನ್ನು ಗೌರವಿಸುವುದರ ಜೊತೆಗೆ ಮುಂದಿನ ಪೀಳಿಗೆಗಾಗಿ ಸಂರಕ್ಷಿಸಬೇಕು. ಐತಿಹಾಸಿಕ ಜಲ ಸಂಪನ್ಮೂಲಗಳನ್ನು ಕೇವಲ ಪಾರಂಪರಿಕ ಸ್ಮಾರಕಗಳಾಗಿ ನೋಡುವ ಬದಲು, ಅವುಗಳಲ್ಲಿ ಅಡಗಿರುವ ಜಲ ನಿರ್ವಹಣೆ, ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಪರಿಸರ ಹೊಂದಾಣಿಕೆಯ ಜ್ಞಾನವನ್ನು ಇಂದಿನ ಅಭಿವೃದ್ಧಿ ಯೋಜನೆಗಳಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದರು.

ಬೀದರ್‌ನಲ್ಲಿ ಕರೇಜ್‌ಗಳ ಜೊತೆಗೆ ಐತಿಹಾಸಿಕ ಸ್ಟೆಪ್‌ವೆಲ್‌ಗಳು, ತೆರೆದ ಬಾವಿಗಳು, ಕೆರೆ-ಕಟ್ಟೆಗಳು ಹಾಗೂ ಇತರ ಸಾಂಪ್ರದಾಯಿಕ ಜಲಸಂಪನ್ಮೂಲಗಳ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ನಡೆದಿರುವ ಅನುಭವವನ್ನು ದಾಖಲಿಸಿ, ಇದನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ಪೈಲಟ್ ಅಧ್ಯಯನವಾಗಿ ಕೈಗೆತ್ತಿಕೊಳ್ಳಬೇಕು ಎಂದು ವಿನಯಕುಮಾರ ಮಾಳಗೆ ಮನವಿ ಮಾಡಿದರು.

ರಾಜ್ಯ ಸರ್ಕಾರವು ಈಗಾಗಲೇ ಬೀದರ್ ನ ಕರೇಜ್ ಪುನರುಜ್ಜೀವನ ಕಾಮಗಾರಿಗಳ ಎರಡನೇ ಹಂತಕ್ಕೆ ಸುಮಾರು 10 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದು, ಇದರಿಂದ ಮುಂದಿನ ಹಂತದ ಸಂರಕ್ಷಣೆ ಮತ್ತು ಪುನರುಜ್ಜೀವನ ಕಾರ್ಯಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಕೈಗೊಳ್ಳಲು ಸಾಧ್ಯವಾಗಲಿದೆ ಎಂದು ಅವರು ತಿಳಿಸಿದರು.

**ಕರೇಜ್ ವ್ಯವಸ್ಥೆಯಂತಹ ಪಾರಂಪರಿಕ ಜಲಮೂಲಗಳು ಕಡಿಮೆ ಶಕ್ತಿಯ ಬಳಕೆಯಲ್ಲಿ ನೀರಿನ ಸಂಗ್ರಹಣೆ ಮತ್ತು ಹರಿವನ್ನು ನಿರ್ವಹಿಸುವುದು, ಮಳೆನೀರನ್ನು ಭೂಗರ್ಭಕ್ಕೆ ತಲುಪಿಸುವುದು ಹಾಗೂ ದೀರ್ಘಕಾಲಿಕವಾಗಿ ನೀರಿನ ಲಭ್ಯತೆಯನ್ನು ಕಾಪಾಡಿಕೊಳ್ಳುವಂತಹ ಹಲವು ಅಂಶಗಳನ್ನು ಒಳಗೊಂಡಿವೆ. ಈ ಹಿನ್ನೆಲೆ ಬೀದರನ ಅನುಭವವನ್ನು ದಾಖಲಿಸಿ, ವೈಜ್ಞಾನಿಕ ಮತ್ತು ತಾಂತ್ರಿಕ ಅಧ್ಯಯನದೊಂದಿಗೆ ಸಂಯೋಜಿಸಿ, ದೇಶದ ನೀರಿನ ಕೊರತೆಯಿರುವ ಇತರ ಪ್ರದೇಶಗಳಲ್ಲಿ ಅನುಸರಿಸಬಹುದಾದ ಮಾದರಿಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ.**

**–ವಿನಯಕುಮಾರ ಮಾಳಗೆ, ಸಹ ಸಂಸ್ಥಾಪಕ, ಟೀಮ್ ಯುವಾ.**

# ಎಚ್‌ಎಸ್‌ಕೆ ಪಾಲಿಟೆಕ್ನಿಕ್‌ನಲ್ಲಿ ಯಂತ್ರ ಮಾನವ ಕುರಿತು ವಿಶೇಷ ತರಬೇತಿ ಕಾರ್ಯಗಾರ



**ಬಳ್ಳಾರಿ: ಅ,13–** ವೀ.ವಿ. ಸಂಘದ ಅಂಗ ಸಂಸ್ಥೆ ಹಾನಗಲ್ ಕುಮಾರೇಶ್ವರ ಪಾಲಿಟೆಕ್ನಿಕ್ಕಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದಿಂದ 'ಯಂತ್ರ ಮಾನವ' ಕುರಿತ ಒಂದು ದಿನದ ತರಬೇತಿ ಕಾರ್ಯಗಾರ ಸೋಮವಾರ ನಡೆಯಿತು.

ಕಾರ್ಯಗಾರದ ಸಂಪನ್ಮೂಲ ವ್ಯಕ್ತಿ ಜೆಎಸ್ ಡಬ್ಲು ಪೇಂಟ್ಸ್ ನ ಸಹಾಯಕ ವ್ಯವಸ್ಥಾಪಕ ವರುಣ್ ಮಹಾಭಾಷ್ಯಾ,ಯಂತ್ರ ಮಾನವ ಮನುಷ್ಯನ ಹಸ್ತಕ್ಷೇಪವಿಲ್ಲದೇ ಆತ ಬರೆದ ತಂತ್ರಾಂಶದಿಂದ ಮನುಷ್ಯನಂತೆ ಕೆಲಸ ಮಾಡುವ ಯಂತ್ರವನ್ನು ರೋಬೋಟ್ಸ್ ಎನ್ನುತ್ತಾರೆ ಮತ್ತು ರೋಬೋಗಳು ನಿರಂತರವಾಗಿ ಯಾವುದೇ ಧಣಿವಿಲ್ಲದೇ ಕೆಲಸ ಮಾಡುತ್ತವೆ ಕೆಲವೊಂದು ಕೈಗಾರಿಕೆಗಳಲ್ಲಿ ಇವಗಳ ಕೆಲಸ ಬಹಳ ಮುಖ್ಯ ಏಕೆಂದರೆ ಅತಿಉಷ್ಣ ಮತ್ತು ಶೀತಲಸ್ಥಳಕ್ಕೆ ಹೋಗಿ ಕೆಲಸ ಮಾನವನಿಂದ ಸಾಧ್ಯವಿಲ್ಲ. ಅಂತಹ ಸ್ಥಳಕ್ಕೆ ರೋಬೋಗಳನ್ನು ಬಳಸಿಕೊಳ್ಳಬಹುದು ಎಂದರು.

# ಆಧುನಿಕ ತಂತ್ರಜ್ಞಾನದಲ್ಲಿ ಜನರು ಓದಿನಿಂದ ವಿಮುಖ: ಶಶಿಕಾಂತ

**ರಾಯಚೂರು, ಅ. 13:** ಆಧುನಿಕ ತಂತ್ರಜ್ಞಾನದ ಹಾವಳಿಯಿಂದ ಜನರು ಓದಿನಿಂದ ವಿಮುಖರಾಗುತ್ತಿದ್ದಾರೆ. ಅಕ್ಷರ ಲೋಕಕ್ಕೆ ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಯಾಗಿದೆ. ಬರಹಗಾರರಿಂದ ನಿರಂತರ ಬರವಣಿಗೆ ಮುಂದು ವರೆಯಲು ಓದುಗರ ಸಂಖ್ಯೆಯೂ ನಿರಂತರ ಬೆಳೆಯಬೇಕು. ಆಗ ಮಾತ್ರ ಬರಹಗರ ಬದುಕಬಲ್ಲ ಎಂದು ಹಿರಿಯ ಸಾಹಿತಿ ಕೆ.ಶಶಿಕಾಂತ ಹೇಳಿದರು.

ಜಿಲ್ಲೆಯ ಲಿಂಗಸುಗೂರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ವಿಭಾಗದ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ದತ್ತಿನಿಧಿ ಕಾರ್ಯಕ್ರಮ ಮತ್ತು ಉಪನ್ಯಾಸಕ ದೊಡ್ಡಬಸಪ್ಪ ಹುಡೇದಗಡ್ಡಿ ಅವರ



**ರಾಯಚೂರು ಜಿಲ್ಲೆಯ ಲಿಂಗಸುಗೂರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ವಿಭಾಗದ ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ದತ್ತಿನಿಧಿ ಕಾರ್ಯಕ್ರಮ ಮತ್ತು ಉಪನ್ಯಾಸಕ ದೊಡ್ಡಬಸಪ್ಪ ಹುಡೇದಗಡ್ಡಿ ಅವರ 'ಕಾವ್ಯತತ್ವ ಚಿಂತನೆ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆ' ಕೃತಿ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ಕೆ.ಶಶಿಕಾಂತ ಅವರು ಮಾತನಾಡಿದರು.**

'ಕಾವ್ಯತತ್ವ ಚಿಂತನೆ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆ ಕಠಿಣ ವಿಷಯಗಳು. ಇಂತಹ ವಿಷಯಗಳನ್ನು ಸರಳಗೊಳಿಸಿ ವಿದ್ಯಾರ್ಥಿಗಳಿಗೆ ತಲುಪಿಸುವಲ್ಲಿ ದೊಡ್ಡಬಸಪ್ಪನವರು ಚಾಣಕ್ಷತನ ಮೆರೆದಿದ್ದಾರೆ. ಕಲಬುರಗಿ ನಿವೃತ್ತ ಪ್ರಾಧ್ಯಾಪಕ ಕಲ್ಯಾಣರಾವ್ ಪಾಟೀಲ ಮಾತನಾಡಿ, ಐಚ್ಛಿಕ ಕನ್ನಡ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗೆ ಈ ಕೃತಿ ಅಡಿಪಾಯವಾಗಿದೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಿ.ಬಿ.ಚಿಲ್ಕರಾಗಿ, ಕಣಮೇಶ ಚಿತ್ತಾಪುರ, ಬಸವರಾಜ ಖೈರವಾಡಗಿ, ಹನುಮಂತಪ್ಪ, ಕೃತಿಯ ಲೇಖಕ ದೊಡ್ಡಬಸಪ್ಪ ಹುಡೇದಗಡ್ಡಿ, ಮಹಾದೇವಪ್ಪ ನಾಗರಾಳ, ಪ್ರಾಂಶುಪಾಲ ವೆಂಕಟನಾರಾಯಣ, ಪ್ರಾಧ್ಯಾಪಕ ಕರೆಣ್ಣ ಭೀಮಣ್ಣ, ದತ್ತಿದಾನಿಗಳಾದ ವಿಜಯಕುಮಾರ ಹೆಸರೂರು, ಡಿ.ಜಿ. ಗುರಿಕಾರ, ಸಂಗನಗೌಡ. ಹುಲಗಪ್ಪ ಬುದ್ದಿನ್ನಿ, ಉಪನ್ಯಾಸಕ ಭೀಮಸಿಂಗ್ ಇದ್ದರು.

# ಕಬ್ಬಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಆಗ್ರಹ: ರಾಜ್ಯಾದ್ಯಂತ ಹೆದ್ದಾರಿ ಬಂದ್ ರೈತ ಸಂಘಟನೆ ಕರೆ

**ಬೆಳಗಾವಿ, ಅ.13:** ಕಬ್ಬು ಬೆಳೆಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವಂತೆ ಆಗ್ರಹಿಸಿ ರೈತ ಸಂಘಟನೆಗಳು ಇಂದು ರಾಜ್ಯಾದ್ಯಂತ ರಾಷ್ಟ್ರೀಯ ಹೆದ್ದಾರಿ ಬಂದ್‌ಗೆ ಕರೆ ನೀಡಿವೆ.

ಪ್ರಮುಖವಾಗಿ ಕರ್ನಾಟಕ ಮಹಾರಾಷ್ಟ್ರ ರಾಷ್ಟ್ರೀಯ ಹೆದ್ದಾರಿ ಬಂದ್‌ಗೆ ರೈತರು ಮುಂದಾಗಿದ್ದು, ಹಲವು ಮಾರ್ಗಗಳಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಅಗುವ ಸಾಧ್ಯತೆ ದಟ್ಟವಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಹತ್ತರಗಿ ಟೋಲ್, ಹಿರೇಬಾಗೇವಾಡಿ ಹಾಗೂ ಕೊಗನೊಳ್ಳಿ ಬಳಿ ರೈತರು ಪ್ರತಿಭಟನೆಗೆ ಸಿದ್ಧತೆ ನಡೆದಿದ್ದು, ಪೊಲೀಸರು ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 48 ಸೇರಿದಂತೆ ಹಲವು ಮಾರ್ಗಗಳಲ್ಲಿ ವಾಹನ ಸಂಚಾರ ಬದಲಾವಣೆ ಮಾಡಿದ್ದಾರೆ. ಪರ್ಯಾಯ ಮಾರ್ಗಗಳ ಬಗ್ಗೆ ಮಾಹಿತಿ ಇಲ್ಲಿದೆ.ದೆಹಲಿಯಲ್ಲಿ ಕೇಂದ್ರ ಸರ್ಕಾರದೊಂದಿಗೆ ನಡೆದ ಕಬ್ಬು ಬೆಳೆಗಾರರ ಸಭೆ ವಿಫಲವಾದ ಹಿನ್ನೆಲೆಯಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಹೆದ್ದಾರಿ ಬಂದ್‌ಗೆ ಕರೆ ನೀಡಿದೆ. ಬೆಳಗಾವಿ ಜಿಲ್ಲೆಯಲ್ಲಿ ರೈತರ ಪ್ರತಿಭಟನೆ ತೀವ್ರಗೊಳ್ಳುವ ಸಾಧ್ಯತೆ ಹಿನ್ನೆಲೆಯಲ್ಲಿ ಧಾರವಾಡದಿಂದ ಬೆಳಗಾವಿ ಮೂಲಕ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗಗಳಲ್ಲಿ ಬದಲಾವಣೆ ಮಾಡ ಲಾಗಿದೆ.

ಧಾರವಾಡದಿಂದ ಬರುವ ವಾಹನಗಳು ಅಳ್ನಾವರ, ಖಾನಾಪುರ ಮಾರ್ಗವಾಗಿ ಬೆಳಗಾವಿ ಪ್ರವೇಶಿಸಬಹುದು. ಧಾರವಾಡದಿಂದ ಗೋಕಾಕಕ್ಕೆ ತೆರಳುವ ವಾಹನಗಳು ಬೆಳವಡಿ, ಬೈಲಹೊಂಗಲ ಮಾರ್ಗ ಬಳಸುವಂತೆ ಸೂಚಿಸಲಾಗಿದೆ. ಮಹಾರಾಷ್ಟ್ರದಿಂದ ಹುಬ್ಬಳ್ಳಿ ಕಡೆಗೆ ಬರುವ ವಾಹನಗಳು ಕಾಗಲ್, ನಿಪ್ಪಾಣಿ, ಚಿಕ್ಕೋಡಿ, ಗೋಕಾಕ ಮತ್ತು ಸವದತ್ತಿ ಮಾರ್ಗವಾಗಿ ಧಾರವಾಡ ತಲುಪುವಂತೆ ಸಂಚಾರ ಬದಲಾವಣೆ ಮಾಡಲಾಗಿದೆ. ಭಾರೀ ವಾಹನಗಳು ಹಾಗೂ ಲಘು ವಾಹನ ಗಳ ಸಂಚಾರಕ್ಕೂ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹತ್ತರಗಿ ಟೋಲ್ ಬಳಿ ರಾಜ್ಯ ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜಾರಿ ನೇತೃತ್ವದಲ್ಲಿ ಹೆದ್ದಾರಿ ತಡೆ ನಡೆಸಲು ರೈತರು ಮುಂದಾಗಿದ್ದಾರೆ. ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಬಳಿ ರೈತ ಮುಖಂಡ ಪ್ರಕಾಶ ನಾಯಕ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದೆ. ಚಿಕ್ಕೋಡಿ ತಾಲೂಕಿನ ಕೊಗನೊಳ್ಳಿ ಟೋಲ್ ಬಳಿ ಮಹಾರಾಷ್ಟ್ರದ ರೈತರೂ ಧರಣಿ ನಡೆಸಲು ಸಜ್ಜಾಗಿದ್ದಾರೆ.ಕಬ್ಬಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವ ಬೇಡಿಕೆ ಮುಂದಿಟ್ಟು ಕರ್ನಾಟಕದ ರೈತರ ನಿಯೋಗ ದೆಹಲಿಯಲ್ಲಿ ಕೇಂದ್ರ ಸರ್ಕಾರದೊಂದಿಗೆ ಸೋಮ ವಾರ ಸಭೆ ನಡೆಸಿತ್ತು.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹಾಗೂ ರಾಜ್ಯದ ಸಹಕಾರ ಸಚಿವ ಲಕ್ಷ್ಮಣ ಸವದಿ ಕೂಡ ಭಾಗವಹಿಸಿದ್ದರು.

ರೈತರಿಗೆ ನೀಡಿದ ಭರವಸೆಯನ್ನು ಕೇಂದ್ರ ಸರ್ಕಾರ ಈಡೇರಿಸಿಲ್ಲ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜಾರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕರ್ನಾಟಕ, ಮಹಾರಾಷ್ಟ್ರದ ರೈತರು ಒಗ್ಗಟ್ಟಾಗಿ ಹೋರಾಟ ನಡೆಸಲಿದ್ದಾರೆ ಎಂದು ತಿಳಿಸಿದ್ದಾರೆ.

# ಕಾರ್ಮಿಕ ಸಂಹಿತೆಗಳ ಕಾರ್ಯಾಗಾರ; ಹೊಸ ಕಾನೂನುಗಳಿಂದ ಕಾರ್ಮಿಕರ ಹಿತರಕ್ಷಣೆ: ನ್ಯಾ.ಶ್ರೀನಿವಾಸ ನವಲೆ ಅಭಿಮತ

**ಕಲಬುರಗಿ, ಅ. 13:** ಕಾನೂನುಗಳಲ್ಲಿ ಹಿಂದೆ ಹಿಂದೆ ಹಲವಾರು ಕಾರ್ಮಿಕ ಕಾಯ್ದೆಗಳಿದ್ದವು. ಆದರೆ 2024 ರಲ್ಲಿ ಅವುಗಳಲ್ಲಿ ಬದಲಾವಣೆಗಳನ್ನು ತರಲಾಗಿದ್ದು, ಮೂರು ಹೊಸ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಕಾರ್ಮಿಕರ ಹಿತದೃಷ್ಟಿಯಿಂದ ತರಲಗಿರುವ ಈ ಕಾನೂನುಗಳನ್ನು ಕಡ್ಡಾಯವಾಗಿ ಅನುಷ್ಠಾಮನಗೊಳ್ಳಬೇಕಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯೆ ಕಾರ್ಯದರ್ಶಿ ಶ್ರೀನಿವಾಸ್ ನವಲೆ ಹೇಳಿದ್ದಾರೆ

ನಗರದ ಜಿಲ್ಲಾ ಪಂಚಾಯತ ಹೊಸ ಸಭಾಂಗಣದಲ್ಲಿ ಕಾರ್ಮಿಕ ಇಲಾಖೆ, ಕಲಬುರಗಿ ಪ್ರಾದೇಶಿಕ ವ್ಯಾಪ್ತಿಯ ಕಲಬುರಗಿ, ಬೀದರ, ರಾಯಚೂರು, ಯಾದಗಿರಿ, ಕೊಪ್ಪಳ, ವಿಜಯನಗರ, ಬಳ್ಳಾರಿ, ಚಿತ್ರದುರ್ಗ ಹಾಗೂ ದಾವಣಗೆರೆ ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರು ಹಾಗೂ ಸಿಬ್ಬಂದಿಗಳಿಗೆ ಆಯೋಜಿಸಿದ ಕಾರ್ಮಿಕ ಸಂಹಿತೆಗಳ ಎರಡು ದಿನಗಳ ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು.



ಐಪಿಸಿ, ಸಿಆರ್‌ಪಿಸಿ ಮತ್ತು ಇತರ ಕಾಯ್ದೆಗಳ ಬದಲಿಗೆ ಭಾರತೀಯ ದಂಡಸಂಹಿತೆ, ಭಾರತೀಯ ನಾಗರಿಕ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಗಳನ್ನು ಜಾರಿಗೆ ತರಲಾಗಿದ್ದು, ಕಾರ್ಮಿಕರ ಹಳೆಯ ಕಾಯ್ದೆಯಲ್ಲಿದ್ದ 511 ಸೆಕ್ಷನ್‌ಗಳನ್ನು 358ಕ್ಕೆ ಇಳಿಸಿ ಸೆಕ್ಷನ್‌ಗಳನ್ನು ಕಡಿಮೆ ಮಾಡಲಾಗಿದೆ ಎಂದ ಅವರು ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡುವುದು, ಅವರ ಹಕ್ಕುಗಳನ್ನು ಸಂರಕ್ಷಿಸುವುದು ಮತ್ತು ಯಾವುದೇ ಅನಗತ್ಯ ತೊಂದರೆಯಾಗದಂತೆ ಕಾನೂನುಗಳ ಮೂಲ ಉದ್ದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡು ಜಾರಿಗೆ ತಂದಿರುವುದರ ಮುಖ್ಯ ಉದ್ದೇಶವಾಗಿದೆ. ಹೊಸ ಕಾಯ್ದೆಗಳು ಮತ್ತು ತಿದ್ದುಪಡಿಗಳ ಬಗ್ಗೆ ವಕೀಲರು ಹಾಗೂ ನ್ಯಾಯಾಧೀಶರು ಸಂಪೂರ್ಣವಾಗಿ ತಿಳಿದುಕೊಂಡು, ಅವುಗಳ ಸರಿಯಾದ ಅರ್ಥ ವಿವರಣೆಯನ್ನು ನೀಡಬೇಕಾದ ಜವಾಬ್ದಾರಿಯಿದೆ. ಯಾವುದೇ ಕಾನೂನು ತಂದಾಗ ಅದು ಸಂವಿಧಾನದ ಆಶಯಗಳಿಗೆ ಮತ್ತು ಕಾರ್ಮಿಕರ ಹಕ್ಕುಗಳಿಗೆ ಅನುಗುಣವಾಗಿರಬೇಕು. ಕೇವಲ ಕಾನೂನು ಜಾರಿಗೆ ತಂದರೆ ಸಾಲದು, ಅದರ ಹಿಂದಿನ ಉದ್ದೇಶವನ್ನು ಮತ್ತು ಸರಿಯಾದ ಅರ್ಥವನ್ನು ಎಲ್ಲರು ತಿಳಿದುಕೊಳ್ಳುವುದು ಮುಖ್ಯ ಎಂದರು.

ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಾ. ವೆಂಕಟೇಶ ಶಿಂದಿಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರ ಸರ್ಕಾರವು ಹಳೆಯ ಕಾನೂನುಗಳನ್ನು ಸರಳೀಕರಿಸಿ ಸಮಿತಿಗಳ ರೂಪದಲ್ಲಿ ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಲಾಗುತ್ತಿದೆ. ವೇತನ ಕೋಡ್, ಸಾಮಾಜಿಕ ಭದ್ರತಾ ಕೋಡ್, ಔದ್ಯೋಗಿಕ ಸುರಕ್ಷತೆ ಹಾಗೂ ಕೈಗಾರಿಕಾ ಸಂಬಂಧಗಳ ಕೋಡ್ ಎಂಬ ನಾಲ್ಕು ಪ್ರಮುಖ ಕೋಡ್‌ಗಳನ್ನು ಜಾರಿಗೆ ತರಲಾಗಿದೆ. ದೇಶದ ನೂರಕ್ಕೂ ಹೆಚ್ಚು ಕಾರ್ಮಿಕ ಕಾನೂನುಗಳನ್ನು ಕ್ರೋಢೀಕರಿಸಿ, ಅಸಂಘಟಿತ ವಲಯದ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಮತ್ತು ಸೌಲಭ್ಯಗಳನ್ನು ಕಲ್ಪಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಕಲಬುರಗಿ ಉಚ್ಚನ್ಯಾಯಾ ಲಯದ ಹಿರಿಯ ನ್ಯಾಯವಾದಿ ಪಿ. ವಿಲಾಸ ಕುಮಾರ ಮಾತನಾಡಿ ಹೈಕೋರ್ಟ ಮತ್ತು ಜಿಲ್ಲಾ ಕೋರ್ಟ ಗಳಲ್ಲಿ ಪ್ರಾದೇಶಿಕ ಭಾಷೆ ಕನ್ನಡವನ್ನು ಬಳಸಬೇಕು ಮತ್ತು ಮಾತನಾಡುವಾಗಲೂ ಮಾತೃಭಾಷೆಗೆ ಆದ್ಯತೆ ನೀಡಬೇಕು ಹಾಗೂ ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ಪ್ರಕರಣಗಳಿಗೆ ಕಾರ್ಮಿಕ ಕಾನೂನುಗಳ ಬಗ್ಗೆ ಸರಿಯಾದ ಪರಿಜ್ಞಾನವಿರುವ ನ್ಯಾಯಾಧೀಶರ ಅವಶ್ಯಕತೆಯಿದೆ ಎಂದರು.

ಕಾರ್ಮಿಕ ನ್ಯಾಯಾಲಯಗಳ ಕೊರತೆ ಹಾಗೂ ಅಕ್ರಮ ನೇಮಕಾತಿಯಲ್ಲಿ ಉಂಟಾಗುತ್ತಿರುವ ಗೊಂದಲಗಳು ಹಾಗೂ ಅರ್ಹತಾ ಮಾನದಂಡಗಳ ಬಗ್ಗೆ ವಿಸ್ತೃತವಾಗಿ ತಿಳಿಸಿದ ಅವರು ಉಮಾದೇವಿ ಪ್ರಕರಣದ ತೀರ್ಪನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗುತ್ತಿದ್ದು, ಕಾನೂನುಬದ್ಧವಾಗಿ ನೇಮಕಗೊಂಡ ನೌಕರರ ಹಿತಾಸಕ್ತಿ ಕಾಪಾಡುವುದು ಮುಖ್ಯ. ಜಿಲ್ಲೆಗಳಲ್ಲಿ ಕಾರ್ಮಿಕ ನ್ಯಾಯಾಲಯಗಳು (ಲೇಬರ್ ಕೋರ್ಟ್) ಇಲ್ಲದಿರುವ ಕಡೆಗಳಲ್ಲಿ ಅವುಗಳನ್ನು ಸ್ಥಾಪಿಸುವುದು ಹಾಗೂ ಎಲ್ಲಯಿರಿಗೂ ಸುಲಭವಾಗಿ ನ್ಯಾಯ ದೊರೆಯುವಂತೆ ಮಾಡುವುದು ಮತ್ತು ಸಂವಿಧಾನದ ಅಡಿಯಲ್ಲಿ ಕಾರ್ಮಿಕರಿಗೆ ಸಿಗಬೇಕಾದ ಮೂಲಭೂತ ಹಕ್ಕುಗಳು ಮತ್ತು ಅವುಗಳ ಅನುಷ್ಠಾನದ ಪ್ರಾಮುಖ್ಯವನ್ನು ವಿವರಿಸಿದರು.

# ಕನ್ನಡಿಗರ ಮೇಲೆ ದೌರ್ಜನ್ಯ ಖಂಡಿಸಿ ಗೋವಾ ಮುಖ್ಯಮಂತ್ರಿಗೆ ಕರವೇ ಮನವಿ

**ಗೋಕಾಕ, ಅ.13:** ಗೋವಾದಲ್ಲಿರುವ ಕನ್ನಡಿಗರ ಲಾರಿ ಮಾಲೀಕರಿಗೆ, ಹಾಗೂ ಉದ್ಯಮಿದಾರರಿಗೆ ಉದ್ದೇಶ ಪೂರ್ವಕವಾಗಿ ತೊಂದರೆ ಕೊಡುತ್ತಿರುವವರು ವಿರುದ್ಧ ಕ್ರಮಕೈಗೊಳ್ಳುವಂತೆ ಕರವೇ ತಾಲೂಕ ಘಟಕದ ಅಧ್ಯಕ್ಷ ಬಸವರಾಜ ಖಾನಪ್ಪನವರ ನೇತೃತ್ವದಲ್ಲಿ ತಹಶೀಲ್‌ದಾರ ಮುಖಾಂತರ ಗೋವಾ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಗೋವಾ ಮತ್ತು ಕರ್ನಾಟಕ ರಾಜ್ಯಗಳ ನಡುವೆ ಔದ್ಯೋಗಿಕವಾಗಿ, ಆರ್ಥಿಕವಾಗಿ ಸಾಕಷ್ಟು ಪರಸ್ಪರ ಅವಲಂಬಿತವಾಗಿರುವ ಕ್ಷೇತ್ರಗಳಾಗಿವೆ. ಗೋವಾದ ಆರ್ಥಿಕತೆಯ ಪ್ರಗತಿಗೆ ಅತಿ ಹೆಚ್ಚು ಕನ್ನಡಿಗ ಪ್ರವಾಸಿಗರಿಂದಲೇ ನಡೆಯುತ್ತಿದೆ. ಇತ್ತೀಚಿನ ಬೆಳವಣಿಗೆಯಲ್ಲಿ ಗೋವಾದಲ್ಲಿನ ಕನ್ನಡಿಗರಿಗೆ ತೊಂದರೆ ಕೊಡುತ್ತಿರುವ ಘಟನೆಗಳು ಹೆಚ್ಚಾಗಿ ನಡೆಯುತ್ತಿದ್ದು ತಾವುಗಳು ಮಧ್ಯಸ್ಥಿಕೆ ವಹಿಸಿ ಕನ್ನಡಿಗರ ಹಿತ ಕಾಯುವಂತೆ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಕೆಂಪಣ್ಣ ಕಡಕೋಳ, ಹಣಮಂತ ಬನಾಜ, ಮಹಾಂತೇಶ ದಾಸಪ್ಪನವರ, ಮಲ್ಲಪ್ಪ ಅಂಬಿ, ಗುರು ಮುನ್ನೋಳ್ಳಿಮಠ, ರವಿ ಸುಲ್ತಾನಪೂರ, ರಾಜು ಪೂಜಾರಿ, ಲಕ್ಷ್ಮಣ ಕುರಲಿ, ಸೈಯ್ಯದ ಮುಲ್ಲಾ, ಭೀಮಶಿ ಚೂನನ್ನವರ, ಸೇರಿದಂತೆ ಅನೇಕರು ಇದ್ದರು.



**ಗೋವಾದಲ್ಲಿರುವ ಕನ್ನಡಿಗರ ಲಾರಿ ಮಾಲೀಕರಿಗೆ, ಉದ್ಯಮಿದಾರರಿಗೆ ಉದ್ದೇಶಪೂರ್ವಕ ತೊಂದರೆ ಕೊಡುತ್ತಿರುವವರು ವಿರುದ್ಧ ಕ್ರಮಕೈಗೊಳ್ಳುವಂತೆ ಕರವೇ ತಾಲೂಕ ಘಟಕದ ಅಧ್ಯಕ್ಷ ಬಸವರಾಜ ಖಾನಪ್ಪನವರ ನೇತೃತ್ವದಲ್ಲಿ ತಹಶೀಲದಾರ ಮುಖಾಂತರ ಗೋವಾ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.**

# ಮೇಲ್ಮನೆ ಚುನಾವಣೆ ಎಸ್.ವಿ.ಸಂಕನೂರ ಪರ ಸಂಸದ ಬೊಮ್ಮಾಯಿ ಮತಯಾಚನೆ



**ಹಾವೇರಿ, ಅ.13** ಹಾವೇರಿ ಜಿಲ್ಲೆಯ ರಾಣೆಬೆನ್ನೂರ ನಗರದ ವಕೀಲರ ಸಂಘಕ್ಕೆ ಹಾವೇರಿ– ಗದಗ ಲೋಕಸಭಾ ಕ್ಷೇತ್ರದ ಸದಸ್ಯ ಬಸವರಾಜ ಬೊಮ್ಮಾಯಿ ಭೇಟಿ ನೀಡಿ ಪಶ್ಚಿಮ ಪದವೀಧರ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾದ ಎಸ್.ವಿ ಸಂಕನೂರ ಅವರ ಪರ ಮತಯಾಚನೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಅರುಣಕುಮಾರ ಪೂಜಾರ, ವಕೀಲರ ಸಂಘದ ಅಧ್ಯಕ್ಷ ಬಿ.ಎಚ್ ಬುರಡಿಕಟ್ಟಿ, ಮುಖಂಡ ಎಸ್.ಎಸ್. ಶಿರಗಂಬಿ, ಕೆ.ಶಿವಲಿಂಗಪ್ಪ, ಎಸ್.ಎಸ್ ರಾಮಲಿಂಗಣ್ಣವರ, ಡಾ. ಬಸವರಾಜ ಕೇಲಗಾರ, ಎಚ್.ಎಚ್ ತಿಮ್ಮೇನಹಳ್ಳಿ, ಶಿವಕುಮಾರ ಮುದ್ದಪ್ಪನವರ, ಭೋಜರಾಜ ಕರೂದಿ, ಮಂಜುನಾಥ ಕಾಟೆ, ಸಿದ್ದು ಚಿಕ್ಕಬಿದರಿ ಸೇರಿದಂತೆ ವಕೀಲರ ಸಂಘದ ಸದಸ್ಯರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

# ಬರ ಪರಿಹಾರಕ್ಕಾಗಿ ಸಿಎಂ ನಿಧಿಗೆ 6 ತಿಂಗಳ ವೇತನ ದೇಣಿಗೆ: ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಘೋಷಣೆ

**ವಿಜಯಪುರ, ಅ.13:** ಭೀಕರ ಬರಗಾಲ ಹಿನ್ನೆಲೆಯಲ್ಲಿ ರೈತರಿಗೆ ಪರಿಹಾರ ವಿತರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಆರು ತಿಂಗಳ ವೇತನವನ್ನು ದೇಣಿಗೆಯಾಗಿ ನೀಡಲಾಗುವುದು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಘೋಷಿಸಿದ್ದಾರೆ.



ರೈತರಿಗೆ ಪರಿಹಾರ ನೀಡಲು ಒತ್ತಾಯಿಸಿ, ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ ಕುಮಾರ್ ಅವರ ತೇಜೋವಧೆ ಮಾಡಿ ಅರಾಜಕತೆ ಸೃಷ್ಟಿ ಮಾಡುತ್ತಿರುವ ರಾಷ್ಟ್ರ ವಿರೋಧಿ ಶಕ್ತಿಗಳ ವಿರುದ್ಧ ಸೋಮವಾರ ನಗರದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

ಬರಗಾಲ ಪರಿಸ್ಥಿತಿಯಿಂದ ತೊಂದರೆ ಎದುರಿಸುತ್ತಿರುವ ರೈತರಿಗೆ ಕೇವಲ 2,500 ರೂ. ಇನ್ಪುಟ್ ಸಬ್ಸಿಡಿಯನ್ನು ಸರ್ಕಾರ ನೀಡಿದೆ ಎಂದು ಅಸಮಾಧಾನ ಹೊರಹಾಕಿದರು. ರೈತರ ಪರವಾಗಿ ಯಾವ ಒಬ್ಬ ಶಾಸಕರು ಸಹ ಮಾತನಾಡಲು ತಯಾರಿಲ್ಲ. ಮಂತ್ರಿ ಸ್ಥಾನಕ್ಕಾಗಿ ಕೆಲ ಶಾಸಕರು ರಾಜೀನಾಮೆ ಕೊಡಲು ಹೋಗಿದ್ದರು. ಈಗ ರೈತರಿಗಾಗಿ ರಾಜೀನಾಮೆ ಕೊಡಲು ಮುಂದೆ ಬರಲಿ ನೋಡೋಣ. ರೈತರಿಗಾಗಿ ಎಲ್ಲ ಶಾಸಕರು ತಮ್ಮ ಸಂಬಳ ಕೊಡಲಿ ಎಂದು ಸವಾಲು ಹಾಕಿದರು.

ಈಗ ಸರ್ಕಾರ ಘೋಷಿಸಿರುವ 2,500 ರೂ.ಗಳನ್ನು ಗಂಡ–ಹೆಂಡತಿ ಸೇರಿ ಒಂದೇ ದಿನಕ್ಕೆ ದುಡಿಯುತ್ತಾರೆ. ಈ ಹಣ ತರಕಾರಿ ಮಾರಾಟ ಮಾಡುವವರು ಹಾಗೂ ಹಮಾಲಿಗಳ ಒಂದು ದಿನದ ಗಳಿಕೆಯಾಗಿದೆ. ರೈತರ ಬೀಜ ಹಾಗೂ ಗೊಬ್ಬರಕ್ಕೆ ಆಗುವಷ್ಟು ಪರಿಹಾರವಾದರೂ ನೀಡಬೇಕು. ಅದೂ ಆಗದಿದ್ದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದ ಕಿಡಿಕಾರಿದ ಯತ್ನಾಳ್, ರೈತರಿಗೆ ಕನಿಷ್ಠ 25 ಸಾವಿರ ರೂ. ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

# ಸಿದ್ದರಾಮಯ್ಯಗೆ ಆಹ್ವಾನ ನೀಡದೆ ಸಂವಿಧಾನ ದಿನ ಆಯೋಜಿಸಿದ ಮಹದೇವಪ್ಪ

**ಮೈಸೂರು, ಅ.13:** ಆಪ್ತ ಮಿತ್ರರಾಗಿದ್ದ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಮಾಜಿ ಸಚಿವ ಎಚ್.ಸಿ ಮಹದೇವಪ್ಪ ನಡುವಿನ ಮುನಿಸು 2ನೇ ಹಂತಕ್ಕೆ ತಲುಪಿದಂತಿದೆ. ಸಿದ್ದರಾಮಯ್ಯ ಅವರಿಗೆ ಆಹ್ವಾನ ಇಲ್ಲದೇ ಮಹದೇವಪ್ಪ ಅವರು ಮೈಸೂರಿನಲ್ಲಿ ರಾಷ್ಟ್ರೀಯ ಸಂವಿಧಾನ ದಿನ ಕಾರ್ಯಕ್ರಮ ಆಯೋಜನೆ ಮಾಡಿರುವುದು ಇದಕ್ಕೆ ತಾಜಾ ಉದಾಹರಣೆ ಯಾಗಿದೆ.



ನವೆಂಬರ್ 26, 27ರಂದು ಮೈಸೂರಿನಲ್ಲಿ ಸಂವಿಧಾನದ ಹೆಸರಿನಲ್ಲಿ ರಾಷ್ಟ್ರೀಯ ಸಂವಿಧಾನ ದಿನ ಸಮ್ಮೇಳನವನ್ನ ಹಮ್ಮಿಕೊಳ್ಳಲಾಗಿದೆ. ಈ ಸಮ್ಮೇಳನ ಮಾಜಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ ಅವರ ನೇತೃತ್ವದಲ್ಲಿ ಆಯೋಜನೆಗೊಳ್ಳುತ್ತಿದೆ.

ಅಲ್ಲದೇ ಸಿದ್ದರಾಮಯ್ಯ ಅವರನ್ನ ಆಹ್ವಾನಿಸಲ್ವಾ ಅನ್ನೋ ಪ್ರಶ್ನೆಗೂ ಮಹದೇವಪ್ಪ ಅವರು ಸ್ಪಷ್ಟ ಉತ್ತರ ನೀಡದಿರುವುದು ಇಬ್ಬರ ನಡುವಿನ ಮುನಿಸು ಮುಂದಿನ ಹಂತ ತಲುಪಿದೆಯಾ ಎನ್ನುವ ಪ್ರಶ್ನೆ ಮೂಡಿದೆ.

ಸಿದ್ದರಾಮಯ್ಯ ಮೈಸೂರಿಗೆ ಬಂದರೆ ಮಹದೇವಪ್ಪ ಜೊತೆಯಲ್ಲೇ ಇರುತ್ತಿದ್ದರು. ಇನ್ನು ಮೈಸೂರಿನಲ್ಲಿ ಯಾವುದೇ ಕಾರ್ಯಕ್ರಮಗಳ ಇರಲಿ ಒಟ್ಟಿಗೆ ಭಾಗವಹಿಸುತ್ತಿದ್ದರು. ಆದರೆ, ಇದೀಗ ಇಬ್ಬರೂ ಅಂತರ ಕಾಯ್ದು ಕೊಂಡಿದ್ದಾರೆ.

ಸಿದ್ದರಾಮಯ್ಯ ಅವರನ್ನ ಕಾರ್ಯಕ್ರಮಕ್ಕೆ ಆಹ್ವಾನಿಸಲ್ವಾ ಅನ್ನೋ ಪ್ರಶ್ನೆಗೆ ಹೆಸರು ಹೇಳದೇ ಖಡಕ್ ಉತ್ತರ ಕೊಟ್ಟ ಮಹದೇವಪ್ಪ, ಇಲ್ಲಿ ಯಾವ ವ್ಯಕ್ತಿಯ ಪ್ರಶ್ನೆಯೂ ಇರಲ್ಲ. ಸಂವಿಧಾನದ ರಕ್ಷಕರು ಎಲ್ಲಾ ಸೇರಿ ಇದರಲ್ಲಿ ಭಾಗವಹಿಸುತ್ತಾರೆ ಎಂದಷ್ಟೇ ಹೇಳಿದ್ದಾರೆ.

ತಮ್ಮ ಹಾಗೂ ಸಿದ್ದರಾಮಯ್ಯ ನಡುವಿನ ಸ್ನೇಹದ ಕುರಿತ ಪ್ರಶ್ನೆಗೂ ಉತ್ತರ ಕೊಡದೇ ನುಣುಚಿಕೊಂಡ ಮಾಜಿ ಸಚಿವರು, ಸ್ನೇಹದ ಪ್ರೀತಿ ಜಾಸ್ತಿಯೂ ಆಗಲ್ಲ, ಕಡಿಮೆಯೂ ಆಗಲ್ಲ. ನಾನು ಈಗ ಬೇರೆ ಯಾವ ಪ್ರಶ್ನೆಗಳಿಗೂ ಈಗ ಉತ್ತರ ಕೊಡಲ್ಲ. ಬೇರೆ ಯಾವುದೇ ವಿಷಯವನ್ನ ಇಲ್ಲಿ ತರೋದು ಬೇಡ, ಮುಕ್ತ ಮನಸ್ಸಿನಿಂದ ರಾಷ್ಟ್ರೀಯ ಸಮ್ಮೇಳನ ಕಾರ್ಯಕ್ರಮ ನಡೆಸುತ್ತಿದ್ದೇವೆ ಎಲ್ಲರೂ ಪಾಲ್ಗೊಳ್ಳಿ ಎಂದು ಹೇಳಿದ್ದಾರೆ.

## 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮೋಹನ್ ಹೆಚ್.ಎ ಅಭಿಮತ

# ಆರಂಭಿಕ ಚಿಕಿತ್ಸೆ, ಕುಟುಂಬದ ಬೆಂಬಲದಿಂದ ಮಾನಸಿಕ ಕಾಯಿಲೆ ಗುಣಮುಖ ಸಾಧ್ಯ

**ಬಳ್ಳಾರಿ,ಅ.13.**ವ್ಯಕ್ತಿಯಲ್ಲಿ ಪದೇ ಪದೇ ಎದುರಾಗುವ ತೀವ್ರ ಸಂಕಷ್ಟಗಳು, ಅತಿಯಾದ ಮಾನಸಿಕ ಒತ್ತಡ ಹಾಗೂ ಮಿತಿಮೀರಿದ ಆಲೋಚನೆಗಳಿಂದ ಮಾನಸಿಕ ಕಾಯಿಲೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆರಂಭಿಕ ಹಂತದಲ್ಲಿಯೇ ರೋಗಿಯ ಮನಃಸ್ಥಿತಿಯನ್ನು ಅರ್ಥೈಸಿಕೊಂಡು, ಕುಟುಂಬದ ಸದಸ್ಯರ ಸಹಕಾರ ಮತ್ತು ಪ್ರೀತಿಯೊಂದಿಗೆ ಸೂಕ್ತ ಚಿಕಿತ್ಸೆ ಕೊಡಿಸಿದರೆ ಕಾಯಿಲೆಯನ್ನು ಬೇಗನೆ ಗುಣಪಡಿಸಬಹುದು ಎಂದು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ವಿಮರ್ಶಾ ಮಂಡಳಿಯ ಅಧ್ಯಕ್ಷರಾದ ಮೋಹನ್ ಹೆಚ್.ಎ ಅವರು ಹೇಳಿದರು.

ನಗರದ ಬಿ.ಐ.ಟಿ.ಎಂ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ?ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ–2026? ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಹಿಂದೆ ಮಾನಸಿಕ ರೋಗಿಗಳನ್ನು ಮನೆಯಲ್ಲಿ ಇರಿಸಿಕೊಳ್ಳುವುದು ಅಪಾಯಕಾರಿ ಎಂಬ ತಪ್ಪು ಕಲ್ಪನೆ ಇತ್ತು. ಆದರೆ ಕಳೆದ ಮೂರು ದಶಕಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಆದ ಅಭೂತಪೂರ್ವ ಸಂಶೋಧನೆಗಳು ಮತ್ತು ಸುಧಾರಿತ ಚಿಕಿತ್ಸಾ ಪದ್ಧತಿಗಳಿಂದಾಗಿ ರೋಗಿಗಳಿಗೆ ಮನೆಯಲ್ಲಿಯೇ ಆರೈಕೆ ಹಾಗೂ ಚಿಕಿತ್ಸೆ ನೀಡಲು ಸಾಧ್ಯವಿದೆ. ಪ್ರತಿಯೊಬ್ಬರೂ ಆತ್ಮಸ್ಥೈರ್ಯ ಮತ್ತು ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳುವ ಮೂಲಕ ಇಂತಹ ಸಮಸ್ಯೆಗಳಿಂದ ಹೊರ ಬರಬಹುದು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ಮಾತನಾಡಿ, ವಿದ್ಯಾರ್ಥಿಗಳು ಅನಗತ್ಯ ಒತ್ತಡ ಹಾಗೂ ಖಿನ್ನತೆಗೆ ಒಳಗಾಗಬಾರದು. ಯಾವುದೇ ಮಾನಸಿಕ ಸಮಸ್ಯೆ ಅಥವಾ ಸಂಕಷ್ಟಗಳಿದ್ದಾಗ ಮುಕ್ತವಾಗಿ ಪಾಲಕರೊಂದಿಗೆ ಮನದಾಳದ ನೋವನ್ನು ಹಂಚಿಕೊಂಡು ಮಾನಸಿಕವಾಗಿ ಸದೃಢರಾಗಬೇಕು ಎಂದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ. ವೀರೇಂದ್ರ ಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಾಮಾನ್ಯವಾಗಿ 15 ರಿಂದ 25 ವರ್ಷದ ಯುವಜನತೆಯಲ್ಲಿ ಗ್ರಾಮೀಣ–ನಗರ ಅಥವಾ ಬಡವ–ಶ್ರೀಮಂತ ಎಂಬ ಭೇದವಿಲ್ಲದೆ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಇದಕ್ಕಾಗಿ ಉಚಿತ ಆಪ್ತ ಸಮಾಲೋಚನೆ ಮತ್ತು ಔಷಧೋಪಚಾರಗಳು ಲಭ್ಯವಿವೆ. ಸಾರ್ವಜನಿಕರು ಯಾವುದೇ ಸಂದರ್ಭದಲ್ಲೂ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಟೆಲಿ–ಮನಸ್ ಉಚಿತ ಸಹಾಯವಾಣಿ 14416 ಸಂಖ್ಯೆಗೆ ಕರೆ ಮಾಡಿ ಸೂಕ್ತ ಮಾಹಿತಿ ಹಾಗೂ ಮಾರ್ಗದರ್ಶನ ಪಡೆಯಬಹುದು ಎಂದು ತಿಳಿಸಿದರು.

ಮನೋರೋಗ ತಜ್ಞ ಡಾ. ನಂದಕಿಶೋರ್ ಎನ್.ಬಿ ಅವರು ಮಾತನಾಡಿ, ಮಾನಸಿಕ ಸಮಸ್ಯೆಯು ವ್ಯಕ್ತಿಯ ಆಲೋಚನೆ, ಭಾವನೆ ಹಾಗೂ ಗ್ರಹಿಕೆಯನ್ನು ಬಾಧಿಸುತ್ತದೆ. ಕಾರಣವಿಲ್ಲದೆ ಅತಿಯಾದ ಕೋಪ, ದುಃಖ, ಅತಿಯಾದ ನಗು ಅಥವಾ ಅಳು ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಲಕ್ಷಣಗಳು ಕಂಡ ಕೆಲವೇ ವಾರಗಳಲ್ಲಿ ಮಾತ್ರೆ ಅಥವಾ ಚುಚ್ಚುಮದ್ದಿನ ಚಿಕಿತ್ಸೆ ಆರಂಭಿಸಿದರೆ ಕಾಯಿಲೆಯನ್ನು ಶೀಘ್ರವೇ ನಿಯಂತ್ರಿಸಬಹುದು.

ಪ್ರಸ್ತುತ 'ಮನೋಚೈತನ್ಯ' ಕಾರ್ಯಕ್ರಮದಡಿ ಪ್ರತಿ ಮಂಗಳವಾರ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಉಚಿತ ತಪಾಸಣೆ ಮತ್ತು ಆಪ್ತ ಸಮಾಲೋಚನೆ ನಡೆಸಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಮಾನಸಿಕ ಆರೋಗ್ಯ ರಕ್ಷಣೆಯ ಕುರಿತು ಪ್ರತಿಜ್ಞಾವಿಧಿ ಬೋಧಿಸಲಾಯಿತು. ವಿಶ್ವ ದೃಷ್ಟಿ ದಿನದ ಅಂಗವಾಗಿ ಡಾ. ಅಪರ್ಣಾ ಅವರು ಕಣ್ಣಿನ ಆರೈಕೆ ಹಾಗೂ ನೇತ್ರದಾನದ ಮಹತ್ವದ ಕುರಿತು ಜಾಗೃತಿ ಮೂಡಿಸಿದರು.

# ಪ್ರತಿವರ್ಷವೂ ಹೆಚ್ಚುತ್ತಿರುವ 'ಸೈಬರ್ ವಂಚನೆ': ಮೂರು ವರ್ಷಗಳಲ್ಲಿ 115 ಪ್ರಕರಣಗಳಲ್ಲಿ 25 ಕೋಟಿ ವಂಚನೆ

**ಕಲಬುರಗಿ, ಅ. 13:** ಅವರೊಬ್ಬ ಸರ್ಕಾರಿ ಆಸ್ಪತ್ರೆಯ ಸ್ಟಾಫ್ ನರ್ಸ್. ಮಧ್ಯಾಹ್ನದ ಪಾಳಿ ಕೆಲಸಕ್ಕೆ ಹೋಗಲು ಸಜ್ಜಾಗಿದ್ದರು. ಮೊಬೈಲ್ ಫೋನ್‌ನಲ್ಲಿ ವಿಡಿಯೊಗಳನ್ನು ಸ್ಕ್ರಾಲ್ ಮಾಡುತ್ತಿದ್ದರು. ಆನ್‌ಲೈನ್ ಲಾಟರಿಯ ಲಿಂಕ್ ಬಂತು. ಅದನ್ನು ಒತ್ತಿ 40ಕ್ಕೆ ಒಂದರಂತೆ ಎರಡು ಟಿಕೆಟ್ ಖರೀದಿಸಿದ್ದೇ ನೆಪ; 1 ಲಕ್ಷದಷ್ಟು ಸೈಬರ್ ವಂಚನೆಗೆ ಒಳಗಾದರು!

ಮತ್ತೊಬ್ಬರು ವೈದ್ಯಕೀಯ ಕಾಲೇಜಿನ ನಿವೃತ್ತ ಉಪಪ್ರಾಚಾರ್ಯ. ಅವರ ಪತ್ನಿಯ ಮೊಬೈಲ್‌ಗೆ ಕರೆಯೊಂದು ಬಂದಿತ್ತು. ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರಿಂದ ತಾವೇ ಫೋನ್ ಪಡೆದು ಉತ್ತರಿಸುತ್ತಿದ್ದರು. ಆ ಕಡೆಯಿಂದ ಫೋನ್ ಮಾಡಿದವರು ತಮ್ಮನ್ನು ತಾವು ಕೇಂದ್ರೀಯ ತನಿಖಾ ಸಂಸ್ಥೆಗಳ ಅಧಿಕಾರಗಳೆಂದು ಪರಿಚಯಿಸಿಕೊಂಡರು. ಹಣ ಲೇವಾದೇವಿ ಪ್ರಕರಣ ಹಾಗೂ ಉಗ್ರರಿಗೆ ಧನ ಸಹಾಯ ನೀಡಿದ ಆರೋಪ ನಿಮ್ಮ ಮೇಲಿದೆ ಎಂದು ಹೆದರಿಸುತ್ತ, 'ಡಿಜಿಟಲ್ ಅರೆಸ್ಟ್' ಸೋಗಿನಲ್ಲಿ ಸ್ವಂತಮನೆಯನ್ನೂ ಅಡವಿರಿಸಿ 50 ಲಕ್ಷ ಸೇರಿದಂತೆ ಬರೋಬ್ಬರಿ 1.79 ಕೋಟಿ ದೋಚಿದರು...!

ಇವೆಲ್ಲ ಸೈಬರ್ ವಂಚನೆ ಬಗೆಗಳು. ಕ್ರೆಡಿಟ್ ಕಾರ್ಡ್ ಮಿತಿ ಹೆಚ್ಚಿಸುವುದಾಗಿ ಲಿಂಕ್ ಕಳುಹಿಸಿ ವಂಚನೆ, ಎಪಿಕೆ ಫೈಲ್ ಕಳುಹಿಸಿ ಮೊಬೈಲ್ ಬ್ಯಾಂಕ್ ಖಾತೆಯಿಂದ ಹಣ ಎಗರಿಸುವುದು, ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಬೆದರಿಸಿ ಕೋಟ್ಯಂತರ ರೂ ದೋಚುವುದು, ಷೇರುಪೇಟೆ ಯಲ್ಲಿ ಹೂಡಿಕೆಗೆ ಪ್ರಚೋದಿಸಿ ಹಣ ವಂಚಿಸುವುದೆಲ್ಲವೂ ಸೈಬರ್ ವಂಚನೆಗಳು ಇತ್ತೀಚೆಗೆ ಹೆಚ್ಚುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಎಲ್ಲರ ಕೈಗೂ ಸ್ಮಾರ್ಟ್‌ಫೋನ್‌ಗಳು ಓಡಾಡುತ್ತಿರುವ ಈ ಹೊತ್ತಿನಲ್ಲಿ ಸೈಬರ್ ವಂಚನೆಗಳು ಕ್ಷಿಪ್ರಗತಿಯಲ್ಲಿ ಹೆಚ್ಚುತ್ತಿವೆ. ದಿಢೀರ್ ಶ್ರೀಮಂತರಾಗುವ ಆಸೆ, ಅಧಿಕ ಲಾಭದ ಆಮಿಷದ ಖೆಡ್ಡಾಕ್ಕೆ ಗ್ರಾಮೀಣ ಜನರಷ್ಟೇ ಅಲ್ಲದೇ ಸುಶಿಕ್ಷಿತರೇ ಹೆಚ್ಚಾಗಿ ಬೀಳುತ್ತಿದ್ದಾರೆ.

ಕಲಬುರಗಿ ಪೊಲೀಸ್ ಆಯುಕ್ತರ ಕಚೇರಿ ವ್ಯಾಪ್ತಿಯಲ್ಲಿ 2023ರಲ್ಲಿ 31 ಪ್ರಕರಣಗಳಲ್ಲಿ ಸೈಬರ್ ವಂಚನೆಗೆ ಒಳಗಾಗಿದ್ದ ಸಂತ್ರಸ್ತರು 1.10 ಕೋಟಿ ಕಳೆದುಕೊಂಡಿದ್ದರು. 2024ರಲ್ಲಿ 16 ಪ್ರಕರಣಗಳಲ್ಲಿ ಕಲಬುರಗಿ ನಾಗರಿಕರು 4.89 ಕೋಟಿ ಕಳೆದುಕೊಂಡಿದ್ದರು. 2025ರಲ್ಲಿ 22 ಪ್ರಕರಣಗಳು ವರದಿಯಾಗಿದ್ದು, 12.98 ಕೋಟಿ ಸೈಬರ್ ವಂಚನೆಯಾಗಿತ್ತು. 2026ರ ಸೆಪ್ಟೆಂಬರ್ ಅಂತ್ಯದ ವರೆಗೆ 46 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿದ್ದು, ಜನರು 6.11 ಕೋಟಿ ಕಳೆದುಕೊಂಡಿದ್ದಾರೆ.



ಮೂರೂವರೆ ವರ್ಷಗಳಲ್ಲಿ ಕಲಬುರಗಿ ನಾಗರಿಕರು ಸೈಬರ್ ವಂಚನೆಯಲ್ಲಿ ಒಟ್ಟು 25.08 ಕೋಟಿ ಕಳೆದುಕೊಂಡಿದ್ದಾರೆ. ಈ ಪೈಕಿ 4.32 ಕೋಟಿಯನ್ನು ಪೊಲೀಸರು ಜಪ್ತಿ ಮಾಡಿ ಸಂತ್ರಸ್ತರಿಗೆ ಮರಳಿಸಿದ್ದಾರೆ. ಒಟ್ಟು 20 ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಕೈಕೊಂಡಿದ್ದಾರೆ.

ಜಿಲ್ಲೆಯ ಗ್ರಾಮೀಣ ಭಾಗದಲ್ಲೂ ಸೈಬರ್ ಪ್ರಕರಣಗಳು ಹೆಚ್ಚೆಚ್ಚು ವರದಿಯಾಗುತ್ತಿವೆ. ಕಲಬುರಗಿ ಗ್ರಾಮೀಣ ಸೆನ್ ಠಾಣೆಯಲ್ಲಿ 2024ರಲ್ಲಿ 28 ಪ್ರಕರಣಗಳಲ್ಲಿ ಜನರು 1.63 ಕೋಟಿ ಕಳೆದುಕೊಂಡಿದ್ದರು. 2025ರಲ್ಲಿ 12 ಪ್ರಕರಣಗಳು ದಾಖಲಾಗಿ, 54.84 ಲಕ್ಷ ಸೈಬರ್ ದೋಖಾ ಆಗಿತ್ತು. 2026ರ ಸೆಪ್ಟೆಂಬರ್ ಅಂತ್ಯಕ್ಕೆ 30 ಪ್ರಕರಣಗಳು ದಾಖಲಾಗಿದ್ದು, ನಾಗರಿಕರು 91.52 ಲಕ್ಷ ಕಳೆದುಕೊಂಡಿದ್ದಾರೆ. ಮೂರು ವರ್ಷಗಳಲ್ಲಿ ಒಟ್ಟು 70 ಪ್ರಕರಣಗಳಲ್ಲಿ 24 ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ಒಟ್ಟು 36.07 ಲಕ್ಷ ಜಪ್ತಿ ಮಾಡಿ ಸಂತ್ರಸ್ತರಿಗೆ ಹಸ್ತಾಂತರಿಸಿದ್ದಾರೆ.

'ಸೈಬರ್ ಅಪರಾಧಗಳು ಜಗತ್ತಿನಾದ್ಯಂತ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿವೆ. ಇವೆಲ್ಲ ಎಲ್ಲಿಯೋ ಕುಳಿತು ಮಾಡುವ ಅಪರಾಧಗಳು. ಅದೊಂದು ಸಂಘಟಿತ ಅಪರಾಧ ತಂಡದಿಂದ ಬೆಳೆಯುತ್ತಿದೆ. ಬಹುತೇಕ ಸೈಬರ್ ಅಪರಾಧ ಪ್ರಕರಣಗಳಲ್ಲಿ ಕೆಳಹಂತದ ಆರೋಪಿಗಳಷ್ಟೇ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ.

2ನೇ ಹಂತದ ಆರೋಪಿಗಳು ದುರ್ಲಬವಾಗಿ ಸಿಗುತ್ತಾರೆ. 3ನೇ ಹಂತದ ಆರೋಪಿಗಳಂತೂ ಅಗೋಚರ ವಾಗಿಯೇ ಉಳಿಯುತ್ತಿದ್ದಾರೆ. ಹೀಗಾಗಿ ಜಾಗ್ರತೆಯೇ ವಂಚನೆಗಳಿಂದ ಪಾರಾಗಲು ಇರುವ ಏಕೈಕ ಉಪಾಯ' ಎಂಬುದು ಪೊಲೀಸ್ ಅಧಿಕಾರಿಗಳ ಅಭಿಮತ.

**ಬದಲಾದ ಸ್ವರೂಪ;** ಎಚ್ಚರಿಕೆಯೇ ಪರಿಹಾರ: 'ಮೊದಲೆಲ್ಲ ಓಟಿಪಿ ಆಧಾರಿತ ಸೈಬರ್ ವಂಚನೆ ನಡೆಯುತ್ತಿದ್ದವು. ಆದರೆ, ಹೂಡಿಕೆ ಹೆಸರಲ್ಲಿ, ಎಪಿಕೆ, ಮಾಲ್‌ವೇರ್ ಲಿಂಕ್, ನಕಲಿ ಪೊಲೀಸ್/ಸರ್ಕಾರಿ ಅಧಿಕಾರಿಗಳ ಹೆಸರಲ್ಲಿ 'ಡಿಜಿಟಲ್ ಅರೆಸ್ಟ್' ವಂಚನೆಗಳು ಈಗ ಅಧಿಕವಾಗಿ ವರದಿಯಾಗುತ್ತಿವೆ. ಇಂಥ ವಂಚನೆಗಳಿಂದ ಪಾರಾಗಲು ಸಾರ್ವಜನಿಕರು ಅಪರಿಚಿತ ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದು, ಓಟಿಪಿ, ಪಿನ್ ಹಾಗೂ ಬ್ಯಾಂಕ್ ವಿವರಗಳನ್ನು ಯಾರೊಂದಿಗೂ ಹಂಚಿಕೊಳ್ಳಬಾರದು.

ಸೈಬರ್ ವಂಚನೆಗೆ ಒಳಗಾದ ತಕ್ಷಣವೇ 1930ಗೆ ಕರೆ ಮಾಡಿ ದೂರು ದಾಖಲಿಸಬೇಕು. ಇತ್ತೀಚೆಗೆ ಸೈಬರ್ ವಂಚನೆಗೆ ಅಪರಾಧಿಗಳು ಹೊಸ ಹೊಸ ವಿಧಾನ, ತಂತ್ರಗಳನ್ನು ಬಳಸುತ್ತಿದ್ದಾರೆ. ಸಾರ್ವಜನಿಕರು ಜಾಗರೂಕರಾಗಿರಬೇಕು. ಸಣ್ಣ ಆಮಿಷಕ್ಕೆ ಒಳಗಾಗಿ ಶ್ರಮದ ದುಡ್ಡು ಕಳೆದುಕೊಳ್ಳಬಾರದು' ಎಂಬುದು ನಗರ ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ. ಕಿವಿಮಾತು ಹೇಳಿದ್ದಾರೆ.

# ಕಲಬುರಗಿಯಲ್ಲಿ ಶಕ್ತಿದೇವತೆ ಆರಾಧನೆ ವೈಭವ

**ಕಲಬುರಗಿ, ಅ. 13:** ನವರಾತ್ರಿ ಅಂಗವಾಗಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ನವದುರ್ಗೆಯರ ಆರಾಧನೆಗೆ ಘಟಸ್ಥಾಪನೆಯೊಂದಿಗೆ ಚಾಲನೆ ದೊರೆತಿದೆ. ಮೊದಲೆಲ್ಲ ಸಾರ್ವಜನಿಕ ಗಣೇಶ ಮೂರ್ತಿಗಳ ಸ್ಥಾಪನೆ ನಡೆಯುತ್ತಿತ್ತು. ಇತ್ತೀಚೆಗೆ ಸಾರ್ವಜನಿಕ ದೇವಿಯ ಸ್ಥಾಪನೆಯೂ ಜಿಲ್ಲೆಯಾದ್ಯಂತ ಸಂಘಗಳನ್ನು ಕಟ್ಟಿಕೊಂಡು ನವರತ್ರಿ, ಘಟಸ್ಥಾಪನೆ ದೀಪೋತ್ಸವ ಮತ್ತು ದೇವಿಯ ಪ್ರತಿಮೆಗಳ ಸ್ಥಾಪನೆ ನಡೆಯುತ್ತಿದೆ. ಒಂಭತ್ತು ದಿನ, ಏಳು ದಿನ, ಐದು ದಿನ ಮತ್ತು ಮೂರು ದಿನಗಳ ವರೆಗೆ ದುರ್ಗೆಯ ಮೂರ್ತಿ ಸ್ಥಾಪಿಸಿ ಹಗಲೂ ರಾತ್ರಿ ದೀಪಾರಾಧನೆ ನಡೆಯುತ್ತದೆ.

ಈ ಸಂದರ್ಭದಲ್ಲಿ ದುರ್ಗೆಯ ಸ್ಥಾಪನೆಯ ನಂತರ ಪ್ರತಿಮೆಯ ಪಕ್ಕದಲ್ಲಿ ದೀಪ ಮತ್ತು ಸ್ವಚ್ಛ ಕಪ್ಪು ಮಣ್ಣು ತಂದು, ಪಾತ್ರೆಯಲ್ಲಿ ಹಾಕಿ ಒಂಬತ್ತು ತರಹದ ಧಾನ್ಯಗಳನ್ನು ಅದರಲ್ಲಿ ಬಿತ್ತಲಾಗಿತ್ತು. ನವ ದುರ್ಗೆಯ ಅವತಾರದ ಪ್ರತೀಕವಾಗಿ ಜೋಳ, ಕಡಲೆ, ಭತ್ತ, ಎಳ್ಳು, ಶೇಂಗಾ, ಸೂರ್ಯಕಾಂತಿ, ತೊಗರಿ, ಹೆಸರು, ಉದ್ದು... ಹೀಗೆ ಪ್ರಮುಖ ಬೆಳೆಗಳ ಬೀಜಗಳನ್ನು ಘಟಸ್ಥಾಪನೆಗೆ ಬಳಸಲಾಗುತ್ತದೆ. ಬಳಿಕ ನವಧಾನ್ಯಗಳಿಗೆ ನೀರುಣಿಸಿ ನಂದಾದೀಪ ಬೆಳಗುವರು.



ದೇವಿಯ ಆರಾಧನೆಗಾಗಿ ಸಾರ್ವಜನಿಕ ಉದ್ಯಾನದ ಪ್ರದೇಶದ ಅಪ್ಪ ಕೆರೆ ಪಕ್ಕದಲ್ಲಿರುವ ಯಲ್ಲಮ್ಮ ದೇವಿ ದೇವಸ್ಥಾನ ಸೇರಿದಂತೆ ಶಹಾಬಜಾರ್‌ನಲ್ಲಿರುವ ಅಂಬಾಭವಾನಿ ಮಂದಿರ, ಲಾಲಗಿರಿಯ ಅಂಬಾ ಭವಾನಿ ಮಂದಿರವೂ ಸೇರಿದಂತೆ ವಿವಿದೆಡೆ ದೇವಸ್ಥಾನಗಳು ಮತ್ತು ಸಾರ್ವಜನಿಕ ದುರ್ಗಾ ಸ್ಥಾಪನೆ ಪೆಂಡಾಲಗಳನ್ನು ಅತ್ಯಾಕರ್ಷಕವಾಗಿ ಸಿಂಗರಿಸಲಾಗಿದೆ.

# ರಷ್ಯಾ ತೈಲ ಒಪ್ಪಂದ ಸಮರ್ಥಿಸಿದ ಡೊನಾಲ್ಡ್ ಟ್ರಂಪ್

**ವಾಷಿಂಗ್ಟನ್, ಅ.13:** ಉಭಯ ಪಕ್ಷೀಯ ಟೀಕೆಗಳ ನಡುವೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಳೆದ ವಾರ ಅಮೆರಿಕಕ್ಕೆ ರಷ್ಯಾದ ಡೀಸೆಲ್ ಸರಬರಾಜನ್ನು ತಾತ್ಕಾಲಿಕವಾಗಿ ಅನುಮತಿಸುವ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ, ಅವರ ಆಡಳಿತವು ಅಮೆರಿಕಾದ ಜನರ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸಿದೆ ಎಂದು ಹೇಳಿದ್ದಾರೆ.



ತಮ್ಮ ಟ್ರೂತ್ ಸೋಶಿಯಲ್ ಪ್ಲಾಟ್‌ಫಾರ್ಮ್‌ನಲ್ಲಿ, ಯುರೋಪಿಯನ್ ಒಕ್ಕೂಟದ ರಷ್ಯಾದ ಇಂಧನ ಖರೀದಿಗಳನ್ನು ನಿರ್ಲಕ್ಷಿಸಿದ್ದಕ್ಕಾಗಿ ಮಾಧ್ಯಮವು ಬೂಟಾಟಿಕೆಯಾಗಿದೆ ಎಂದು ಯುಎಸ್ ನಾಯಕ ಆರೋಪಿಸಿದ್ದಾರೆ.

"ಯುರೋಪಿಯನ್ ಒಕ್ಕೂಟವು ರಷ್ಯಾಕ್ಕೆ ಇಂಧನಕ್ಕಾಗಿ 250 ಶತಕೋಟಿ ಡಾಲರ್‌ಗಳನ್ನು ಪಾವತಿಸಿತು ಮತ್ತು ನಕಲಿ ಸುದ್ದಿ ಮಾಧ್ಯಮಗಳು ಆ ಕಥೆಯ ಹತ್ತಿರ ಬರಲು ಬಯಸುವುದಿಲ್ಲ ಎಂದು ಟ್ರಂಪ್ ಬರೆದಿದ್ದಾರೆ.

ಟ್ರಂಪ್ ನಿರ್ದಿಷ್ಟಪಡಿಸದಿದ್ದರೂ, 2022ರಲ್ಲಿ ಉಕ್ರೇನ್ ಆಕ್ರಮಣದ ನಂತರ ಯುರೋಪಿಯನ್ ಒಕ್ಕೂಟವು ರಷ್ಯಾದಿಂದ ಇಂಧನಗಳ ಆಮದಿನ ಮೇಲೆ ಎಷ್ಟು ಖರ್ಚು ಮಾಡಿದೆ ಎಂದು ಅವರ ಅಂಕಿ ಅಂಶವು ಸ್ಥೂಲವಾಗಿ ಅಂದಾಜು ಮಾಡುತ್ತದೆ. ಏತನ್ಮಧ್ಯೆ, ಯುರೋಪಿಯನ್ ಕಮಿಷನ್ ರಷ್ಯಾದ ಇಂಧನದ ಮೇಲಿನ ಅವಲಂಬನೆಯನ್ನು ಹಂತಹಂತವಾಗಿ ಕಡಿಮೆ ಮಾಡುವ ಯೋಜನೆಯನ್ನು ಪ್ರಾರಂಭಿಸಿದೆ.

ತಮ್ಮ ಇಂಧನ ನೀತಿಯನ್ನು ಸಮರ್ಥಿಸಿಕೊಂಡ ಟ್ರಂಪ್, "ನಾನು ಅಮೆರಿಕಾದ ಜನರಿಗೆ ಸರಿಯಾದ ಆಯ್ಕೆ ಮಾಡಿದ್ದೇನೆ – ಯಾವಾಗಲೂ, ಅಮೆರಿಕ ಮೊದಲು" ಎಂದು ಹೇಳಿದರು. ರಷ್ಯಾದಿಂದ ಡೀಸೆಲ್ ಖರೀದಿಸಲು ಟ್ರಂಪ್ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜೊತೆ ಮಾಡಿಕೊಂಡ ಒಪ್ಪಂದವು ಅಮೆರಿಕ, ಉಕ್ರೇನ್ ಮತ್ತು ಯುರೋಪಿನಾದ್ಯಂತ ಅಧಿಕಾರಿಗಳನ್ನು ನಿರಾಶೆಗೊಳಿಸಿತು.

ನಾಲ್ವರು ರಿಪಬ್ಲಿಕನ್ನರು ಸೇರಿದಂತೆ ಆರು ಅಮೆರಿಕದ ಸೆನೆಟರ್‌ಗಳ ದ್ವಿಪಕ್ಷೀಯ ಗುಂಪು, ಟ್ರಂಪ್ ಆಡಳಿತವು ಒಪ್ಪಂದದ ಬಗ್ಗೆ "ತಕ್ಷಣವೇ ಮಾರ್ಗವನ್ನು ಹಿಮ್ಮೆಟ್ಟಿಸಬೇಕು" ಎಂದು ಕರೆ ನೀಡಿದೆ, ರಷ್ಯಾ ಉಕ್ರೇನಿಯನ್ ನಾಗರಿಕರನ್ನು ಕೊಲ್ಲುತ್ತಿರುವಾಗ ಅಮೆರಿಕವು "ಪುಟಿನ್‌ಗೆ ಆರ್ಥಿಕ ಜೀವರಕ್ಷಕವನ್ನು ಒದಗಿಸಬಾರದು" ಎಂದು ಹೇಳಿದೆ.

ಇತರ ರಿಪಬ್ಲಿಕನ್ನರು ಕೂಡ ಟ್ರಂಪ್ ಅವರ ಯೋಜನೆಯ ಬಗ್ಗೆ ಹುಬ್ಬೇರಿಸಿದ್ದಾರೆ. ಟೆಕ್ಸಾಸ್ನ ರಿಪಬ್ಲಿಕನ್ ಪ್ರತಿನಿಧಿ ಮೈಕೆಲ್ ಮೆಕ್ಕಾಲ್, "ಡೀಸೆಲ್ ಬೆಲೆಗಳನ್ನು ಕಡಿಮೆ ಮಾಡುವ ಬಯಕೆಯನ್ನು ನಾನು ಅರ್ಥಮಾಡಿಕೊಂಡಿದ್ದರೂ, ರಷ್ಯಾದ ತೈಲದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದರಿಂದ ಕ್ರೆಮ್ಲಿನ್‌ನ ಯುದ್ಧ ಯಂತ್ರಕ್ಕೆ ಮಾತ್ರ ಹಣಕಾಸು ಒದಗಿಸುತ್ತದೆ – ಇತ್ತೀಚಿನ ದಿನಗಳಲ್ಲಿ ನಾವು ನೋಡಿದಂತೆ ಹೆಚ್ಚಿನ ಹಿಂಸಾಚಾರ ಮತ್ತು ವಿನಾಶವನ್ನು ಹೆಚ್ಚಿಸುತ್ತದೆ" ಎಂದು ಹೇಳಿದರು.

ಉಕ್ರೇನ್‌ಗೆ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡುವ ಸಮಯ ಬಂದಿದೆ ಮತ್ತು ಯುದ್ಧವನ್ನು ಕೊನೆಗೊಳಿಸಲು ಝೆಲೆನ್ಸ್ಕಿ ಸಾಕಷ್ಟು ಮಾಡಿಲ್ಲ ಎಂಬ ಟ್ರಂಪ್ ಅವರ ಹೇಳಿಕೆಯನ್ನು ಯುರೋಪಿಯನ್ ಒಕ್ಕೂಟದ ವಿದೇಶಾಂಗ ನೀತಿ ಮುಖ್ಯಸ್ಥೆ ಕಾಜಾ ಕಲ್ಲಾಸ್ ಕೂಡ ತಳ್ಳಿಹಾಕಿದರು. ಉಕ್ರೇನ್‌ನಲ್ಲಿ ಚುನಾವಣೆಗಳನ್ನು ನಡೆಸುವ ಸಮಯ ಇದಲ್ಲ, ಕನಿಷ್ಠ ಕದನ ವಿರಾಮವಿಲ್ಲದೆಯೂ ಸಹ ಎಂದು ಅವರು ಹೇಳಿದರು.

# ಮುಲ್ತಾನ್ ಬಳಿ ಹಳಿತಪ್ಪಿದ ರೈಲು: 5 ಸಾವು, 30ಕ್ಕೂ ಹೆಚ್ಚು ಮಂದಿಗೆ ಗಾಯ

**ಮುಲ್ತಾನ್ (ಪಾಕಿಸ್ತಾನ), ಅ.13:** ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಮಂಗಳವಾರ ಮುಂಜಾನೆ ಸಂಭವಿಸಿದ ರೈಲು ಅಪಘಾತದಲ್ಲಿ ಕನಿಷ್ಠ ಐದು ಮಂದಿ ಮೃತಪಟಿದ್ದು, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.



ಕರಾವಳಿ ನಗರವಾದ ಕರಾಚಿಯಿಂದ ವಾಯುವ್ಯ ನಗರವಾದ ಪೇಶಾವರಕ್ಕೆ ತೆರಳುತ್ತಿದ್ದ ರೆಹಮಾನ್ ಬಾಬಾ ಎಕ್ಸ್‌ಪ್ರೆಸ್ ರೈಲು ಪಂಜಾಬ್‌ನ ಶೇರ್ ಶಾ ಬಳಿ ಹಳಿ ತಪ್ಪಿ ದುರ್ಘಟನೆ ಸಂಭವಿಸಿದೆ. ಘಟನಾ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ಪಾಕಿಸ್ತಾನ ರೈಲ್ವೆಯ ವಕ್ತಾರ ಕಲೀಮ್ ಅಕ್ತರ್ ತಿಳಿಸಿದ್ದಾರೆ. ರಕ್ಷಣಾ ಸಿಬ್ಬಂದಿ ಐದು ಶವಗಳನ್ನು ಹೊರತೆಗೆದಿದ್ದು, ರೈಲಿನ 14 ಬೋಗಿಗಳಿಂದ ಗಾಯಗೊಂಡವರನ್ನು ಸುರಕ್ಷಿತವಾಗಿ ಹೊರತರಲಾಗಿದೆ. ಗಾಯಗೊಂಡವರನ್ನು ಚಿಕಿತ್ಸೆಗಾಗಿ ಮುಲ್ತಾನ್‌ನ ನಿಶ್ತಾರ್ ಆಸ್ಪತ್ರೆಗೆ ದಾಖಲಿಸಲಾಗಿದೆ.ಈ ಅಪಘಾತದ ಕುರಿತು ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಮತ್ತು ಪ್ರಧಾನಿ ಶೆಹಬಾಜ್ ಶರೀಫ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಗಾಯಗೊಂಡವರಿಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ದೊರೆಯುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ದಶಕಗಳ ಕಾಲ ಹೂಡಿಕೆಯ ಕೊರತೆ, ಹಳಿದು ಹೋದ ಹಳಿಗಳು ಮತ್ತು ಹಳೆಯ ಸಿಗ್ನಲಿಂಗ್ ವ್ಯವಸ್ಥೆಗಳಿಂದ ಬಳಲುತ್ತಿರುವ ಪಾಕಿಸ್ತಾನದಲ್ಲಿ ರೈಲು ಅಪಘಾತಗಳು ಸಾಮಾನ್ಯವಾಗಿವೆ.

# ಸೌದಿ ಮೇಲೆ ಹೌತಿ ದಾಳಿ: ಮನೆಗಳಿಂದ ಹೊರಬರದಂತೆ ಭಾರತೀಯರಿಗೆ ಕೇಂದ್ರ ಸೂಚನೆ

**ಸೌದಿ ಅರೇಬಿಯಾ, ಅ.13:** ಇರಾನ್ ಬೆಂಬಲಿತ ಯೆಮೆನ್‌ನ ಹೌತಿ ಬಂಡುಕೋರರು ನಾಗರಿಕ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡು ಸೌದಿ ಅರೇಬಿಯಾದ ಮೇಲೆ ದಾಳಿ ನಡೆಸುತ್ತಿರುವ ನಡುವೆ ಗಲ್ಫ್ ದೇಶದಲ್ಲಿನ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸೌದಿ ಅರೇಬಿಯಾದಲ್ಲಿ ವಾಸಿಸುವ ತನ್ನ ನಾಗರಿಕರು ಶಾಂತ ಮತ್ತು ಜಾಗರೂಕರಾಗಿರಲು ಭಾರತ ಮಂಗಳವಾರ ಹೊಸದಾಗಿ ಸೂಚನೆ ಹೊರಡಿಸಿದೆ.

ವಾಯುದಾಳಿಗಳ ಸಂದರ್ಭದಲ್ಲಿ ಅವರು ಮನೆಯೊಳಗೆ ಇರಲು ಮತ್ತು ಅಧಿಕೃತ ಮಾರ್ಗಗಳ ಮೂಲಕ ಸ್ಥಳೀಯ ಅಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸುವಂತೆ ತಿಳಿಸಿದೆ.

ರಿಯಾದ್ ವಿಮಾನ ನಿಲ್ದಾಣದ ದಾಳಿಯಲ್ಲಿ ಮೃತಪಟ್ಟ ಭಾರತೀಯ ನಾಗರಿಕನ ಅಂತ್ಯಕ್ರಿಯೆಯಲ್ಲಿ ಸೌದಿ ಅರೇಬಿಯಾದ ಭಾರತೀಯ ರಾಯಭಾರಿ ಭಾಗವಹಿಸಿದ್ದರು. ಅವರ ದುಃಖಿತ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸೋಮವಾರ ತಡರಾತ್ರಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಅನ್ನು ಹಂಚಿಕೊಂಡಿದ್ದು, ಅಂತ್ಯಕ್ರಿಯೆಯ ಬಗ್ಗೆ ಮಾಹಿತಿಯನ್ನು ಹಂಚಿಕೊಂಡಿದೆ. ರಾಯಭಾರಿ ವಿಪುಲ್ ಮತ್ತು ರಾಯಭಾರ ಕಚೇರಿ ಅಧಿಕಾರಿಗಳು ಮೃತ ಮೊಹಮ್ಮದ್ ಯೂಸುಫ್ ಅಲಿ ಅವರ ಕುಟುಂಬ ಮತ್ತು ಸ್ನೇಹಿತರೊಂದಿಗೆ ಸಂತಾಪ ಸಭೆಯಲ್ಲಿ ಭಾಗವಹಿಸಿದ್ದರು ಎಂದು ರಾಯಭಾರಿ ಕಚೇರಿ ತಿಳಿಸಿದೆ.



ಮೂರು ನಗರಗಳಿಗೆ ಸಂಚಾರ ರದ್ದುಗೊಳಿಸಿದ ಎತಿಹಾದ್ ಏರ್‌ವೇಸ್

ಸೌದಿ ಅರೇಬಿಯಾದಲ್ಲಿ ಹೌತಿ ಬಂಡುಕೋರರ ನಿರಂತರ ದಾಳಿಯ ನಡುವೆ, ಪ್ರಾದೇಶಿಕ ಉದ್ವಿಗ್ನತೆಯಿಂದಾಗಿ ಎತಿಹಾದ್ ಏರ್‌ವೇಸ್ ಸೌದಿ ಅರೇಬಿಯಾದ ಮೂರು ನಗರಗಳಿಗೆ ತನ್ನ ವಿಮಾನಗಳನ್ನು ರದ್ದುಗೊಳಿಸಿದೆ. ಅಬುಧಾಬಿಯಿಂದ ಸೌದಿ ಅರೇಬಿಯಾದ ರಾಜಧಾನಿ ರಿಯಾದ್, ಜೆಡ್ಡಾ ಮತ್ತು ದಮ್ಮಾಮ್‌ಗೆ ಕಾರ್ಯನಿರ್ವಹಿಸುವ ವಿಮಾನಗಳನ್ನು ರದ್ದುಗೊಳಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ. ಕಂಪನಿಯ ಪ್ರಕಾರ, ಅಬುಧಾಬಿ ಮತ್ತು ರಿಯಾದ್ ನಡುವಿನ ಎಲ್ಲಾ ವಿಮಾನಗಳು ಅಕ್ಟೋಬರ್ 19 ರವರೆಗೆ ರದ್ದಾಗಿರುತ್ತವೆ. ಗಲ್ಫ್ ದೇಶದ ನಗರಗಳನ್ನು ಸಂಪರ್ಕಿಸುವ 'ಇಂಡಿಗೋ', 'ಏರ್ ಇಂಡಿಯಾ ಎಕ್ಸ್‌ಪ್ರೆಸ್', 'ಏರ್ ಇಂಡಿಯಾ' ಮತ್ತು 'ಅಕಾಸಾ ಏರ್' ವಿಮಾನಗಳನ್ನು ಅಕ್ಟೋಬರ್ 17 ರವರೆಗೆ ರದ್ದುಗೊಳಿಸಲಾಗಿದೆ ಎಂದು ಭಾರತ ಘೋಷಿಸಿವೆ. ಇತ್ತೀಚಿನ ದಿನಗಳಲ್ಲಿ, ರಿಯಾದ್ ವಿಮಾನ ನಿಲ್ದಾಣ ಸೇರಿದಂತೆ ಸೌದಿ ಅರೇಬಿಯಾದ ವಿವಿಧ ಸ್ಥಳಗಳಲ್ಲಿ ಹಲವಾರು ದಾಳಿಗಳು ನಡೆದಿವೆ.

**ಸೌದಿ ಕ್ರೌನ್ ಪ್ರಿನ್ಸ್‌ಗೆ ಹೆಚ್ಚಿನ ಭದ್ರತೆ**

ಯೆಮೆನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಸೌದಿ ಅರೇಬಿಯಾದ ನಾಗರಿಕ ಹಾಗೂ ಸಾರಿಗೆ ಮೂಲಸೌಕರ್ಯಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ತೀವ್ರಗೊಳಿಸಿರುವ ಹಿನ್ನೆಲೆಯಲ್ಲಿ, ಸೌದಿ ಕ್ರೌನ್ ಪ್ರಿನ್ಸ್ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಭದ್ರತೆಯನ್ನು ಹೆಚ್ಚಿಸಲಾಗಿದೆ. ಸಂಭಾವ್ಯ ದಾಳಿಗಳ ಮುನ್ನೆಚ್ಚರಿಕೆಯಾಗಿ 41 ವರ್ಷದ ಕ್ರೌನ್ ಪ್ರಿನ್ಸ್ ಅವರನ್ನು ಭೂಗತ ಬಂಕರ್‌ಗಳನ್ನು ಹೊಂದಿರುವ ಅತ್ಯಂತ ಭದ್ರತೆಯುಳ್ಳ ಅರಮನೆಗೆ ಸ್ಥಳಾಂತರಿಸಲಾಗಿದೆ.

# ವಾಷಿಂಗ್ಟನ್ ವಿಮಾನ ನಿಲ್ದಾಣದಲ್ಲಿ ಯೂನಸ್ ವಿರುದ್ಧ ಬಾಂಗ್ಲಾ ವಲಸಿಗರ ಆಕ್ರೋಶ



**ವಾಷಿಂಗ್ಟನ್, ಅ.13:** ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮಾಜಿ ಮುಖ್ಯಸ್ಥ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ಮುಹಮ್ಮದ್ ಯೂನಸ್ ನ್ಯೂಯಾರ್ಕ್‌ನ ಜಾನ್ ಎಫ್. ಕೆನಡಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಾಂಗ್ಲಾದೇಶದ ವಲಸಿಗರಿಂದ ತೀವ್ರ ಪ್ರತಿಭಟನೆ ಎದುರಿಸಬೇಕಾಯಿತು. ವಿಮಾನ ನಿಲ್ದಾಣದಲ್ಲಿ ಯೂನಸ್‌ನನ್ನು ಸುತ್ತುವರೆದ ವಲಸಿಗರ ಗುಂಪು ಗಂಭೀರ ಆರೋಪಗಳನ್ನು ಮಾಡಿತು.

ಕೆಲವು ಪ್ರತಿಭಟನಾಕಾರರು ಅವರನ್ನು ಭಯೋತ್ಪಾದಕ ಎಂದು ಕರೆದಿದ್ದು ನೀನು ನರಹಂತಕ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿ ಸಿದ್ದೀಯಾ ಎಂದು ಆರೋಪಿಸಿದರು. ಮುಖ್ಯ ಸಲಹೆಗಾರ ಹುದ್ದೆಯಿಂದ ಕೆಳಗಿಳಿದ ನಂತರ ಇದು ಯೂನಸ್ ಮೊದಲ ವಿದೇಶ ಪ್ರವಾಸವಾಗಿತ್ತು. ಏತನ್ಮಧ್ಯೆ, ಬಾಂಗ್ಲಾದೇಶ ಸರ್ಕಾರದ ಸಲಹೆಗಾರ ಜಾಹಿದ್ ಉರ್ ರೆಹಮಾನ್ ಅವರು ಈ ವಿಷಯದಲ್ಲಿ ಪ್ರತಿಭಟನೆ ನಡೆಸುವವರ ವಿರುದ್ಧ ಢಾಕಾ ಕಾನೂನು ಕ್ರಮ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿರುವ ವೀಡಿಯೊದಲ್ಲಿ, ಕತಾರ್ ಏರ್‌ವೇಸ್ ವಿಮಾನದಲ್ಲಿ ದೋಹಾ ಮೂಲಕ ಅಮೆರಿಕಕ್ಕೆ ಯೂನಸ್ ಟರ್ಮಿನಲ್ 8ಗೆ ಬಂದಾಗ ಈ ಘಟನೆ ನಡೆದಿದೆ. ಯೂನಸ್ ಅವರನ್ನು ವೀಲ್‌ಚೇರ್‌ನಲ್ಲಿ ಹೊರಗೆ ಕರೆದೊಯ್ಯುತ್ತಿದ್ದಾಗ ಅಲ್ಲೇ ಇದ್ದ ಗುಂಪೊಂದು ವಾಪಸ್ ಹೋಗುವಂತೆ ಘೋಷಣೆ ಕೂಗಿತು. ಸಾವಿರಾರು ಪೊಲೀಸ್ ಅಧಿಕಾರಿಗಳ ಸಾವಿಗೆ ಮತ್ತು 200,000 ಜನರ ಬಂಧನಕ್ಕೆ ಕಾರಣ ನೀನು ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು. ಕೂಡಲೇ ಧಾವಿಸಿದ ಭದ್ರತಾ ಸಿಬ್ಬಂದಿ ಯೂನಸ್ ಮತ್ತು ಅವರ ಸಹೋದ್ಯೋಗಿ ಲಾಮಿಯಾ ಮೋರ್ಶೆಡ್ ಅವರನ್ನು ವಿಮಾನ ನಿಲ್ದಾಣದೊಳಗೆ ಕರೆದೊಯ್ದರು. ಆದರೆ ತಮ್ಮ ವಿರುದ್ಧ ನಡೆದ ಘಟನೆಗೆ ಯೂನಸ್ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಪ್ರತಿಭಟ ನಾಕಾರರು ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಪಕ್ಷವಾದ ಅವಾಮಿ ಲೀಗ್‌ನ ಬೆಂಬಲಿಗರು ಎಂದು ಶಂಕೆ ವ್ಯಕ್ತಪಡಿಸಲಾಗಿದೆ.

# ಮೈಸೂರು ರಾಯಲ್ಸ್ ತಂಡಕ್ಕೆ ಕೆಪಿಪಿಎಲ್ ಮೊದಲ ಟ್ರೋಫಿ ಗರಿ




**ಬೆಂಗಳೂರು, ಆ.13:** ಕರ್ನಾಟಕ ಪಿಕ್ಕಲ್‌ಬಾಲ್ ಪ್ರೀಮಿಯರ್ ಲೀಗ್ (ಕೆಪಿಪಿಎಲ್) ಮೊದಲ ಆವೃತ್ತಿಯು ರೋಚಕ ಅಂತ್ಯ ಕಂಡಿದ್ದು, ಅತ್ಯಂತ ರೋಮಾಂಚಕಾರಿ ಫೈನಲ್ ಪಂದ್ಯದಲ್ಲಿ ತುಮಕೂರು ಟೈಟಾನ್ಸ್ ತಂಡವನ್ನು ಮಣಿಸಿ 'ಮೈಸೂರು ರಾಯಲ್ಸ್' ತಂಡವು ಚಾಂಪಿಯನ್ ಪಟ್ಟಕ್ಕೇರಿದೆ.

ಬೆಂಗಳೂರಿನ ಜಿಕೆವಿಕೆ ಕ್ರೀಡಾಂಗಣದಲ್ಲಿ 3 ದಿನಗಳ ಕಾಲ ನಡೆದ ಈ ರೋಮಾಂಚಕ ಟೂರ್ನಿಯಲ್ಲಿ ರಾಜ್ಯದ ವಿವಿಧ ನಗರಗಳ ಪ್ರಮುಖ ಫ್ರ್ಯಾಂಚೈಸಿಗಳು ಪಾಲ್ಗೊಂಡಿದ್ದವು.

45 ಗಂಟೆಗಳಿಗೂ ಅಧಿಕ ಕಾಲ ನಡೆದ ಈ ಪಂದ್ಯಾವಳಿಯಲ್ಲಿ ದೇಶದ 50ಕ್ಕೂ ಹೆಚ್ಚು ಶ್ರೇಷ್ಠ ಆಟಗಾರರು ತಮ್ಮ ಚುರುಕಿನ ಆಟದ ಮೂಲಕ ಕ್ರೀಡಾಭಿಮಾನಿಗಳನ್ನು ರಂಜಿಸಿದರು. ಕೇವಲ ಒಂದು ಎಸೆತ ಬಾಕಿ ಇರುವಂತೆ ನಡೆದ ಫೈನಲ್ ಪಂದ್ಯವು ಪ್ರೇಕ್ಷಕರಲ್ಲಿ ಭಾರೀ ರೋಮಾಂಚನ ಮೂಡಿಸಿತು.

ಸಮಾರೋಪ ಸಮಾರಂಭದಲ್ಲಿ ಕನ್ನಡದ ಖ್ಯಾತ ನಟ ಶ್ರೀಮುರಳಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಅತ್ಯುತ್ತಮ ಪುರುಷ ಆಟಗಾರರಾಗಿ ಅರ್ಥವ್ ನೀಮಾ, ಮಹಿಳಾ ಆಟಗಾರ್ತಿಯಾಗಿ ಆಲ್ಯಕಾ ಎಬ್ರಾಹಿಂ ಹಾಗೂ ಮೈಸೂರು ರಾಯಲ್ಸ್ ತಂಡದ ವಂಶಿಕ್ ಕಪಾಡಿಯಾ 'ಮ್ಯಾನ್ ಆಫ್ ದಿ ಟೂರ್ನಮೆಂಟ್' ಪ್ರಶಸ್ತಿ ಪಡೆದರು. ಕರ್ನಾಟಕ ರಾಜ್ಯ ಪಿಕ್ಕಲ್‌ಬಾಲ್ ಅಸೋಸಿಯೇಷನ್ ಸಹಯೋಗದಲ್ಲಿ ನಡೆದ ಈ ಲೀಗ್ ರಾಜ್ಯದಲ್ಲಿ ಹೊಸ ಕ್ರೀಡಾ ಸಂಸ್ಕೃತಿಗೆ ನಾಂದಿ ಹಾಡಿದೆ.

## ರಾಜಧಾನಿ ದೆಹಲಿಯಲ್ಲಿ ಪಟ್ಲ ಯಕ್ಷಸೌರಭ ಸಂಭ್ರಮ: ಜ್ವಾಲಾ ಪ್ರತಾಪ ಯಕ್ಷಗಾನ ಪ್ರದರ್ಶನ

# ಯಕ್ಷಗಾನ ಅಖಿಲ ಭಾರತೀಯ ಮಟ್ಟದ ಕಲೆಯಾಗಲಿ: ಹಿರಿಯ ಐಎಎಸ್ ಅಧಿಕಾರಿ ಎಚ್.ರಾಜೇಶ್ ಪ್ರಸಾದ್ ಆಶಯ

**ನವದೆಹಲಿ, ಅ.13:** ಕರಾವಳಿಯ ಹೆಮ್ಮೆಯ ಕಲೆಯಾದ ಯಕ್ಷಗಾನವು ಕೇವಲ ಕರಾವಳಿ ಕರ್ನಾಟಕ ಅಥವಾ ಕನ್ನಡಿಗರಿಗೆ ಮಾತ್ರ ಸೀಮಿತವಾಗಿರದೆ, ದೇಶದ ಇತರ ಭಾಷಿಕರಿಗೂ ತಲುಪಿ ಅಖಿಲ ಭಾರತೀಯ ಮಟ್ಟದ ಕಲೆಯಾಗಿ ಬೆಳೆಯಬೇಕು ಎಂದು ಚಂಡೀಗಢ ಕೇಂದ್ರಾಡಳಿತ ಪ್ರದೇಶದ ಮುಖ್ಯ ಕಾರ್ಯದರ್ಶಿ ಹಾಗೂ ಹಿರಿಯ ಐಎಎಸ್ ಅಧಿಕಾರಿ ಎಚ್. ರಾಜೇಶ್ ಪ್ರಸಾದ್ ಅಭಿಪ್ರಾಯಪಟ್ಟರು,




ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ (ರಿ.) ದೆಹಲಿ ಘಟಕ ಇವರು ದೆಹಲಿ ಕರ್ನಾಟಕ ಸಂಘ ಮತ್ತು ಬಂಟ್ಸ್ ಕಲ್ಚರಲ್ ಅಸೋಸಿಯೇಷನ್ ದೆಹಲಿ ಇವುಗಳ ಜಂಟಿ ಆಶ್ರಯದಲ್ಲಿ ಮಹಾಲಯ ಅಮಾವಾಸ್ಯೆಯಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪಟ್ಲ ಯಕ್ಷ ಸೌರಭ 2026 ಹಾಗೂ ಜ್ವಾಲಾ ಪ್ರತಾಪ ಯಕ್ಷಗಾನ ಪ್ರದರ್ಶನವನ್ನು ದೀಪ ಪ್ರಜ್ವಲಿಸಿ ಉದ್ಘಾಟಿಸಿ ಮಾತನಾಡಿದರು.

ಯಕ್ಷಗಾನವು ಅತ್ಯಂತ ಸಮೃದ್ಧ ಹಾಗೂ ಪರಿಪೂರ್ಣ ಕಲೆಯಾಗಿದ್ದು, ಕರ್ನಾಟಕದ ಗಡಿ ದಾಟಿ ರಾಷ್ಟ್ರಮಟ್ಟದಲ್ಲಿ ಪಸರಿಸುವ ಅಗಾಧ ಶಕ್ತಿ ಹೊಂದಿದೆ,. ಶ್ರೀನಗರ, ಮಾತಾ ವೈಷ್ಣೋದೇವಿ ಸನ್ನಿಧಿ ಹಾಗೂ ಇತ್ತೀಚೆಗೆ ಚಂಡೀಗಢದಲ್ಲಿ ಪಟ್ಲ ಫೌಂಡೇಶನ್ ಪ್ರಸ್ತುತಪಡಿಸಿದ ಹಿಂದಿ ಯಕ್ಷಗಾನಕ್ಕೆ ಅಲ್ಲಿನ ರಾಜ್ಯಪಾಲರು, ಸೇನಾಧಿಕಾರಿಗಳು, ಗಣ್ಯರು ಹಾಗೂ ಸಾರ್ವಜನಿಕರಿಂದ ಅಭೂತಪೂರ್ವ ಮೆಚ್ಚುಗೆ ವ್ಯಕ್ತವಾಗಿದೆ,,. ಈ ವಿಶಿಷ್ಟ ಕಲೆಯನ್ನು ದೇಶದ ಎಲ್ಲ ರಾಜ್ಯಗಳಿಗೂ ಕೊಂಡೊಯ್ಯಲು ಇತರ ರಾಜ್ಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ಮೂಲದ ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳು ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು. ಅಲ್ಲದೆ, ಪಟ್ಲ ಫೌಂಡೇಶನ್ ವತಿಯಿಂದ ಕಲಾವಿದರ ಕ್ಷೇಮಾಭಿವೃದ್ಧಿಗಾಗಿ ನಡೆಯುತ್ತಿರುವ ವಸತಿ ನಿರ್ಮಾಣ, ವಿಮೆ, ವೈದ್ಯಕೀಯ ನೆರವು ಹಾಗೂ 20 ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಯಕ್ಷ ಶಿಕ್ಷಣ ನೀಡುತ್ತಿರುವ ಸಮಾಜಮುಖಿ ಕಳಕಳಿಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

ಕಾರ್ಯಕ್ರಮದ ಮುಖ್ಯ ಸಂಚಾಲಕ ಹಾಗೂ ಫೌಂಡೇಶನ್ ಸಂಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ಮಾತನಾಡಿ, ಯಕ್ಷಗಾನವು ಕೇವಲ ಮನರಂಜನೆಯಲ್ಲದೆ ಪೀಳಿಗೆಗೆ ಸಂಸ್ಕಾರ ನೀಡುವ ಮಾಧ್ಯಮವಾಗಿದೆ, ರಂಗದ ಮುಂಭಾಗದ ವೇಷಧಾರಿಗಳಷ್ಟೇ ಅಲ್ಲದೆ, ಇಡೀ ರಾತ್ರಿ ನಿದ್ದೆಗೆಟ್ಟು ರಂಗಸ್ಥಳ ನಿರ್ಮಿಸುವ ನೇಪಥ್ಯದ ಕಾರ್ಮಿಕರ ಶ್ರಮವೂ ದೊಡ್ಡದಾಗಿದ್ದು, ಅವರನ್ನು ಗುರುತಿಸಿ ಗೌರವಿಸುವುದು ನಮ್ಮ ಆದ್ಯ ಕರ್ತವ್ಯ ಎಂದರು.

ಆರ್.ಕೆ. ಪುರಂ ಶಾಸಕ ಅನಿಲ್ ಕುಮಾರ್ ಶರ್ಮಾ ಮಾತನಾಡಿ, ರಾಜಧಾನಿಯಲ್ಲಿ ಕನ್ನಡಿಗರು ತಮ್ಮ ಶ್ರೀಮಂತ ಸಂಸ್ಕೃತಿಯನ್ನು ಜೀವಂತವಾಗಿರಿಸಿಕೊಂಡು ಒಗ್ಗಟ್ಟಿನಿಂದ ಮುನ್ನಡೆಸುತ್ತಿರುವುದು ಪ್ರಶಂಸನೀಯ ಎಂದರು.

ಜೆಸಿಬಿ ಇಂಡಿಯಾ ಲಿಮಿಟೆಡ್‌ನ ಎಂಡಿ ಮತ್ತು ಸಿಇಒ ದೀಪಕ್ ಶೆಟ್ಟಿ ಅವರು, ವೃತ್ತಿಜೀವನದ ಒತ್ತಡದ ನಡುವೆ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮ ಬೇರುಗಳೊಂದಿಗೆ ಮರುಸಂಪರ್ಕ ಸಾಧಿಸಲು ಕಲ್ಚರಲ್ ಚಾರ್ಜ್ ಒದಗಿಸುತ್ತವೆ ಎಂದು ಬಣ್ಣಿಸಿದರು. ಕರ್ನಾಟಕ ಬ್ಯಾಂಕ್ ಜನರಲ್ ಮ್ಯಾನೇಜರ್ ಬಸವರಾಜ್ ಎಸ್. ದೇಸಳ್ಳಿ ಮಾತನಾಡಿ, ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಗಳನ್ನು ಮುಂದಿನ ಪೀಳಿಗೆಗೆ ದಾಟಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಯಕ್ಷದ್ರುವ ಪಟ್ಲ ಫೌಂಡೇಶನ್ ಬಂಟ್ವಾಳ ಘಟಕದ ಅಧ್ಯಕ್ಷ ಚಂದ್ರಹಾಸ ಶೆಟ್ಟಿ, ಫೌಂಡೇಶನ್ ವತಿಯಿಂದ ಈವರೆಗೆ 15 ಕೋಟಿ ರೂ. ಗಳಿಗೂ ಅಧಿಕ ನೆರವನ್ನು ಕಲಾವಿದರ ಕಲ್ಯಾಣಕ್ಕೆ ವಿನಿಯೋಗಿಸಲಾಗಿದ್ದು, 68 ಬಡ ಕಲಾವಿದರಿಗೆ ಮನೆ ನಿರ್ಮಿಸಿಕೊಡಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮ ಸಂಯೋಜಕ ವಸಂತ್ ಶೆಟ್ಟಿ ಬೆಳ್ಳಾರೆ ಮಾತನಾಡಿ, ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಶಾಲೆಯಲ್ಲಿ ಶೀಘ್ರದಲ್ಲೇ ವಯೋಮಿತಿಯಿಲ್ಲದೆ ಕನ್ನಡಿಗರು ಮತ್ತು ಕನ್ನಡೇತರರಿಗೆ ಯಕ್ಷಗಾನ ಕಲಿಕಾ ತರಗತಿಗಳನ್ನು ಆರಂಭಿಸಲಾಗುವುದು ಎಂದು ಪ್ರಕಟಿಸಿದರು.

ಅಧ್ಯಕ್ಷತೆ ವಹಿಸಿದ್ದ ದೆಹಲಿ ಘಟಕದ ಅಧ್ಯಕ್ಷ ಡಾ. ನಿರಂಜನ್ ನಾಯಕ್, ಔಷಧವು ಶರೀರದ ಆರೋಗ್ಯ ಕಾಪಾಡಿದರೆ, ಕಲೆ ಮತ್ತು ಸಂಸ್ಕೃತಿ ಮನಸ್ಸಿನ ನೆಮ್ಮದಿಯನ್ನು ನೀಡುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಯಕ್ಷಗಾನ ರಂಗದಲ್ಲಿ ಕಳೆದ ನಾಲ್ಕೂವರೆ ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಹಿರಿಯ ರಂಗ ಸಹಾಯಕ, ನೇಪಥ್ಯ ಕಲಾವಿದ ರಘು ಶೆಟ್ಟಿ ನಾಳ ಅವರಿಗೆ ಪಟ್ಲ ಯಕ್ಷ ಸೌರಭ ಗೌರವ ನೀಡಿ ಸನ್ಮಾನಿಸಲಾಯಿತು.

ಕರ್ನಾಟಕ ಬ್ಯಾಂಕ್‌ನ ಜಿಎಂ ಆಗಿ ಬಡ್ತಿ ಹೊಂದಿದ ಬಸವರಾಜ್ ಎಸ್. ದೇಸಳ್ಳಿ ಅವರನ್ನು ಅಭಿನಂದಿಸಲಾಯಿತು.

ಸಭಾ ಕಾರ್ಯಕ್ರಮದ ಬಳಿಕ ಪಟ್ಲ ಸತೀಶ್ ಶೆಟ್ಟಿ ಅವರ ಸುಮಧುರ ಭಾಗವತಿಕೆಯಲ್ಲಿ ಕರಾವಳಿಯ ಪ್ರಸಿದ್ಧ ಕಲಾವಿದರಿಂದ ಮಹಾಭಾರತ ಕಥಾಧಾರಿತ ಜ್ವಾಲಾ ಪ್ರತಾಪ ಯಕ್ಷಗಾನ ಪ್ರದರ್ಶನ ಸಂಪನ್ನಗೊಂಡು ಕಲಾಪ್ರೇಮಿಗಳನ್ನು ಮಂತ್ರಮುಗ್ಧರನ್ನಾಗಿಸಿತು.

ವೇದಿಕೆಯಲ್ಲಿ ಯಕ್ಷದ್ರುವ ಪಟ್ಲ ಫೌಂಡೇಶನ್ ಗೌರವಾಧ್ಯಕ್ಷ ಟಿ. ಶಿವಪ್ರಸಾದ್ ಶೆಟ್ಟಿ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಶೆಟ್ಟಿ, ಕೋಶಾಧಿಕಾರಿ ಕೃಷ್ಣರಾಜ್ ಕೆ.ಎನ್, ಸಂಚಾಲಕ ಕಾರ್ತಿಕ್ ರೈ ಉಪಸ್ಥಿತರಿದ್ದರು. ಪೂಜಾ ಪ್ರದೀಪ್ ಕಾರ್ಯಕ್ರಮ ನಿರ್ವಹಿಸಿದರು, ಪ್ರಶಾಂತ್ ಶೆಟ್ಟಿ ಅವರು ಸ್ವಾಗತಿಸಿದರು, ಅಶ್ವಿತಾ ಶೆಟ್ಟಿ ವಂದಿಸಿದರು.

ವರದಿ: **ಪ್ರಕಾಶ್ ಶೆಟ್ಟಿ ಉಳೆಪಾಡಿ,** ನವದೆಹಲಿ




# ಕೋಚ್ ಜತೆ ಜಟಾಪಟಿ: 6 ತಿಂಗಳು ಬ್ಯಾನ್ ಆಗ್ತಾರಾ ರೊನಾಲ್ಡೊ?

## ಪೋರ್ಚುಗಲ್ ರಾಷ್ಟ್ರೀಯ ತಂಡದಿಂದ ಸ್ಟಾರ್ ಆಟಗಾರ ತಾತ್ಕಾಲಿಕ ಅಮಾನತು

**ಲಿಸ್ಬನ್ (ಪೋರ್ಚುಗಲ್), ಅ.13:** ಪೋರ್ಚುಗಲ್ ಫುಟ್‌ಬಾಲ್ ಫೆಡರೇಶನ್ ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ರಾಷ್ಟ್ರೀಯ ತಂಡದಿಂದ ತಾತ್ಕಾಲಿಕವಾಗಿ ಅಮಾನತುಗೊಳಿಸಿದೆ. ಮುಖ್ಯ ಕೋಚ್ ಜಾರ್ಜ್ ಜೀಸಸ್ ಅವರೊಂದಿಗಿನ ಭಿನ್ನಾಭಿಪ್ರಾಯದ ಹಿನ್ನೆಲೆಯಲ್ಲಿ ರೊನಾಲ್ಡೊ ಅಕ್ಟೋಬರ್ ಆರಂಭದಲ್ಲಿ ತಂಡದ ತರಬೇತಿ ಶಿಬಿರದಿಂದ ಅರ್ಧದಲ್ಲೇ ಹೊರನಡೆದಿದ್ದರು. ಈ ಶಿಸ್ತು ಉಲ್ಲಂಘನೆಯ ಕಾರಣಕ್ಕಾಗಿ ಅವರ ವಿರುದ್ಧ ತುರ್ತು ತನಿಖೆ ಆರಂಭಿಸಲಾಗಿದ್ದು, ಅಂತಿಮ ತೀರ್ಪು ಬರುವವರೆಗೆ ಅಮಾನತು ಜಾರಿಯಲ್ಲಿರಲಿದೆ.

ಯುಇಎಫ್‌ಎ ನೇಷನ್ಸ್ ಲೀಗ್‌ನ ನಾರ್ವೇ ವಿರುದ್ಧದ ಪಂದ್ಯದಲ್ಲಿ ರೊನಾಲ್ಡೊ ಅವರನ್ನು ಆರಂಭಿಕ ಆಟಗಾರರ ಪಟ್ಟಿಯಿಂದ ಹೊರಗಿಡಲಾಗಿತ್ತು. ಪಂದ್ಯದ ದ್ವಿತೀಯಾರ್ಧದಲ್ಲಿ ಕನಿಷ್ಠ 30 ನಿಮಿಷಗಳ ಕಾಲ ಆಡಿಸುವುದಾಗಿ ಕೋಚ್ ಜಾರ್ಜ್ ಜೀಸಸ್ ಭರವಸೆ ನೀಡಿದ್ದರು, ಆದರೆ ವಾರ್ಮ್–ಅಪ್ ಮಾಡಿದ ಹೊರತಾಗಿಯೂ ತಮಗೆ ಆಡಲು ಅವಕಾಶ ನೀಡದೆ ಕೋಚ್ ಮಾತು ತಪ್ಪಿದ್ದಾರೆ ಎಂದು ರೊನಾಲ್ಡೊ ಆರೋಪಿಸಿದ್ದರು. ಹಾಗೂ ಘಟನೆಯಿಂದ ಬೇಸತ್ತ ರೊನಾಲ್ಡೊ, ಡೆನ್ಮಾರ್ಕ್ ವಿರುದ್ಧದ ಮುಂದಿನ ಪಂದ್ಯಕ್ಕೂ ಮುನ್ನವೇ ರಾಷ್ಟ್ರೀಯ ತಂಡದ ಶಿಬಿರವನ್ನು ತೊರೆದು ಹೊರನಡೆದಿದ್ದರು.



ಶಿಬಿರದಿಂದ ಹೊರಬಂದ ನಂತರ ರೊನಾಲ್ಡೊ ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಹಾಕಿ, ಕೋಚ್ ತಮಗೆ ದ್ರೋಹ ಬಗೆದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಆದಾಗ್ಯೂ, ತಾವು ತಂಡವನ್ನು ಮಧ್ಯದಲ್ಲೇ ಬಿಟ್ಟು ಬಂದಿದ್ದಕ್ಕಾಗಿ ಸಹ ಆಟಗಾರರು ಮತ್ತು ಅಭಿಮಾನಿಗಳಲ್ಲಿ ಬಹಿರಂಗವಾಗಿ ಕ್ಷಮೆಯಾಚಿಸಿದ್ದಾರೆ. ಜೊತೆಗೆ, ನಾಯಕನಾದ ಕಾರಣಕ್ಕೆ ತಮಗೆ ಯಾವುದೇ ವಿಶೇಷ ವಿನಾಯಿತಿ ಬೇಡ ಹಾಗೂ ನಿಯಮಗಳ ಪ್ರಕಾರ ಫೆಡರೇಶನ್ ನೀಡುವ ಶಿಕ್ಷೆಯನ್ನು ಸ್ವೀಕರಿಸಲು ಸಿದ್ಧ ಎಂದು ತಿಳಿಸಿದ್ದಾರೆ. ಪೋರ್ಚುಗಲ್ ಫುಟ್‌ಬಾಲ್ ಫೆಡರೇಶನ್ ನಿಯಮಗಳ ಪ್ರಕಾರ, ಯಾವುದೇ ಸೂಕ್ತ ಕಾರಣವಿಲ್ಲದೆ ರಾಷ್ಟ್ರೀಯ ತಂಡದ ಕರ್ತವ್ಯವನ್ನು ಅರ್ಧದಲ್ಲೇ ಕೈಬಿಡುವ ಆಟಗಾರನಿಗೆ 1 ರಿಂದ 6 ತಿಂಗಳವರೆಗೆ ಅಮಾನತು ಮತ್ತು ದಂಡ ವಿಧಿಸಲು ಅವಕಾಶವಿದೆ. ಅದರಲ್ಲೂ, ಈಗ ಜಾರಿಯಾಗಿರುವ ಅಮಾನತು ಕೇವಲ ಪೋರ್ಚುಗಲ್ ರಾಷ್ಟ್ರೀಯ ತಂಡಕ್ಕೆ ಮಾತ್ರ ಅನ್ವಯಿಸುತ್ತದೆ. ಅದರಂತೆ, ಪ್ರಸ್ತುತ ಅವರು ತಮ್ಮ ಸೌದಿ ಅರೇಬಿಯಾದ ಅಲ್–ನಾಸರ್ ಕ್ಲಬ್ ತಂಡಕ್ಕೆ ಮರಳಿದ್ದು, ಅಲ್ಲಿ ತಮ್ಮ ಆಟವನ್ನು ಮುಂದುವರಿಸಿದ್ದಾರೆ.

ಏತನ್ಮಧ್ಯೆ, 41 ವರ್ಷದ ರೊನಾಲ್ಡೊ ತಾತ್ಕಾಲಿಕ ಅಮಾನತು ಎದುರಿಸುತ್ತಿದ್ದರೂ, ಸದ್ಯಕ್ಕೆ ಅಂತರರಾಷ್ಟ್ರೀಯ ಫುಟ್‌ಬಾಲ್‌ನಿಂದ ನಿವೃತ್ತಿ ಹೊಂದುವ ಯಾವುದೇ ಆಲೋಚನೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅಮಾನತು ಅವಧಿ ಮುಗಿದ ಬಳಿಕ ಮತ್ತೆ ದೇಶಕ್ಕಾಗಿ ಆಡುವುದಾಗಿ ಅವರು ಹೇಳಿದ್ದಾರೆ.